بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.


## ಅಲ್ಲಾಹನ ಉಪದೇಶ

### ಅಲ್ಲಾಹನ ಸೃಷ್ಟಿಯೊಂದಿಗೆ ಸಹಾನುಭೂತಿ

وَ اعۡبُدُوا اللّٰہَ وَ لَا تُشۡرِکُوۡا بِہٖ شَیۡئًا وَّ بِالۡوَالِدَیۡنِ اِحۡسَانًا وَّ بِذِی الۡقُرۡبٰی وَ الۡیَتٰمٰی وَ الۡمَسٰکِیۡنِ وَ الۡجَارِ ذِی الۡقُرۡبٰی وَ الۡجَارِ الۡجُنُبِ وَ الصَّاحِبِ بِالۡجَنۡۢبِ وَ ابۡنِ السَّبِیۡلِ ۙ وَ مَا مَلَکَتۡ اَیۡمَانُکُمۡ ؕ اِنَّ اللّٰہَ لَا یُحِبُّ مَنۡ کَانَ مُخۡتَالًا فَخُوۡرَا ۔ (ಅನ್ನಿಸಾಅ್ : 37)

ಅಂದರೆ: ನೀವು ಅಲ್ಲಾಹನನ್ನು ಆರಾಧಿಸಿರಿ; ಬೇರೇನನ್ನೂ ಅವನ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ನಿಕಟ ಸಂಬಂಧಿಯಾದ ನೆರೆಹೊರೆಯವನಿಗೂ ಅನ್ಯ ನೆರೆಹೊರೆಯವನಿಗೂ ನಿಕಟ ಸಂಗಡಿಗನಿಗೂ ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ. ಅಹಂಭಾವಿಗಳನ್ನೂ ಜಂಭ ಕೊಚ್ಚುವವರನ್ನೂ ಅಲ್ಲಾಹನು ಎಂದಿಗೂ ಇಷ್ಟಪಡುವುದಿಲ್ಲ.

ಸಂಪುಟ: 07, ಸಂಚಿಕೆ: 34–35, 20–27 ಆಗಸ್ಟ್ 2026, 20–27 ಝುಹೂರ್ 1405 ಹಿಜರಿ ಶಮ್ಸಿ, 06–13 ರಬೀಉಲ್ ಅವ್ವಲ್ 1448 ಹಿಜರಿ ಖಮರಿ. (www.akhbarbadr.in)




## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಓ ಇಬ್ನೆ ಆದಮ್! ನಾನು ಅಸ್ವಸ್ಥನಾಗಿದ್ದೆ, ಆದರೆ ನೀನು ನನ್ನ ಇಯಾದತ್ (ಆರೋಗ್ಯ ವಿಚಾರಣೆ) ಮಾಡಲಿಲ್ಲ.

عَنۡ أَبِي هُرَيۡرَةَ، قَالَ: قَالَ رَسُولُ اللّٰهِ صَلَّى اللّٰهُ عَلَيۡهِ وَسَلَّمَ: "إِنَّ اللّٰهَ عَزَّ وَجَلَّ يَقُولُ يَوۡمَ الۡقِيَامَةِ: يَا ابۡنَ آدَمَ، مَرِضۡتُ فَلَمۡ تَعُدۡنِي، قَالَ يَا رَبِّ: كَيۡفَ أَعُودُكَ وَأَنۡتَ رَبُّ الۡعَالَمِينَ؟ قَالَ: أَمَا عَلِمۡتَ أَنَّ عَبۡدِي فُلَانًا مَرِضَ فَلَمۡ تَعُدۡهُ؟ أَمَا عَلِمۡتَ أَنَّكَ لَوۡ عُدۡتَهُ لَوَجَدۡتَنِي عِنۡدَهُ؟ يَا ابۡنَ آدَمَ، اسۡتَطۡعَمۡتُكَ فَلَمۡ تُطۡعِمۡنِي، قَالَ يَا رَبِّ: وَكَيۡفَ أُطۡعِمُكَ وَأَنۡتَ رَبُّ الۡعَالَمِينَ؟ قَالَ: أَمَا عَلِمۡتَ أَنَّهُ اسۡتَطۡعَمَكَ عَبۡدِي فُلَانٌ؟ فَلَمۡ تُطۡعِمۡهُ، أَمَا عَلِمۡتَ أَنَّكَ لَوۡ أَطۡعَمۡتَهُ لَوَجَدۡتَ ذَلِكَ عِنۡدِي؟ يَا ابۡنَ آدَمَ، اسۡتَسۡقَيۡتُكَ فَلَمۡ تَسۡقِنِي، قَالَ يَا رَبِّ: كَيۡفَ أَسۡقِيكَ وَأَنۡتَ رَبُّ الۡعَالَمِينَ؟ قَالَ: اسۡتَسۡقَاكَ عَبۡدِي فُلَانٌ، فَلَمۡ تَسۡقِهِ، أَمَا إِنَّكَ لَوۡ سَقَيۡتَهُ وَجَدۡتَ ذَلِكَ عِنۡدِي؟ (مسلم کتاب البر والصلۃ باب فضل عيادة المريض)

ಹಝ್ರತ್ ಅಬೂ ಹುರೈರಾ (ರಝಿಯಲ್ಲಾಹು ಅನ್ಹು) ವರದಿ ಮಾಡುತ್ತಾರೆ: ರಸೂಲಲ್ಲಾಹ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಅವರು ಹೇಳಿದರು: ಅಲ್ಲಾಹ್ ಅಝ್ಝ ವ ಜಲ್ಲ್ (ಅತ್ಯಂತ ಮಹಾನ್ ಮತ್ತು ಸರ್ವೋನ್ನತ ಅಲ್ಲಾಹ್) ಖಿಯಾಮತ್ ದಿನ ಹೀಗೆ ಹೇಳುವನು: ಓ ಇಬ್ನೆ ಆದಮ್! ನಾನು ಅಸ್ವಸ್ಥನಾಗಿದ್ದೆ, ಆದರೆ ನೀನು ನನ್ನ ಇಯಾದತ್ (ಆರೋಗ್ಯ ವಿಚಾರಣೆ) ಮಾಡಲಿಲ್ಲ. ಆಗ ಬಂದಾ (ದಾಸನು) ಹೇಳುವನು: ಓ ನನ್ನ ಪ್ರಭು! ನೀನು ರಬ್ಬುಲ್ ಆಲಮೀನ್ (ಸಮಸ್ತ ಲೋಕಗಳ ಪಾಲಕ) ಆಗಿರುವಾಗ, ನಾನು ನಿನ್ನ ಇಯಾದತ್ ಹೇಗೆ ಮಾಡಬಹುದಿತ್ತು? ಅಲ್ಲಾಹ್ ತಆಲಾ ಹೇಳುವನು: ನಿನಗೆ ತಿಳಿದಿರಲಿಲ್ಲವೇ? ನನ್ನ ದಾಸನು ಅಸ್ವಸ್ಥನಾಗಿದ್ದನು. ಆದರೆ ನೀನು ಅವನ ಇಯಾದತ್ ಮಾಡಲಿಲ್ಲ. ನೀನು ಅವನ ಇಯಾದತ್ ಮಾಡಲು ಹೋಗಿದ್ದರೆ, ನನ್ನನ್ನು ಅವನ ಬಳಿಯೇ ಕಾಣುತ್ತಿದ್ದೆ. ನಂತರ ಅಲ್ಲಾಹ್ ತಆಲಾ ಹೇಳುವನು: ಓ ಇಬ್ನೆ ಆದಮ್! ನಾನು ನಿನ್ನಿಂದ ಆಹಾರವನ್ನು ಕೇಳಿದೆನು, ಆದರೆ ನೀನು ನನಗೆ ಆಹಾರ ನೀಡಲಿಲ್ಲ. ಆಗ ದಾಸನು ಹೇಳುವನು: ಓ ನನ್ನ ಪ್ರಭು! ನೀನು ರಬ್ಬುಲ್ ಆಲಮೀನ್ ಆಗಿರುವಾಗ, ನಾನು ನಿನಗೆ ಆಹಾರವನ್ನು ಹೇಗೆ ನೀಡಲು ಸಾಧ್ಯ? ಸರ್ವಶಕ್ತನಾದ ಅಲ್ಲಾಹನು ಹೇಳುವನು: ನಿನಗೆ ನೆನಪಿಲ್ಲವೇ? ನನ್ನ ಅಮೂಕ ದಾಸನು ನಿನ್ನಿಂದ ಆಹಾರವನ್ನು ಕೇಳಿದ್ದನು, ಆದರೆ ನೀನು ಅವನಿಗೆ ಆಹಾರ ನೀಡಲಿಲ್ಲ. ನೀನು ಅವನಿಗೆ ಆಹಾರ ನೀಡಿದ್ದರೆ, ಅದರ ಅಜ್ರ್ (ಪ್ರತಿಫಲ)ವನ್ನು ನನ್ನ ಸನ್ನಿಧಿಯಲ್ಲಿ ಪಡೆಯುತ್ತಿದ್ದೆ ಎಂಬುದು ನಿನಗೆ ತಿಳಿದಿರಲಿಲ್ಲವೇ? ಮತ್ತೆ ಅಲ್ಲಾಹ್ ತಆಲಾ ಹೇಳುವನು: ಓ ಇಬ್ನೆ ಆದಮ್! ನಾನು ನಿನ್ನಿಂದ ನೀರನ್ನು ಕೇಳಿದೆನು, ಆದರೆ ನೀನು ನನಗೆ ನೀರು ನೀಡಲಿಲ್ಲ. ದಾಸನು ಹೇಳುವನು: ಓ ನನ್ನ ಪ್ರಭೂ! ನೀನು ರಬ್ಬುಲ್ ಆಲಮೀನ್ ಆಗಿರುವಾಗ, ನಾನು ನಿನಗೆ ನೀರನ್ನು ಹೇಗೆ ನೀಡಲು ಸಾಧ್ಯ? ಅದಕ್ಕೆ ಅಲ್ಲಾಹನು ಹೇಳುವನು: ನನ್ನ ಅಮೂಕ ದಾಸನು ನಿನ್ನಿಂದ ನೀರನ್ನು ಕೇಳಿದ್ದನು, ಆದರೆ ನೀನು ಅವನಿಗೆ ನೀರು ನೀಡಲಿಲ್ಲ. ನೀನು ಅವನಿಗೆ ನೀರು ನೀಡಿದ್ದರೆ, ಅದರ ಅಜ್ರ್ ಅನ್ನು ನನ್ನ ಸನ್ನಿಧಿಯಲ್ಲಿ ಪಡೆಯುತ್ತಿದ್ದೆ.



## ಹಝ್ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆ

### ಮಾನವಕುಲದೊಂದಿಗೆ ಹಮ್ದರ್ದಿ (ಸಹಾನುಭೂತಿ) ಮಾಡಿರಿ

ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಹೇಳುತ್ತಾರೆ:

ಈ ಮಾತನ್ನು ಸಹ ಚೆನ್ನಾಗಿ ನೆನಪಿಟ್ಟುಕೊಳ್ಳಿರಿ: ಅಲ್ಲಾಹ್ ತಆಲಾನಿಂದ ಎರಡು ವಿಧದ ಆಜ್ಞೆಗಳಿವೆ. ಮೊದಲನೆಯದು: ಅವನೊಂದಿಗೆ ಯಾರನ್ನೂ ಶಿರ್ಕ್ ಮಾಡಬೇಡಿ, ಅಂದರೆ ಅವನ ಝಾತ್ (ಸ್ವರೂಪ), ಅವನ ಸಿಫಾತ್ (ಗುಣಗಳು) ಹಾಗೂ ಅವನ ಇಬಾದತ್ (ಆರಾಧನೆ)ಗಳಲ್ಲಿ ಯಾರನ್ನೂ ಪಾಲುದಾರರನ್ನಾಗಿ ಮಾಡಬೇಡಿ. ಎರಡನೆಯದು: ಮಾನವಕುಲದೊಂದಿಗೆ ಹಮ್ದರ್ದಿ (ಸಹಾನುಭೂತಿ) ಮತ್ತು ಇಹ್ಸಾನ್ (ಉಪಕಾರ)ದ ವರ್ತನೆ ಮಾಡಿರಿ. ಇಹ್ಸಾನ್ ಎಂಬುದರ ಅರ್ಥ ಕೇವಲ ನಿಮ್ಮ ಸಹೋದರರು ಮತ್ತು ಬಂಧುಗಳಿಗೆ ಮಾತ್ರ ಉಪಕಾರ ಮಾಡುವುದಲ್ಲ. ಬದಲಾಗಿ ಯಾರೇ ಆಗಿರಲಿ ಅವನು ಆದಮನ ಸಂತಾನವಾಗಿದ್ದರೆ ಮತ್ತು ಅಲ್ಲಾಹ್ ತಆಲಾ ಅವರ ಸೃಷ್ಟಿಗಳಲ್ಲಿ ಒಬ್ಬನಾಗಿದ್ದರೆ ಅವನೊಂದಿಗೆ ದಯೆ, ಸಹಾನುಭೂತಿ ಮತ್ತು ಸೌಜನ್ಯದ ವರ್ತನೆ ಮಾಡಿರಿ. ಅವನು ಹಿಂದೂ ಆಗಿದ್ದಾನೆಯೇ ಅಥವಾ ಕ್ರೈಸ್ತನಾಗಿದ್ದಾನೆಯೇ ಎಂಬುದನ್ನು ಪರಿಗಣಿಸಬೇಡಿ. ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ: ಅಲ್ಲಾಹ್ ತಆಲಾ ನಿಮ್ಮ ನ್ಯಾಯದ ಹೊಣೆಯನ್ನು ತನ್ನ ಕೈಯಲ್ಲಿ ತೆಗೆದುಕೊಂಡಿದ್ದಾನೆ. ನೀವು ಸ್ವತಃ ಪ್ರತೀಕಾರದ ಮಾರ್ಗವನ್ನು ಅನುಸರಿಸಬೇಕೆಂದು ಅವನು ಬಯಸುವುದಿಲ್ಲ. ನೀವು ಎಷ್ಟು ಹೆಚ್ಚು ಮೃದುತ್ವವನ್ನು ಅಳವಡಿಸಿಕೊಳ್ಳುತ್ತೀರೋ, ಎಷ್ಟು ಹೆಚ್ಚು ವಿನಯ, ನಮ್ರತೆ ಮತ್ತು ತವಾಝು (ಅಹಂಕಾರರಹಿತ ವಿನಯಶೀಲತೆ) ತೋರಿಸುತ್ತೀರೋ, ಅಷ್ಟೇ ಹೆಚ್ಚು ಅಲ್ಲಾಹ್ ತಆಲಾ ನಿಮ್ಮ ಮೇಲೆ ಪ್ರಸನ್ನನಾಗುವನು. ನಿಮ್ಮ ಶತ್ರುಗಳನ್ನು ಅಲ್ಲಾಹ್ ತಆಲಾ ಅವರ ವಶಕ್ಕೆ ಒಪ್ಪಿಸಿರಿ. ಖಿಯಾಮತ್ ಬಹಳ ಸಮೀಪದಲ್ಲಿದೆ. ನಿಮ್ಮ ಶತ್ರುಗಳು ನಿಮಗೆ ನೀಡುವ ಕಷ್ಟಗಳು ಮತ್ತು ತೊಂದರೆಗಳಿಂದ ನೀವು ಅಶಾಂತಿಗೊಳಗಾಗಬಾರದು. ನನಗೆ ಕಾಣಿಸುತ್ತಿದೆ, ಇನ್ನೂ ನೀವು ಅವರಿಂದ ಅನೇಕ ಕಷ್ಟಗಳನ್ನು ಅನುಭವಿಸಬೇಕಾಗಬಹುದು. ಏಕೆಂದರೆ ಯಾರು ತಹಝೀಬ್ (ಸಂಸ್ಕಾರ ಮತ್ತು ಶಿಷ್ಟಾಚಾರದ) ಮಿತಿಗಳನ್ನು ಮೀರುತ್ತಾರೋ, ಅವರ ನಾಲಿಗೆಯು ನಿಯಂತ್ರಣವಿಲ್ಲದೆ ಹರಿಯುತ್ತದೆ. ಅದು ಹೇಗಿರುತ್ತದೆ ಎಂದರೆ, ಒಂದು ಸೇತುವೆ ಮುರಿದಾಗ ಅಣೆಕಟ್ಟು ಒಡೆದು ನೀರಿನ ಪ್ರವಾಹವು ಏಕಾಏಕಿ ಹೊರಹೊಮ್ಮುವಂತಿರುತ್ತದೆ. ಆದ್ದರಿಂದ, ಒಬ್ಬ ದೀನ್‌ದಾರ್ (ಧರ್ಮನಿಷ್ಠ) ವ್ಯಕ್ತಿಯ ಕರ್ತವ್ಯವೆಂದರೆ ತನ್ನ ನಾಲಿಗೆಯನ್ನು ಸಂಪೂರ್ಣ ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು.

**(ಅಲ್–ಹಕಮ್, 24 ಜನವರಿ 1907; ಮಲ್ಫೂಝಾತ್, ಸಂಪುಟ 5, ಪುಟ 130)**

## ತಫ್ಸೀರ್ ಕಬೀರ್‌ನಿಂದ ಉಲ್ಲೇಖ

### ಸಮಸ್ತ ಮಾನವಕುಲವು ನಿಮಗೆ ನಿಮ್ಮ ಸ್ವಂತ ಮಕ್ಕಳಂತೆ ಕಾಣುವಷ್ಟು ಉನ್ನತ ನೇಕಿಯ (ಸತ್ಕರ್ಮದ) ಸಂತವನ್ನು ಸಾಧಿಸಿರಿ


ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ಸೂರಃ ಅನ–ನಹ್ಲ್‌ನ 91ನೇ ಆಯತ್‌ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಒಬ್ಬ ವ್ಯಕ್ತಿಯು ಇಹ್ಸಾನ್ (ಉಪಕಾರ) ಮಾಡುವಾಗ ಸಾಮಾನ್ಯವಾಗಿ ಅವನ ಮನಸ್ಸಿನಲ್ಲಿ ಈ ಭಾವನೆ ಇರುತ್ತದೆ: ಅಮೂಕ ವ್ಯಕ್ತಿಯು ನನ್ನೊಂದಿಗೆ ಉತ್ತಮವಾಗಿ ವರ್ತಿಸಿದ್ದಾನೆ, ಆದ್ದರಿಂದ ನಾನು ಅವನಿಗೆ ಅದಕ್ಕಿಂತಲೂ ಉತ್ತಮವಾದ ಪ್ರತಿಫಲವನ್ನು ನೀಡಬೇಕು, ಇದರಿಂದ ನನ್ನ ಒಳ್ಳೆಯ ಹೆಸರು ಉಂಟಾಗಬಹುದು. ಅಥವಾ ಒಬ್ಬ ಪಾಪಿಯ ತಪ್ಪನ್ನು ಕ್ಷಮಿಸುವಾಗಲೂ

*(ಪುಟ ಸಂಖ್ಯೆ–15 ರಲ್ಲಿ ಮುಂದುವರಿಸಲಾಗಿದೆ)*

**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**



# ಖುತ್‌ಬ ಜುಮುಅ

## ಹಝ್ರತ್ ಮಸೀಹ್ ಮೌಊದ್(ಅ)ರ ದಾನಶೀಲತೆಯ ಸುಂದರ ಪ್ರಸ್ತಾವನೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **26-06-2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

إِيَّاكَ نَعْبُدُ وَإِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಅಲ್ಲಾಹನ ಆಜ್ಞೆ ಮತ್ತು ಹಝ್ರತ್ ಪೈಗಂಬರ್(ಸ)ರ ಮಾದರಿಯನ್ನು ಅನುಸರಿಸುತ್ತಾ, ಹಝ್ರತ್ ಮಸೀಹ್ ಮೌಊದ್(ಅ)ರ ಜೀವನದಲ್ಲಿ ನಮಗೆ ಬಡವರ ಪೋಷಣೆ, ಔದಾರ್ಯ ಮತ್ತು ದಾನಶೀಲತೆಯ ಅನೇಕ ಘಟನೆಗಳು ಕಾಣುತ್ತವೆ. ಅವರ ಪ್ರವಾದಿತ್ವದ ವಾದದ ನಂತರ ಮಾತ್ರವಲ್ಲ, ಅವರ ಜೀವನದ ಆರಂಭಿಕ ದಿನಗಳು ಮತ್ತು ಯೌವನದಲ್ಲೂ ಅವರ ಉನ್ನತ ನೈತಿಕತೆಯ ಘಟನೆಗಳನ್ನು ನಾವು ಕಾಣುತ್ತೇವೆ.

ಅದೇ ರೀತಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರ ಪೋಷಣೆಯನ್ನು ಯಾವ ತಾಯಿಯ ಮಡಿಲಲ್ಲಿ ಮಾಡಿದನೋ, ಆ ತಾಯಿಯ ಜೀವನವನ್ನು ನೋಡಿದರೂ ಅಲ್ಲಿಯೂ ನಮಗೆ ಬಡವರ ಪೋಷಣೆ, ಔದಾರ್ಯ ಮತ್ತು ದಾನಶೀಲತೆಯ ಘಟನೆಗಳು ಸಿಗುತ್ತವೆ. ಅಂದರೆ, ಅವರು ಉನ್ನತ ನೈತಿಕತೆಯನ್ನು ಕಲಿಸಿದಂತಹ ತಾಯಿಯ ಮಡಿಲಲ್ಲಿ ಬೆಳೆದರು ಮತ್ತು ಹೀಗೆ ಅಲ್ಲಾಹನು ಅವರ ಸ್ವಭಾವದಲ್ಲಿಯೇ ಒಳ್ಳೆಯತನವನ್ನು ಸೃಷ್ಟಿಸಿದ ಜೊತೆಗೆ ತಾಯಿಯ ಕಡೆಯಿಂದಲೂ ಒಳ್ಳೆಯ ವಾತಾವರಣ ಲಭಿಸಿತು. ಅದರಂತೆ, ಅವರ ತಾಯಿಯ ಈ ಔದಾರ್ಯ ಮತ್ತು ದಾನಶೀಲತೆಯನ್ನು ಉಲ್ಲೇಖಿಸುತ್ತಾ ಹಝ್ರತ್ ಶೇಖ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್ ಬರೆಯುತ್ತಾರೆ:

ಹಝ್ರತ್ ಮಸೀಹ್ ಮೌಊದ್(ಅ)ರ ತಾಯಿ ಹಝ್ರತ್ ಚಿರಾಗ್ ಬೀಬಿ ಸಾಹಿಬರ ಕುಟುಂಬವು ಹೋಶಿಯಾರ್‌ಪುರ ಜಿಲ್ಲೆಯ ಆಯಿಮಾ ಗ್ರಾಮದ ಗೌರವಾನ್ವಿತ ಮತ್ತು ನೈಜ ಮೊಘಲ್ ಕುಟುಂಬವಾಗಿತ್ತು. ಅವರ ಸ್ವಭಾವದಲ್ಲಿ ಔದಾರ್ಯ, ದಾನಶೀಲತೆ ಮತ್ತು ಅತಿಥಿ ಸತ್ಕಾರವು ತುಂಬಿ ತುಳುಕುತ್ತಿತ್ತು. ಓರ್ವ ಪವಿತ್ರ ಮತ್ತು ಪರಿಶುದ್ಧ ಮಹಿಳೆಯಲ್ಲಿ ಇರಬೇಕಾದ ಎಲ್ಲ ಉನ್ನತ ಗುಣಗಳು ಅವರಲ್ಲಿದ್ದವು. ಅವರು ಯಾವಾಗಲೂ ಹಸನ್ಮುಖಿ ಮತ್ತು ಗಂಭೀರವಾಗಿರುತ್ತಿದ್ದರು. ಅತಿಥಿ ಸತ್ಕಾರಕ್ಕಾಗಿ ಅವರ ಹೃದಯದಲ್ಲಿ ಅಪಾರ ಆವೇಶ ಮತ್ತು ಎದೆಯಲ್ಲಿ ವಿಶಾಲತೆ ಇತ್ತು. ಅವರ ಔದಾರ್ಯ ಮತ್ತು ಅತಿಥಿ ಸತ್ಕಾರವನ್ನು ನೋಡಿದವರಲ್ಲಿ ಕೆಲವರು ಹಝ್ರತ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್ ಈ ಕುರಿತು ಬರೆಯುವ ಕಾಲದಲ್ಲಿ ಜೀವಂತವಾಗಿದ್ದರು. ಅವರು ಹೇಳುತ್ತಾರೆ: ಹೊರಗಿನಿಂದ ನಾಲ್ಕು ಜನರಿಗೆ ಊಟ ಕಳುಹಿಸಬೇಕೆಂಬ ಮಾಹಿತಿ ಅವರಿಗೆ ಸಿಕ್ಕರೆ, ಊಟ ಕಳುಹಿಸುವಾಗ ಅದು ಎಂಟು ಜನರಿಗಿಂತಲೂ ಹೆಚ್ಚಿನವರಿಗಾಗಿ ಇರುತ್ತಿತ್ತು, ಏಕೆಂದರೆ ಬೇರೆ ಯಾರಾದರೂ ಬಂದು ಜೊತೆ ಕುಳಿತರೆ ಅವರಿಗೂ ಊಟ ಸಿಗಲಿ ಎಂಬ ಉದ್ದೇಶದಿಂದ. ಅತಿಥಿಗಳು ಬಂದರೆ ಅವರಿಗೆ ಬಹಳ ಸಂತೋಷವಾಗುತ್ತಿತ್ತು.

ತಮ್ಮ ಊರಿನ ಬಡವರು ಮತ್ತು ದುರ್ಬಲರ ಬಗ್ಗೆ ಅವರು ವಿಶೇಷ ಕಾಳಜಿ ವಹಿಸುತ್ತಿದ್ದರು ಮತ್ತು ಅವರ ಸಾಮಾನ್ಯ ಕಾರ್ಯಗಳಲ್ಲಿ ಇರುವ ಒಂದು ವಿಶೇಷತೆಯೆಂದರೆ, ಬಡವರು ಮರಣಹೊಂದುವಾಗ ಅವರಿಗೆ ಬೇಕಾಗುವ ಶವವಸ್ತ್ರವನ್ನು ತಾಯಿಯ ಮನೆಯಿಂದಲೇ ಕೊಡಲಾಗುತ್ತಿತ್ತು. ಒಟ್ಟಿನಲ್ಲಿ, ಬಡವರ ಮೇಲಿನ ಸಹಾನುಭೂತಿ ಮತ್ತು ಸಹಾಯದಿಂದಾಗಿ ಅವರು ಎಲ್ಲರಿಗೂ ಒಬ್ಬ ಕರುಣಾಮಯಿ ತಾಯಿಯಂತಿದ್ದರು.

ಹಝ್ರತ್ ಮಸೀಹ್ ಮೌಊದ್(ಅ)ರ ಪೋಷಣೆಯಲ್ಲಿ ತಾಯಿಯವರ ಈ ಗುಣಗಳು ಮತ್ತು ನೈತಿಕತೆಯು ವಿಶೇಷ ಪ್ರಭಾವ ಬೀರಿತು. ಅವರು ಒಂದು ದೊಡ್ಡ ಕುಟುಂಬದ ಒಡೆಯರಾಗಲಿದ್ದ ಕಾರಣ, ಅಲ್ಲಾಹನು ಆರಂಭದಿಂದಲೇ ಈ ಉನ್ನತ ಗುಣಗಳನ್ನು ಬೆಳೆಸಲು ಸಿದ್ಧತೆ ಮಾಡಿದ್ದನು. ಜನಸಾಮಾನ್ಯರ ಮೇಲಿನ ಸಹಾನುಭೂತಿ, ಅತಿಥಿ ಸತ್ಕಾರ ಮತ್ತು ದಾನಶೀಲತೆಯಲ್ಲಿ ಅದ್ವಿತೀಯರಾಗಿದ್ದ ಕರುಣಾಮಯಿ ತಾಯಿಯ ಮಡಿಲಲ್ಲಿ ಅವರನ್ನು ಬೆಳೆಸಿದನು. ಈ ಗುಣಗಳನ್ನು ಅವರು ತಾಯಿಯ ಹಾಲಿನೊಂದಿಗೆ ಹೀರಿದರು ಎನ್ನಬಹುದು. ನಿರ್ಲಿಪ್ತತೆ, ಶೌರ್ಯ, ಧೈರ್ಯ ಮತ್ತು ಸ್ಪಷ್ಟನುಡಿಯ ಗುಣಗಳು ತಂದೆಯಿಂದ ಲಭಿಸಿದ್ದರೆ, ಅತಿಥಿ ಸತ್ಕಾರ, ದಾನಶೀಲತೆ ಮತ್ತು ಜನಸಾಮಾನ್ಯರ ಮೇಲಿನ ಸಹಾನುಭೂತಿಯು ತಾಯಿಯಿಂದ ಲಭಿಸಿತು.

(ಹಯಾತೆ ಅಹ್ಮದ್, ಯಾಖೂಬ್ ಅಲೀ ಇರ್ಫಾನಿ ಸಾಹಿಬ್(ರ), ಸಂಪುಟ-1, ಭಾಗ-2, ಪುಟ-217-218)

ಹಝ್ರತ್ ಮಸೀಹ್ ಮೌಊದ್(ಅ)ರ ಯೌವನದ ದಿನಗಳ ದಾನಶೀಲತೆಯ ಘಟನೆಗಳ ಬಗ್ಗೆ ಹಝ್ರತ್ ಮಿಯಾನ್ ಅಲ್ಲಾಹ್ ಯಾರ್ ಸಾಹಿಬ್ ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ಸಿಯಾಲ್ಕೋಟ್‌ನಲ್ಲಿ ಉದ್ಯೋಗದಲ್ಲಿದ್ದಾಗ, ಒಮ್ಮೆ ಅವರ ತಾಯಿ ಅವರಿಗಾಗಿ ಎರಡು ಜೊತೆ ಉಡುಪುಗಳು ಮತ್ತು ಸ್ವಲ್ಪ ಸಿಹಿ ತಿನಿಸುಗಳನ್ನು ಮಂಗಲ್ ಹಜಾಮ್ ಎಂಬ ವ್ಯಕ್ತಿಯ ಕೈಯಲ್ಲಿ ಕಳುಹಿಸಿಕೊಟ್ಟರು. ಮಂಗಲ್ ಬರುವಾಗ ನಮ್ಮ ಊರಿನ ಮೂಲಕ ಹಾದುಹೋಗಿದ್ದನು ಮತ್ತು ಹಿಂದಿರುಗುವಾಗಲೂ ನಮ್ಮ ಊರಿಗೆ ಬಂದನು ಎಂದು ಮಿಯಾನ್ ಅಲ್ಲಾಹ್ ಯಾರ್ ಸಾಹಿಬ್ ಹೇಳುತ್ತಾರೆ. ಆತ ಹೇಳುತ್ತಾನೆ: ನಾನು ಈ ವಸ್ತುಗಳನ್ನು ತೆಗೆದುಕೊಂಡು ಸಿಯಾಲ್ಕೋಟ್‌ಗೆ ಹೋಗಿ ಹಝ್ರತ್ ಮಸೀಹ್ ಮೌಊದ್(ಅ)ರ ಮುಂದಿಟ್ಟಾಗ, ಅವರು ಹೇಳಿದರು, "ನಿನ್ನ ಪಾಲಿಗೆ ಇರುವುದನ್ನು ನೀನು ತೆಗೆದುಕೋ ಮತ್ತು ನನ್ನ ಪಾಲನ್ನು ನನಗೆ ಕೊಡು." ನಾನು ಹೇಳಿದೆ, "ಹುಝೂರ್, ಇವು ನಿಮಗಾಗಿವೆ. ತಾಯಿಯವರು ನಿಮಗಾಗಿ ಕಳುಹಿಸಿದ್ದಾರೆ." ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು, "ನೀನು ಇಷ್ಟೆಲ್ಲ ವಸ್ತುಗಳನ್ನು ಇಷ್ಟು ದೂರ ಹೊತ್ತು ತಂದಿದ್ದೀಯಾ, ಆದ್ದರಿಂದ ನಿನ್ನ ಅರ್ಧ ಪಾಲನ್ನು ಖಂಡಿತವಾಗಿಯೂ ತೆಗೆದುಕೋ." ಕೊನೆಗೆ ನನಗೆ ಒಂದು ಜೊತೆ ಉಡುಪು ಮತ್ತು ಸ್ವಲ್ಪ ಸಿಹಿತಿನಿಸುಗಳನ್ನು ನೀಡಿದರು ಮತ್ತು ಹೀಗೆ ಹೇಳಿದರು, "ನನ್ನನ್ನು ಇಲ್ಲಿಂದ ಬೇಗನೆ ಮರಳಿ ಕರೆಸಿಕೊಳ್ಳಿ, ನನಗೆ ಇಲ್ಲಿ ಮನಸ್ಸಿಲ್ಲ ಎಂದು ತಾಯಿಗೆ ಹೋಗಿ ಹೇಳು. ಜನರು ಅಕ್ರಮ ಸಕಾರ್ಯಗಳಲ್ಲಿ ಜೀವನ ಕಳೆಯುತ್ತಿದ್ದಾರೆ, ಅವರನ್ನು ನೋಡಿ ನನ್ನ ಮನಸ್ಸಿಗೆ ಸಂಕಟವಾಗುತ್ತದೆ."

(ರಿವಾಯಾತ್ ಅಸ್ಹಾಬೆ ಅಹ್ಮದ್, ಸಂಪುಟ-2, ಪುಟ-230)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹಝ್ರತ್ ಸೈಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್(ರ)ರ ಉಲ್ಲೇಖದಿಂದ ಒಂದು ವರದಿಯನ್ನು ವಿವರಿಸುತ್ತಾರೆ: ನಾನು ಸಿಯಾಲ್ಕೋಟ್‌ನಲ್ಲಿದ್ದಾಗ ಹಝ್ರತ್ ಹಾಫಿಝ್ ಮುಹಮ್ಮದ್ ಶಫೀ ಸಾಹಿಬ್ ಖಾರಿಯರ ತಾಯಿಯವರಾದ ಮಾಯಿ ಹಯಾತ್ ಬೀವಿ ಸಾಹಿಬಾ ಅವರನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ಮಾಯಿ ಸಾಹಿಬಾ ತಿಳಿಸಿದರು: ಮೊದಲು ಮಿರ್ಝಾ ಸಾಹಿಬ್(ಅ) ಇದೇ ಬಡಾವಣೆಯಲ್ಲಿ ನಮ್ಮ ಈಗಿರುವ ಮನೆಗೆ ಹೊಂದಿಕೊಂಡಿದ್ದ ಒಂದು ಕೊಠಡಿಯಲ್ಲಿ ವಾಸಿಸುತ್ತಿದ್ದರು. ಆ ಮನೆ ಬಿದ್ದಾಗ ಮಿರ್ಝಾ ಸಾಹಿಬ್(ಅ) ಕಾಶ್ಮೀರಿ ಬಡಾವಣೆಯಲ್ಲಿದ್ದ ನನ್ನ ತಂದೆಯ ಮನೆಗೆ ಬಂದರು. ಅವರು ನಮ್ಮ ಮನೆಗೆ ಬಂದಾಗ, ಮನೆಯಲ್ಲಿ ಯಾರನ್ನೂ ಭೇಟಿಯಾಗುತ್ತಿರಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಸಿಗುತ್ತಿದ್ದ ವೇತನವನ್ನು ಆ ಬಡಾವಣೆಯ ವಿಧವೆಯರಿಗೆ ಮತ್ತು ಅಗತ್ಯವುಳ್ಳವರಿಗೆ ಹಂಚಿಬಿಡುತ್ತಿದ್ದರು, ಬಟ್ಟೆಗಳನ್ನು ಹೊಲಿಸಿ ಕೊಡುತ್ತಿದ್ದರು ಅಥವಾ ನಗದು ನೀಡುತ್ತಿದ್ದರು ಮತ್ತು ತಮಗಾಗಿ ಕೇವಲ ಊಟದ ಖರ್ಚನ್ನು ಮಾತ್ರ ಇಟ್ಟುಕೊಳ್ಳುತ್ತಿದ್ದರು. (ಸೀರತುಲ್ ಮಹದಿ, ಸಂಪುಟ-1, ಭಾಗ-3, ಪುಟ-594-594, ವರದಿ ಸಂಖ್ಯೆ-625)

ಹಝ್ರತ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ ಬರೆಯುತ್ತಾರೆ: ದಾನ ಮತ್ತು ಔದಾರ್ಯಕ್ಕೆ ಸಂಬಂಧಿಸಿದಂತೆ ನಾವು ಹಝ್ರತ್ ಮಸೀಹ್ ಮೌಊದ್(ಅ)ರ ಜೀವನವನ್ನು ನೋಡುವಾಗ, ಅವರು ಈ ಶ್ರೇಷ್ಠ ನೈತಿಕತೆಯಲ್ಲಿ ಅಪಾರ ಪಾಲನ್ನು ಹೊಂದಿದ್ದರು ಎಂಬುದು ತಿಳಿಯುತ್ತದೆ. ಅವರು ತಿಳುವಳಿಕೆ ಪಡೆದ ದಿನದಿಂದಲೇ, ಅಂದರೆ ಬಾಲ್ಯ ಮತ್ತು ಯೌವನದಿಂದಲೇ ಅವರ ಜೀವನದಲ್ಲಿ ಈ ವರ್ತನೆ ಕಂಡುಬರುತ್ತದೆ. ಪ್ರವಾದಿಯಾಗಿ ನೇಮಕಗೊಂಡ ನಂತರವಷ್ಟೇ ಈ ರೀತಿಯ ನೈತಿಕತೆಯು ಕೃತಕವಾಗಿ ಹೊರಹೊಮ್ಮಿದ್ದಲ್ಲ, ಬದಲಾಗಿ ಅದು ಅವರ ಸ್ವಭಾವದ ಒಂದು ಭಾಗವಾಗಿತ್ತು. ಈ ರೀತಿಯ ನೈತಿಕ ಗುಣಗಳು ಕೆಲವೊಮ್ಮೆ ಸಂಪೂರ್ಣವಾಗಿ ಗುಪ್ತವಾಗಿರುತ್ತಿದ್ದವು ಮತ್ತು ಇನ್ನು ಕೆಲವೊಮ್ಮೆ ಸಹಜವಾಗಿಯೇ ಇತರರಿಗೆ ತಿಳಿಯುವಂತೆ ಪ್ರಕಟವಾಗುತ್ತಿದ್ದವು. ಯಾವುದೇ ಒಳ್ಳೆಯ ಕೆಲಸ ಮಾಡಿದರೂ ಅದು ಗುಪ್ತವಾಗಿರಬೇಕು ಎಂಬುದೇ ಅವರ ಸಾಮಾನ್ಯ ಒಲವಾಗಿತ್ತು. ಆದ್ದರಿಂದ ಅವರ ಆರಂಭಿಕ ಜೀವನದ ದಾನಶೀಲತೆಯ ಘಟನೆಗಳು ಸಾಮಾನ್ಯವಾಗಿ ಗುಪ್ತವಾಗಿಯೇ ಇರುತ್ತಿದ್ದವು, ಏಕೆಂದರೆ ಅವರು ಏಕಾಂತವಾಸಿಯಾಗಿದ್ದರು

ಮತ್ತು ಗುಪ್ತವಾಗಿಯೇ ಜನರಿಗೆ ಸಹಾಯ ಮಾಡುತ್ತಿದ್ದರು. ಆದರೆ ಅಲ್ಲಾಹನು ಅವರನ್ನು ಸಾರ್ವಜನಿಕವಾಗಿ ಹೊರತಂದು ನಿಯೋಜಿಸಿದಾಗ ಮತ್ತು ಜನರ ಆಗಮನವು ಹೆಚ್ಚಾದಾಗ ಹಾಗೂ ಅವರ ಪರಿಸ್ಥಿತಿಗಳು ಜನರಿಗೆ ತಿಳಿದಾಗ, ಈ ಘಟನೆಗಳನ್ನು ನೋಡುವವರು ಮತ್ತು ವಿವರಿಸುವವರು ಉಂಟಾದರು. ಹಝ್ರತ್ ಮಸೀಹ್ ಮೌಊದ್(ಅ) ಯಾಚಕನನ್ನು ಎಂದಿಗೂ ಬರಿಗೈಯಲ್ಲಿ ಮರಳಿ ಕಳುಹಿಸುತ್ತಿರಲಿಲ್ಲ. ಅವರ ಜೀವನವು, ಯಾಚಕನನ್ನು ಗದರಿಸಬೇಡ ಎಂಬುದರ ಪ್ರಾಯೋಗಿಕ ಚಿತ್ರಣವಾಗಿತ್ತು.

ಹಝ್ರತ್ ಮೌಲಾನಾ ಅಬ್ದುಲ್ ಕರೀಮ್ ಸಾಹಿಬ್(ರ) ವಿವರಿಸುತ್ತಾರೆ: ಒಂದು ದಿನ ಏನಾಯಿತೆಂದರೆ, ಮಧ್ಯಾಹ್ನದ ನಮಾಝಿನ ನಂತರ ಹಝ್ರತ್ ಮಸೀಹ್ ಮೌಊದ್(ಅ) ಎದ್ದು ಮಸೀದಿಯ ಕಿಟಕಿಯ ಮೂಲಕ ಒಳಗೆ ಹೋಗಲು ಕಾಲಿಟ್ಟರು. ಅಷ್ಟರಲ್ಲಿ ಒಬ್ಬ ಯಾಚಕನು ಮೆಲ್ಲನೆ ತಾನು ಯಾಚಕನೆಂದು ಹೇಳಿದನು. ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಆ ಸಮಯದಲ್ಲಿ ಯಾವುದೋ ತುರ್ತು ಕೆಲಸವಿತ್ತು ಮತ್ತು ಆತನ ಧ್ವನಿಯು ನಮಾಝಿನ ನಂತರ ಮಾತನಾಡುತ್ತಿದ್ದ ಇತರ ಜನರ ಧ್ವನಿಗಳೊಂದಿಗೆ ಬೆರೆತುಹೋಗಿತ್ತು. ಹೀಗಾಗಿ ಅವರು ಗಮನಿಸದೆ ಒಳಗೆ ಹೋದರು. ಆ ಮೆಲು ಧ್ವನಿ ಕಿವಿಗೆ ಬಿದ್ದರೂ, ಬೇರೆ ಕೆಲಸದ ಮಗ್ನತೆಯಿಂದಾಗಿ ಅವರು ಗಮನಹರಿಸಲಿಲ್ಲ. ಆದರೆ ಒಳಗೆ ಹೋದಾಗ ಅದೇ ಮೆಲು ಧ್ವನಿಯು ಅವರ ಹೃದಯದ ಮೇಲೆ ತೀವ್ರ ಪ್ರಭಾವ ಬೀರಿತು. ಅವರಿಗೆ ತಕ್ಷಣವೇ ಆ ಧ್ವನಿಯ ಅರಿವಾಗಿ, ಬಹಳ ವೇಗವಾಗಿ ಮರಳಿ ಬಂದರು ಮತ್ತು ಹಝ್ರತ್ ನೂರುದ್ದೀನ್ ಸಾಹಿಬ್(ರ)ರನ್ನು ಕರೆದು ಹೇಳಿದರು: “ಒಬ್ಬ ಯಾಚಕನಿದ್ದನು, ಅವನು ಎಲ್ಲಿಗೆ ಹೋದನು ಎಂದು ನೋಡಿರಿ.” ಆದರೆ ಆತನಿಗಾಗಿ ಹುಡುಕಲಾದರೂ ಆತನನ್ನು ಕಂಡು ಹಿಡಿಯಲಾಗಲಿಲ್ಲ. ಅಸರ್ ನಮಾಝಿನ ನಂತರ ಹಝ್ರತ್ ಮಸೀಹ್ ಮೌಊದ್(ಅ) ಪುನಃ ಕುಳಿತಾಗ, ಅದೇ ಯಾಚಕನು ಪುನಃ ಬಂದು ಬೇಡಿದನು. ಹಝ್ರತ್ ಮಸೀಹ್ ಮೌಊದ್(ಅ) ಬಹಳ ವೇಗವಾಗಿ ಜೇಬಿನಿಂದ ಏನನ್ನೋ ತೆಗೆದು ಅವನ ಕೈಯಲ್ಲಿಟ್ಟರು. ಈಗ ಅವರು ಎಷ್ಟೊಂದು ಸಂತೋಷಪಟ್ಟರೆಂದರೆ, ಅವರ ಮೇಲಿದ್ದ ಯಾವುದೋ ದೊಡ್ಡ ಹೊರೆಯೊಂದು ಇಳಿದುಹೋದಂತೆ ಭಾಸವಾಗುತ್ತಿತ್ತು. ಕೆಲವು ದಿನಗಳ ನಂತರ ಅವರು ಹೇಳಿದರು: “ಆ ದಿನ ಯಾಚಕನು ಸಿಗದಿದ್ದಾಗ ನನ್ನ ಹೃದಯದ ಮೇಲೆ ಎಷ್ಟೊಂದು ಭಾರವಿತ್ತೆಂದರೆ, ನಾನು ಅಶಾಂತನಾಗಿದ್ದೆ. ನಾನು ಯಾಚಕನತ್ತ ಗಮನ ಹರಿಸದೆ ಒಳಗೆ ಹೋಗಿ ಪಾಪ ಮಾಡಿದೆನೇನೋ ಎಂದು ಭಯಪಡುತ್ತಿದ್ದೆ. ಅವನು ಸಂಜೆ ಮರಳಿ ಬಂದಿದ್ದಕ್ಕಾಗಿ ದೇವನಿಗೆ ಕೃತಜ್ಞತೆ. ಇಲ್ಲದಿದ್ದರೆ ನಾನು ಎಂತಹ ಸಂಕಟದಲ್ಲಿರುತ್ತಿದ್ದೆನೋ ದೇವನೇ ಬಲ್ಲ. ಅಲ್ಲಾಹನು ಅವನನ್ನು ಮರಳಿ ತರಲಿ ಎಂದು ನಾನು ಪ್ರಾರ್ಥನೆಯನ್ನೂ ಮಾಡಿದ್ದೆ.” (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ(ರ), ಭಾಗ–2, ಪುಟ–285–286)

ಅದೇ ರೀತಿ, ಹಝ್ರತ್ ಶೇಖ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್ ತಾವು ಬರೆದ ಚರಿತ್ರೆಯ ಪುಸ್ತಕದಲ್ಲಿ ಒಂದು ಕಡೆ ಬರೆಯುತ್ತಾರೆ: ಖಾದಿಯಾನಿನಿಂದ ಆರು ಮೈಲಿ ದೂರದಲ್ಲಿ ಸಠಿಯಾಲಿ ಎಂಬ ಒಂದು ಸಣ್ಣ ಗ್ರಾಮವಿದೆ. ಅಲ್ಲಿಂದ ಒಬ್ಬ ರೈತ ಫಕೀರನು ಬರುತ್ತಿದ್ದನು. ಮಸೀದಿಯ ಛಾವಣಿಯ ಕೆಳಗೆ ಪಶ್ಚಿಮ ಗೋಡೆಯಲ್ಲಿರುವ ಕಿಟಕಿಯ ಬಳಿ ಬಂದು, “ಗುಲಾಮ್ ಅಹ್ಮದ್, ಒಂದು ರೂಪಾಯಿ ಬೇಕು” ಎಂದು ಕೂಗುತ್ತಿದ್ದನು ಮತ್ತು ಅಲ್ಲಿಯೇ ಕುಳಿತುಕೊಳ್ಳುತ್ತಿದ್ದನು. ಹಝ್ರತ್ ಮಸೀಹ್ ಮೌಊದ್(ಅ) ಕಾರ್ಯನಿರತರಾಗಿದ್ದು ಅವನ ಧ್ವನಿ ಕೇಳದಿದ್ದರೆ, ಅವನು ಪದೇ ಪದೇ ಕೂಗುತ್ತಿದ್ದನು. ಇದು ಬಹಳ ಜನರಿಗೆ ಕಿರಿಕಿರಿ ಉಂಟುಮಾಡುತ್ತಿತ್ತು. ಯಾರಾದರೂ ಅವನನ್ನು ತಡೆದರೆ, “ನಾನು ನಿನ್ನ ಬಳಿ ಬಂದಿಲ್ಲ, ನಾನು ಗುಲಾಮ್ ಅಹ್ಮದ್(ಅ)ರ ಬಳಿ ಬೇಡಲು ಬಂದಿದ್ದೇನೆ” ಎನ್ನುತ್ತಿದ್ದನು. ಯಾರಾದರೂ ಅವನಿಗೆ ಏನಾದರೂ ಹೇಳಿದ್ದಾರೆ ಎಂದು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ತಿಳಿದರೆ, ಅವರು ಅದನ್ನು ಇಷ್ಟಪಡುತ್ತಿರಲಿಲ್ಲ ಮತ್ತು ನಗುತ್ತಲೇ ಅವನಿಗೆ ರೂಪಾಯಿ ಕೊಟ್ಟುಬಿಡುತ್ತಿದ್ದರು. ಯಾಚಕನನ್ನು ಹೆಚ್ಚು ಹೊತ್ತು ಕಾಯಿಸದೇ ಇರುವುದು ಕೂಡ ಅವರ ಅಭ್ಯಾಸವಾಗಿತ್ತು.
(ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ(ರ), ಭಾಗ–2, ಪುಟ–292)

ಹಝ್ರತ್ ಚೌಧರಿ ಅಬ್ದುಲ್ಲಾ ಖಾನ್ ಸಾಹಿಬ್ ವಿವರಿಸುತ್ತಾರೆ: ಒಮ್ಮೆ ವಿಹಾರದಿಂದ ಮರಳಿ ಹಝ್ರತ್ ಮಸೀಹ್ ಮೌಊದ್(ಅ) ಮನೆಯೊಳಗೆ ಪ್ರವೇಶಿಸುವಾಗ, ಕೇವಲ ಲಂಗೋಟಿ ಧರಿಸಿದ್ದ ಓರ್ವ ದರ್ವೇಶ್ “ದಾತ, ದಾತ, ಏನಾದರೂ ಕೊಡಿ” ಎಂದು ಕೂಗಿದನು. ಹುಝೂರ್ “ಅಲ್ಲಾಹನೇ ದಾತ” ಎಂದು ಹೇಳಿ ಒಳಗೆ ಹೋದರು. ಅವನು “ದಾತ, ದಾತ” ಎಂದಿದ್ದರಿಂದ ಹುಝೂರ್ “ಅಲ್ಲಾಹನೇ ದಾತ” ಎಂದರು. ಅವನು ಮತ್ತೆ “ದಾತ ಅಲ್ಲಾಹನೇ ಹೌದು, ತಾವು ಏನಾದರೂ ಕೊಡಿ” ಎಂದು ಕೂಗಿದನು. ಹುಝೂರ್ ಅವನಿಗೆ ಏನನ್ನೋ ಕಳುಹಿಸಿಕೊಟ್ಟರು. ಆತನ ಈ ಮಾತಿನಿಂದ ಆತನಿಗೆ ಎಷ್ಟರ ಮಟ್ಟಿಗೆ ತರಬೇತಿಯಾಯಿತೋ ಗೊತ್ತಿಲ್ಲ, ಆದರೆ ನಮ್ಮ ಮಾತುಗಳಲ್ಲಿ ಬಹುದೇವಾರಾಧನೆಯ ಸಣ್ಣ ಅಂಶವೂ ಇರಬಾರದು ಎಂಬ ಪಾಠವನ್ನು ಹಝ್ರತ್ ಮಸೀಹ್ ಮೌಊದ್(ಅ) ತಮ್ಮವರಿಗೆ ನೀಡಿದರು. (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–5, ಪುಟ–298)

ಹಝ್ರತ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ ಬರೆಯುತ್ತಾರೆ: ಒಮ್ಮೆ ಒಬ್ಬ ಯಾಚಕನು ಬಂದನು. ಅವನು ಖಾದಿಯಾನಿನ ಬೀದಿಯಲ್ಲಿ ಸುತ್ತುತ್ತಿದ್ದನು. ಅವನು ಬೆಳಗ್ಗೆ ಎದ್ದು ಹಝ್ರತ್ ಮೀರ್ ಹಾಮಿದ್ ಶಾಹ್ ಸಾಹಿಬ್‌ರ ಪದ್ಯವನ್ನು ಹಾಡುತ್ತಿದ್ದನು. ಆತನು ಹೀಗೆ ಹಾಡುತ್ತಿದ್ದನು:

ಹೋ ನಾಸಿರ್ ಖುದಾ ತೇರಾ ಮೇರೆ ಏ ಖಾದಿಯಾನ್ ವಾಲೇ
ಹಮೇ ಬಖ್ಶಿ ಅಮಾನ್ ತೂನೆ ಏ ದಾರುಲ್ ಅಮಾನ್ ವಾಲೇ

ಆಗೊಮ್ಮೆ ಈಗೊಮ್ಮೆ ಹಝ್ರತ್ ಮಸೀಹ್ ಮೌಊದ್(ಅ)ರ ಪದ್ಯವಾದ ‘ಹರ್ ತರಫ್ ಫಿಕ್ರ್ ಕೋ ದೌಡಾಕೇ ಥಕಾಯಾ ಹಮ್‌ನೇ’ ಎಂಬ ಪದ್ಯವನ್ನು ಕೂಡ ಹಾಡುತ್ತಿದ್ದನು.

ಅವನು ಹಝ್ರತ್ ಮಸೀಹ್ ಮೌಊದ್(ಅ)ರ ಪದ್ಯವನ್ನು ಹಾಡುವಾಗ ಮೌಲವಿ ಅಬ್ದುಲ್ ಕರೀಮ್ ಸಾಹಿಬ್(ರ)ರಿಗೆ ಬಹಳ ಕೋಪ ಬರುತ್ತಿತ್ತು. “ಈ ಪದ್ಯವನ್ನು ಹಾಡಲು ಇವನು ಅರ್ಹನಲ್ಲ. ಇದರಲ್ಲಿ ಅಡಗಿರುವ ಸತ್ಯ ಮತ್ತು ಸ್ಥಿತಿಯು ಕೇವಲ ಹಝ್ರತ್ ಮಸೀಹ್ ಮೌಊದ್(ಅ)ರಲ್ಲಿ ಮಾತ್ರ ಕಂಡುಬರುತ್ತದೆ. ಈ ಪದ್ಯದಲ್ಲಿ ಹೇಳಲಾಗಿರುವ ವಿಷಯವನ್ನು ಬೇರೆ ಯಾರ ಬಾಯಿಂದಲೂ ಕೇಳಲು ನನಗೆ ಸಾಧ್ಯವಿಲ್ಲ, ಹೀಗಿರುವಾಗ ಇಂಥಹ ಸಾಮಾನ್ಯ ಯಾಚಕ ಇದನ್ನು ಹೇಳುತ್ತಾ ತಿರುಗುವುದು ಎಂತಹ ವಿಪರ್ಯಾಸ” ಎಂದು ಅವರು ಹೇಳುತ್ತಿದ್ದರು. ಏನೇ ಆಗಲಿ, ಇದು ಮೌಲವಿ ಅಬ್ದುಲ್ ಕರೀಮ್ ಸಾಹಿಬ್(ರ)ರಿಗೆ ಹಝ್ರತ್ ಮಸೀಹ್ ಮೌಊದ್(ಅ)ರ ಮೇಲಿದ್ದ ಪ್ರೀತಿಯ ದ್ಯೋತಕವಾಗಿತ್ತು. ಆ ಯಾಚಕನು ಉಪವಾಸದ ತಿಂಗಳಿನಲ್ಲಿ ಖಾದಿಯಾನಿನಲ್ಲಿ ಸುತ್ತುತ್ತಿದ್ದನು ಮತ್ತು ಆ ಅವಧಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅವನಿಗೆ ಹಲವು ಬಾರಿ ಬಹಳಷ್ಟು ನೀಡಿದ್ದರು. ಆದರೂ ಅವನು ನನ್ನ ಬಟ್ಟಲನ್ನು ತುಂಬಿಸಿ ಎಂದು ಹೇಳುತ್ತಿದ್ದನು. ಅದರಂತೆ ಹಬ್ಬದ ದಿನದಂದು ಅವನು ದೊಡ್ಡ ಬಟ್ಟಲನ್ನು ಹಿಡಿದುಕೊಂಡು ಬಂದು ಮಸೀದಿಯ ಬಾಗಿಲ ಬಳಿ ಚಾದರ ಹಾಸಿ ಕುಳಿತನು. ಹಝ್ರತ್ ಮಸೀಹ್ ಮೌಊದ್(ಅ) ಬಂದಾಗ, ನನ್ನ ಬಟ್ಟಲನ್ನು ತುಂಬಿಸಿ ಎಂದು ಬೇಡಿದನು. ಹಝ್ರತ್ ಮಸೀಹ್ ಮೌಊದ್(ಅ) ಅದರಲ್ಲಿ ಒಂದು ರೂಪಾಯಿ ಹಾಕಿದರು. ಅವರು ಹಾಕಿದ್ದೇ ತಡ, ನಾಣ್ಯಗಳ ಮಳೆಯೇ ಸುರಿಯಿತು ಮತ್ತು ವಿವಿಧ ನಾಣ್ಯಗಳಿಂದ ಅವನ ಬಟ್ಟಲು ತುಂಬಿಹೋಯಿತು. ಆತನ ಬೇಡಿಕೆಯನ್ನು ಕೇಳಿ ಹಝ್ರತ್ ಮಸೀಹ್ ಮೌಊದ್(ಅ) ಮುಗುಳ್ನಗುತ್ತಾ ನಾಣ್ಯವನ್ನು ಹಾಕಿದ್ದರು. ಅವರ ಅನುಯಾಯಿಗಳೂ ನಾಣ್ಯಗಳನ್ನು ಹಾಕಿ ಆತನಿಗೆ ಸಹಾಯ ಮಾಡಿದರು ಮತ್ತು ಹೀಗೆ ಆತನ ಬಟ್ಟಲು ತುಂಬಿತು. (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ(ರ), ಭಾಗ–2, ಪುಟ–292–293)

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ ಬರೆಯುತ್ತಾರೆ: 1905ರಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಕೊನೆಯ ಬಾರಿಗೆ ದೆಹಲಿಗೆ ತೆರಳಿದರು. ಒಂದು ದಿನ ಅವರು ದೆಹಲಿಯ ದರ್ಗಾಗಳು ಇತ್ಯಾದಿಗಳಿಗೆ ಭೇಟಿ ನೀಡುವ ಉದ್ದೇಶದಿಂದ ಹೊರಟರು. ಒಬ್ಬರು ಹೇಳಿದರು, “ಹುಝೂರ್, ಆ ದಾರಿಯಲ್ಲಿ ಎಷ್ಟೊಂದು ಭಿಕ್ಷುಕರಿದ್ದಾರೆಂದರೆ, ಅಲ್ಲಿಂದ ಹಾದುಹೋಗುವುದೇ ಕಷ್ಟ.” ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು, “ಇಂದು ನಾವು ಹೋಗೋಣ. ನಾವು ಎಲ್ಲರಿಗೂ ಕೊಡುತ್ತೇವೆ.” ಇದು ಕೇವಲ ಸಾಮಾನ್ಯ ಸಂಕಲ್ಪವಾಗಿರಲಿಲ್ಲ, ಯಾರು ಬೇಡುತ್ತಾರೋ ಅವರಿಗೆಲ್ಲರಿಗೂ ನೀಡಲು ಅವರು ವಾಸ್ತವವಾಗಿ ಸಿದ್ಧರಾಗಿದ್ದರು. ಹೇಳಲಾದಷ್ಟು ಪ್ರಮಾಣದಲ್ಲಿ ಭಿಕ್ಷುಕರು ಇರಲಿಲ್ಲವಾದರೂ, ಸಿಕ್ಕಿದ ಪ್ರತಿಯೊಬ್ಬರಿಗೂ ಪ್ರಾಯೋಗಿಕವಾಗಿ ಭಿಕ್ಷೆ ಕೊಡಲಾಯಿತು. ಸಿಕ್ಕಿದ ಎಲ್ಲರಿಗೂ ಅವರು ಸಹಾಯ ಮಾಡಿದರು. (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ್(ರ), ಭಾಗ–3, ಪುಟ–308)

ಹಝ್ರತ್ ಹಾಫಿಝ್ ಅಹ್ಮದ್ ಅಲ್ಲಾಹ್ ನಾಗ್‌ಪುರಿ ಸಾಹಿಬ್ ಹೇಳುತ್ತಾರೆ: ಒಂದು ದಿನ ಹಝ್ರತ್ ಮಸೀಹ್ ಮೌಊದ್(ಅ) ಗೋಲ್ ಕಮ್‌ರ ಎಂಬ ಕೋಣೆಯಲ್ಲಿ ಕುಳಿತಿದ್ದರು. ಸುಮಾರು 20 ಅಥವಾ 25 ಜನರು ಅಲ್ಲಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಭಾಷಣ ಮಾಡುತ್ತಿದ್ದಾಗ ಒಬ್ಬ ಫಕೀರನು ಬಂದು ಜೋರಾಗಿ ಭಿಕ್ಷೆ ಬೇಡಿದನು. ಈತ ಹಝ್ರತ್ ಮಸೀಹ್ ಮೌಊದ್(ಅ)ರ ಭಾಷಣಕ್ಕೆ ಭಂಗ ತರುತ್ತಿದ್ದಾನಲ್ಲ ಎಂದು ನನಗೆ ಬಹಳ ಕೋಪಬಂತು ಮತ್ತು ನಾನು ಎದ್ದು ಹೋಗಿ ಬಾಗಿಲನ್ನು ಮುಚ್ಚಿದೆ. ಹಝ್ರತ್ ಮಸೀಹ್ ಮೌಊದ್(ಅ) ಭಾಷಣವನ್ನು ನಿಲ್ಲಿಸಿ ನನ್ನೊಡನೆ ಹೇಳಿದರು: “ಬಾಗಿಲನ್ನೇಕೆ ಮುಚ್ಚಿದಿರಿ? ಒಳಗೆ ಹೋಗಿ ಮನೆಯಿಂದ ಏನಾದರೂ ತಂದು ಆ ಯಾಚಕನಿಗೆ ಕೊಡಿರಿ.” ಮನೆಯಿಂದ ತರಿಸಿ ಆತನಿಗೆ ಸಹಾಯ ಮಾಡಿದರು ಮತ್ತು ಯಾಚಕನು ಬೇಡುವಾಗ ಬಾಗಿಲು ಮುಚ್ಚುವುದು

ಒಳ್ಳೆಯದಲ್ಲ ಎಂದು ಹೇಳಿದರು. (ಸೀರತ್ ಅಹ್ಮದ್, ಖುದ್ರತುಲ್ಲಾಹ್ ಸನ್ನೋರಿ ಸಾಹಿಬ್, ಪುಟ-87-88)

ಹಝ್ರತ್ ಬಾಬು ಗುಲಾಮ್ ಮುಹಮ್ಮದ್ ಸಾಹಿಬ್ ವಿವರಿಸುತ್ತಾರೆ: ಒಬ್ಬ ವಾದ್ಯ ನುಡಿಸುವವನು ಯಾಚಕನಾಗಿ ಹಝ್ರತ್ ಮಸೀಹ್ ಮೌಊದ್(ಅ)ರ ಮನೆಯ ಬಾಗಿಲಿಗೆ ಬಂದನು. ಹಝ್ರತ್ ಮಸೀಹ್ ಮೌಊದ್(ಅ) ಅವನಿಗೆ ನಾಲ್ಕು ಆಣೆ ನೀಡಿದರು. ಅಷ್ಟರಲ್ಲಿ ಮೀರ್ ನಾಸಿರ್ ನವಾಬ್ ಸಾಹಿಬ್(ರ) ಅಲ್ಲಿಗೆ ಬಂದರು, ಹಝ್ರತ್ ಮಸೀಹ್ ಮೌಊದ್(ಅ) ಆಗಲೇ ಒಳಗೆ ಹೋಗಿದ್ದರು. ಮೀರ್ ಸಾಹಿಬ್ ಆತನನ್ನು ನೋಡಿ, ವಾದ್ಯ ನುಡಿಸಿದ್ದಕ್ಕಾಗಿ ಬಹಳ ಗದರಿಸಿದರು ಮತ್ತು ಇನ್ನೆಂದಾದರೂ ಇಲ್ಲಿಗೆ ಬಂದರೆ ಹುಷಾರ್ ಎಂದು ಎಚ್ಚರಿಸಿದರು. ಮರುದಿನ ಆತ ಮತ್ತೆ ಬಂದನು. ಹಝ್ರತ್ ಮಸೀಹ್ ಮೌಊದ್(ಅ) ಅವನಿಗೆ ದಾನ ನೀಡಲು ಹೊರಗೆ ಬಂದಾಗ, ಆ ಯಾಚಕ ಅಲ್ಲಿರಲಿಲ್ಲ. ಅವನು ಮೀರ್ ಸಾಹಿಬ್‌ರನ್ನು ನೋಡಿ ನಿನ್ನೆಯ ಬೈಗುಳ ನೆನಪಾಗಿ ಅಲ್ಲಿಂದ ಓಡಿಹೋಗಿದ್ದನು. ಆಗ ಹಝ್ರತ್ ಮಸೀಹ್ ಮೌಊದ್(ಅ), ಹೋಗಿ ಆ ವಾದ್ಯ ನುಡಿಸುವವನನ್ನು ಹುಡುಕಿ ತನ್ನಿ ಎಂದು ಯಾರಿಗೋ ಹೇಳಿದರು. ಹುಝೂರ್, ಆತ ಓಡಿಹೋಗಿದ್ದಾನೆ ಎಂದು ಯಾರೋ ಹೇಳಿದಾಗ, ನೀವು ಓಡಿಹೋಗಿ ಅವನನ್ನು ಕರೆತನ್ನಿ ಎಂದು ಹುಝೂರ್ ಹೇಳಿದರು. ಕೊನೆಗೆ ಆತ ಬಂದನು ಮತ್ತು ಮೀರ್ ಸಾಹಿಬ್‌ರನ್ನು ನೋಡಿ ಹೆದರಿದನು. ಆಗ ಹಝ್ರತ್ ಮಸೀಹ್ ಮೌಊದ್(ಅ) ಮೀರ್ ಸಾಹಿಬ್‌ರೊಡನೆ ಹೇಳಿದರು: "ಮೀರ್ ಸಾಹಿಬ್, ಈ ಪಾಪದ ಮನುಷ್ಯ ಏನು ಮಾಡಿಯಾನು? ಅವನಿಗೆ ಬೇರೆ ಯಾವ ಕೆಲಸವೂ ಬರುವುದಿಲ್ಲ. ನೀವು ಅವನಿಗೆ ಯಾವುದಾದರೂ ವೃತ್ತಿಯನ್ನು ಕಲಿಸಿಕೊಡಿ, ಆಮೇಲೆ ಅವನು ವಾದ್ಯ ನುಡಿಸುವುದನ್ನು ಬಿಡುವನು." ನಂತರ ಆ ವಾದ್ಯಗಾರನನ್ನು ಏಕಾಂತದಲ್ಲಿ ಕರೆದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: "ನೀನು ಇಲ್ಲಿರುವಷ್ಟು ದಿನ ವಾದ್ಯ ನುಡಿಸಬೇಡ, ಮೀರ್ ಸಾಹಿಬ್ ಗದರಿಸುತ್ತಾರೆ, ಕೋಪಗೊಂಡು ಹೊಡೆದರೂ ಹೊಡೆಯಬಹುದು. ನೀನು ವಾದ್ಯ ನುಡಿಸಬೇಡ, ಬದಲಾಗಿ ಬಾಗಿಲಿನ ಸರಪಳಿಯನ್ನು ಮೆಲ್ಲನೆ ಅಲ್ಲಾಡಿಸು, ನಾನು ನಿನಗೆ ಏನಾದರೂ ಕೊಡುತ್ತೇನೆ." ಅದರಂತೆ ಆತ ಖಾದಿಯಾನಿನಲ್ಲಿ ಇದ್ದಷ್ಟು ದಿನವೂ ಪ್ರತಿದಿನ ನಾಲ್ಕು ಆಣೆ ತೆಗೆದುಕೊಂಡು ಹೋಗುತ್ತಿದ್ದನು. (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ-4, ಪುಟ-247)

ಹಝ್ರತ್ ಸೈಯದ್ ಫಝ್ಲುಲ್ ಶಾಹ್ ಸಾಹಿಬ್ ವಿವರಿಸುತ್ತಾರೆ: ಒಬ್ಬ ಫಕೀರನಿಗೆ ಹಝ್ರತ್ ಮಸೀಹ್ ಮೌಊದ್(ಅ) ಬಳಿ ಬಂದು ಒಮ್ಮೊಮ್ಮೆ ಒಂದು ಆಣೆ, ಒಮ್ಮೊಮ್ಮೆ ಎರಡು ಆಣೆ, ಒಮ್ಮೊಮ್ಮೆ ಎಂಟು ಆಣೆ – ಹೀಗೆ ಏನನ್ನಾದರೂ ನಿಶ್ಚಯವಾಗಿ ಕೇಳುವ ಅಭ್ಯಾಸವಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಬೇರೆ ಕೆಲಸದಲ್ಲಿ ಮಗ್ನರಾಗಿದ್ದರೆ, ಅವನು ಪದೇ ಪದೇ ಕೇಳಿ ಪಡೆದುಕೊಂಡೇ ಹೋಗುತ್ತಿದ್ದನು. ಅವನು ಎಂದಿಗೂ ಬಿಡುತ್ತಿರಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಅವನ ಪರಿಚಯ ಚೆನ್ನಾಗಿಯೇ ಇತ್ತು. ಅವನು ಬಂದು ಎಷ್ಟು ಕೇಳುತ್ತಾನೋ ಅಷ್ಟನ್ನೇ ಹುಝೂರ್ ನೀಡುತ್ತಿದ್ದರು. ಇವನು ಇಷ್ಟು ಪಡೆಯದೆ ಹೋಗುವವನಲ್ಲ, ಅವನು ಎಷ್ಟು ಕೇಳುತ್ತಾನೋ ಅಷ್ಟನ್ನೇ ಕೊಟ್ಟುಬಿಡಿ ಎಂದು ಹೇಳುತ್ತಿದ್ದರು.
(ಸೀರತ್ ಅಹ್ಮದ್, ಖುದ್ರತುಲ್ಲಾಹ್ ಸನ್ನೋರಿ ಸಾಹಿಬ್, ಪುಟ-152)

ಹಝ್ರತ್ ಶೇಖ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್ ಬರೆಯುತ್ತಾರೆ: ನಾನು 1898ರಿಂದ ಸ್ಥಿರವಾಗಿ ಹಝ್ರತ್ ಮಸೀಹ್ ಮೌಊದ್(ಅ)ರ ಸೇವೆಯಲ್ಲೇ ಇದ್ದೆ. 1892ರಿಂದ ಖಾದಿಯಾನಿಗೆ ಬರುತ್ತಿದ್ದೆ. ನಾನು ಇರುವಾಗಲೂ ಅನೇಕರು ಭಿಕ್ಷೆ ಬೇಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಯಾಚಕನಿಗೆ ತಾಮ್ರದ ನಾಣ್ಯ ನೀಡುವುದನ್ನು ನಾನು ಎಂದಿಗೂ ನೋಡಿಲ್ಲ. ಅವರು ಯಾವಾಗಲೂ ಬೆಳ್ಳಿಯ ನಾಣ್ಯವನ್ನೇ ನೀಡುತ್ತಿದ್ದರು. ಆ ಕಾಲದ ನಾಣ್ಯ ಪದ್ಧತಿಯ ಪ್ರಕಾರ ತಾಮ್ರದ ನಾಣ್ಯ ಎಂದರೆ ಕೇವಲ ಸಣ್ಣ ಮೊತ್ತವಾಗಿರುತ್ತಿತ್ತು ಮತ್ತು ಬೆಳ್ಳಿಯ ನಾಣ್ಯ ಎಂದರೆ ದೊಡ್ಡ ಮೊತ್ತವಾಗಿರುತ್ತಿತ್ತು. ಆ ಕಾಲದಲ್ಲಿ ಸಣ್ಣ ನಾಣ್ಯಗಳಿಗೂ ಬೆಲೆ ಇರುತ್ತಿತ್ತು, ಆದರೂ ಹುಝೂರ್ ಹೆಚ್ಚಿನ ಮೊತ್ತವನ್ನೇ ದಾನವಾಗಿ ನೀಡುತ್ತಿದ್ದರು ಮತ್ತು ಸಾಮಾನ್ಯವಾಗಿ ಯಾವುದೇ ಸಣ್ಣ ಯಾಚಕನಿಗೂ ಒಂದು ರೂಪಾಯಿ ಕೊಟ್ಟುಬಿಡುತ್ತಿದ್ದರು. ಒಮ್ಮೆ ಒಬ್ಬ ಫಕೀರನು ಹಝ್ರತ್ ಮಸೀಹ್ ಮೌಊದ್(ಅ) ಬಳಿ ಬಂದು ಹೀಗೆ ಬೇಡಿದನು: "ನಾನು ಕಾಡಿನಲ್ಲಿ ಒಂದು ಬಾವಿ ತೋಡಿಸಲು ಬಯಸುತ್ತೇನೆ. ಅಲ್ಲಿ ಪ್ರಯಾಣಿಕರಿಗೆ ವಿಶ್ರಾಂತಿ ಸಿಗುವುದು ಮತ್ತು ಅವರು ಅಲ್ಲಿಂದ ನೀರು ಕುಡಿಯುವರು." ಹಝ್ರತ್ ಮಸೀಹ್ ಮೌಊದ್(ಅ) ಈ ಉದ್ದೇಶಕ್ಕಾಗಿ ಅವನಿಗೆ 200 ರೂಪಾಯಿಗಳನ್ನು ನೀಡಿದರು ಮತ್ತು ಹೀಗೆ ಹೇಳಿದರು: "ನೀನು ಜನರ ಸೇವೆಗಾಗಿ ಈ ಕೆಲಸ ಮಾಡುತ್ತಿರುವೆ, ನಾನು ಹಣ ನೀಡುತ್ತೇನೆ." (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ(ರ), ಭಾಗ-2, ಪುಟ-308)

ಹೀಗೆ ಅವರು ಜನರ ಸೇವೆ ಮಾಡಲು ಉಪದೇಶ ನೀಡಿದ್ದಲ್ಲದೆ, ತಾವೇ ಪ್ರಾಯೋಗಿಕ ಮಾದರಿಯಾಗಿ ತೋರಿಸಿಕೊಟ್ಟರು.

ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿ ಹಝ್ರತ್ ಅಬ್ದುಸ್ಸಮೀಅ್ ಸಾಹಿಬ್(ರ) ವಿವರಿಸುತ್ತಾರೆ: ಮಿಯಾನ್ ಶರೀಫ್ ಅಹ್ಮದ್ ಸಾಹಿಬ್‌ರ ಮಗುವಿನ ನಾಮಕರಣ ಸಮಾರಂಭವಿತ್ತು. ಅತಿಥಿಗೃಹದಲ್ಲಿ ಎಲ್ಲ ಅತಿಥಿಗಳು ಊಟ ಮಾಡುತ್ತಿದ್ದಾಗ, ಒಬ್ಬ ಫಕೀರನು ಅತಿಥಿಗೃಹದ ಒಳಗೆ ಭಿಕ್ಷೆ ಬೇಡಲು ಬಂದನು. ಜನರು ಅವನನ್ನು ಹೊರಗೆ ಹಾಕಲು ಮುಂದಾದಾಗ, ಹಝ್ರತ್ ಮಸೀಹ್ ಮೌಊದ್(ಅ) ಸ್ವತಃ ಆ ಫಕೀರನಿಗೆ ತಟ್ಟೆಯಲ್ಲಿ ಊಟ ಬಡಿಸಿ ಕೊಟ್ಟರು ಮತ್ತು ಆತನನ್ನು ಗದರಿಸದಂತೆ ಜನರನ್ನು ತಡೆದು, ಅವನು ಊಟ ಮಾಡಲು ಬಂದಿದ್ದಾನೆ, ಗದರಿಸುವುದು ಸರಿಯಲ್ಲ ಎಂದರು.
(ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ-3, ಪುಟ-239)

ಹಝ್ರತ್ ಮುನ್ಷಿ ಜ಼ಫರ್ ಅಹ್ಮದ್ ಸಾಹಿಬ್ ಕಪೂರ್‌ಥಲವಿ ವಿವರಿಸುತ್ತಾರೆ: ಒಮ್ಮೆ ಒಬ್ಬ ಮೌಲ್ವಿ ಖಾದಿಯಾನಿಗೆ ಬಂದು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಸಂವಾದ ಪ್ರಾರಂಭಿಸಿದನು. ಪ್ರವಾದಿ ಈಸಾ(ಅ)ರ ಜೀವನ ಮತ್ತು ಮರಣದ ಕುರಿತ ಸಂವಾದವಾಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಅವನಿಗೆ ಉತ್ತರ ನೀಡಲು ತೊಡಗಿದಾಗ ಅವನು ಮೌನವಾದನು. ಅವನಿಗೆ ವಿವರಿಸಿಕೊಟ್ಟು, ನನ್ನ ಆಧಾರಗಳು ಸರಿಯಾಗಿವೆಯೇ ಎಂದು ನಿಮಗೆ ಅರ್ಥವಾಯಿತೇ ಎಂದು ಹಝ್ರತ್ ಮಸೀಹ್ ಮೌಊದ್(ಅ) ಕೇಳಿದಾಗ, ಅವನು ಅತ್ಯಂತ ದುರಹಂಕಾರದಿಂದ, ನನಗೆ ಅರ್ಥವಾಯಿತು, ಆದರೆ ನೀವು ದಜ್ಜಾಲ್ ಎಂದು ಅರ್ಥವಾಯಿತು. ಏಕೆಂದರೆ ಚರ್ಚೆಯಲ್ಲಿ ಇತರರನ್ನು ನಿರುತ್ತರಗೊಳಿಸುವುದು ದಜ್ಜಾಲ್‌ನ ಗುಣವಾಗಿದೆ ಎಂದು ಹೇಳಿದನು. ಅನಂತರ ಹಝ್ರತ್ ಮಸೀಹ್ ಮೌಊದ್(ಅ) ಅವನೊಡನೆ ಏನೂ ಹೇಳಲಿಲ್ಲ ಮತ್ತು ಅವನು ಹೊರಟುಹೋದನು. ಅಮೃತಸರಕ್ಕೆ ಹೋಗಿ ಅವನು ಒಂದು ಕರಪತ್ರವನ್ನು ಪ್ರಕಟಿಸಿದನು ಮತ್ತು ಈ ಘಟನೆಯನ್ನು ವಿವರಿಸುತ್ತಾ ಹೀಗೆ ಬರೆದನು: "ನಾನು ಇಂತಹ ಮಾತುಗಳನ್ನು ಹೇಳಿದ್ದೆ, ಆದರೂ ಅವರು ಒಳಗೆ ಹೋದಾಗ ನಾನು ಒಂದು ಚೀಟಿ ಕಳುಹಿಸಿದೆ: ನಾನು ನಿರ್ಗತಿಕ ಮತ್ತು ನನಗೆ ಸ್ವಲ್ಪ ಉಪಕಾರ ಮಾಡಿ." ಇಷ್ಟೆಲ್ಲ ಹೇಳಿದರೂ ತನ್ನ ನಾಚಿಕೆಗೇಡುತನವನ್ನು ಆತನೇ ಬರೆದುಕೊಂಡಿದ್ದ. ನಾನು ಕೆಟ್ಟ ಮಾತುಗಳನ್ನಾಡಿದ್ದೆ, ಆದರೂ ನನಗೆ ಸ್ವಲ್ಪ ಸಹಾಯ ಮಾಡಿ ಎಂದು ಕೇಳಿದ್ದೆ. ಆಗ ಅವರು ತಕ್ಷಣ 15 ರೂಪಾಯಿಗಳನ್ನು ಕಳುಹಿಸಿದರು. ಒಟ್ಟಿನಲ್ಲಿ ಅವರು ಬಹಳ ದಾನಶೀಲರಾಗಿದ್ದಾರೆ ಮತ್ತು ಅವರ ಮುಖದ ಮೇಲೆಯೇ ಕಠೋರ ಮಾತುಗಳನ್ನಾಡಿದರೂ ಅವರು ಕೋಪಗೊಳ್ಳುವುದಿಲ್ಲ ಎಂದು ಆತ ಬರೆದುಕೊಂಡಿದ್ದನು. ಈ 15 ರೂಪಾಯಿ ಕಳುಹಿಸಿದ ವಿಷಯವನ್ನು ಹಝ್ರತ್ ಮಸೀಹ್ ಮೌಊದ್(ಅ) ಯಾರ ಬಳಿಯೂ ಹೇಳಿರಲಿಲ್ಲ, ಆದರೆ ಆತನ ಕರಪತ್ರದಿಂದಲೇ ಆತನ ಕಠೋರ ಮಾತುಗಳ ನಡುವೆಯೂ ಹಝ್ರತ್ ಮಸೀಹ್ ಮೌಊದ್(ಅ) ಆತನಿಗೆ 15 ರೂಪಾಯಿ ಕೊಟ್ಟಿದ್ದರು ಎಂಬುದು ಜನರಿಗೆ ತಿಳಿಯಿತು.
(ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ-4, ಪುಟ-216)

ಹಝ್ರತ್ ಖಾಝಿ ಅಬ್ದುಲ್ ಗಫೂರ್ ಸಾಹಿಬ್ ವಿವರಿಸುತ್ತಾರೆ: 1906ರಲ್ಲಿ ನಾನು ನನ್ನ ಅಣ್ಣನೊಂದಿಗೆ ರಾವಲ್ಪಿಂಡಿಯಿಂದ ಖಾದಿಯಾನಿಗೆ ಹೋದೆ. ಹಝ್ರತ್ ಮಸೀಹ್ ಮೌಊದ್(ಅ) ಮಸೀದಿಯ ಮೆಟ್ಟಿಲುಗಳನ್ನು ಇಳಿಯುತ್ತಿದ್ದರು. ರಾವಲ್ಪಿಂಡಿಯ ಹಕೀಮ್ ಶಾಹ್ ನವಾಝ್ ಸಾಹಿಬ್ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಒಂದು ಚೀಲದಲ್ಲಿ 17 ಪೌಂಡ್‌ಗಳನ್ನು ಕಾಣಿಕೆಯಾಗಿ ನೀಡಿದರು. ಹಝ್ರತ್ ಮಸೀಹ್ ಮೌಊದ್(ಅ) ಆ ಚೀಲವನ್ನು ತೆಗೆದುಕೊಂಡು ಜೇಬಿನಲ್ಲಿ ಹಾಕಿಕೊಂಡರು. ಕೆಳಗೆ ಒಬ್ಬ ಯಾಚಕ ನಿಂತು ಬೇಡುತ್ತಿದ್ದನು. ಹಝ್ರತ್ ಮಸೀಹ್ ಮೌಊದ್(ಅ) ಅದೇ ಚೀಲವನ್ನು ಜೇಬಿನಿಂದ ತೆಗೆದು ಅವನ ಕೈಯಲ್ಲಿಟ್ಟರು. ಇದನ್ನು ಕಂಡ ಹಕೀಮ್ ಸಾಹಿಬ್, "ಹುಝೂರ್, ಅದರಲ್ಲಿ 17 ಪೌಂಡ್‌ಗಳಿದ್ದವು" ಎಂದರು. ಹಝ್ರತ್ ಮಸೀಹ್ ಮೌಊದ್(ಅ), "ಇದು ಅವನದ್ದೇ ಆಗಿತ್ತು, ಅವನಿಗೇ ತಲುಪಿದೆ" ಎಂದು ಹೇಳಿ ಮೌನವಾದರು. ಆ ಕಾಲದಲ್ಲಿ ಒಂದು ಪೌಂಡ್‌ಗೆ 15 ಭಾರತೀಯ ರೂಪಾಯಿಗಳ ಬೆಲೆ ಇತ್ತು. ಅಂದರೆ ಅದು ಒಟ್ಟು 255 ರೂಪಾಯಿಗಳ ಭಾರಿ ಮೊತ್ತವಾಗಿತ್ತು (ಎರಡು ಪೈಸೆಗೆ ಊಟ ಸಿಗುತ್ತಿದ್ದ ಕಾಲದಲ್ಲಿ). (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ-4, ಪುಟ-290, ವಿಕಿಪೀಡಿಯಾ)

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ ಬರೆಯುತ್ತಾರೆ: ದಾನ-ಧರ್ಮವು ಅವರ ಅಭ್ಯಾಸದಲ್ಲಿ ಬಹಳಷ್ಟಿತ್ತು ಮತ್ತು ತಮ್ಮ ಆದಾಯದ ಹತ್ತನೇ ಒಂದು ಭಾಗವನ್ನು ದಾನ ಮಾಡುವುದು ಅವರ ಸಾಮಾನ್ಯ ಅಭ್ಯಾಸವಾಗಿತ್ತು. ಈ ಕುರಿತು ಪತ್ನಿಯವರಿಂದ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಒಂದು ವರದಿಯನ್ನು ಉಲ್ಲೇಖಿಸಿದ್ದಾರೆ: ತಾಯಿ ನನ್ನೊಡನೆ ಹೀಗೆ ವಿವರಿಸಿದರು, ಹಝ್ರತ್ ಮಸೀಹ್ ಮೌಊದ್(ಅ) ಬಹಳ ದಾನ ಮಾಡುತ್ತಿದ್ದರು. ಅದನ್ನು ಸಾಮಾನ್ಯವಾಗಿ ನಮಗೂ ತಿಳಿಯದ ರೀತಿಯಲ್ಲಿ ರಹಸ್ಯವಾಗಿ ನೀಡುತ್ತಿದ್ದರು. "ಎಷ್ಟು ದಾನ ಮಾಡುತ್ತಿದ್ದರು?" ಎಂದು ನಾನು ಕೇಳಿದಾಗ, ತಾಯಿ ಹೇಳಿದರು: "ಬಹಳಷ್ಟು ನೀಡುತ್ತಿದ್ದರು

ಮತ್ತು ಕೊನೆಯ ದಿನಗಳಲ್ಲಿ ಎಷ್ಟು ಹಣ ಬರುತ್ತಿತ್ತೋ, ಅದರ ಹತ್ತನೇ ಒಂದು ಭಾಗವನ್ನು ದಾನಕ್ಕಾಗಿ ಪ್ರತ್ಯೇಕಿಸಿಡುತ್ತಿದ್ದರು ಮತ್ತು ಅದರಿಂದಲೇ ನೀಡುತ್ತಿದ್ದರು." ತಾಯಿ ಮುಂದುವರಿಸಿ ಹೇಳಿದರು: "ಇದರರ್ಥ ಹತ್ತನೇ ಒಂದು ಭಾಗಕ್ಕಿಂತ ಹೆಚ್ಚು ನೀಡುತ್ತಿರಲಿಲ್ಲ ಎಂದಲ್ಲ. ಕೆಲವೊಮ್ಮೆ ಖರ್ಚುಗಳು ಹೆಚ್ಚಾಗುತ್ತವೆ, ಅತಿಥಿಗಳು ಬರುತ್ತಾರೆ, ಊಟದ ಮನೆಯ ಖರ್ಚುಗಳಿರುತ್ತವೆ. ಆಗ ದಾನ-ಧರ್ಮದಲ್ಲಿ ಕೊರತೆಯಾಗಬಹುದು. ಆದರೆ ಮೊದಲೇ ದಾನದ ಮೊತ್ತವನ್ನು ಪ್ರತ್ಯೇಕಿಸಿಟ್ಟರೆ ಕೊರತೆಯಾಗುವುದಿಲ್ಲ, ಏಕೆಂದರೆ ಆ ಹಣ ಬೇರೆ ಖರ್ಚಿಗೆ ಬಳಕೆಯಾಗುವುದಿಲ್ಲ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಿದ್ದರು. ಇದೇ ಉದ್ದೇಶಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಆದಾಯದ ಹತ್ತನೇ ಒಂದು ಭಾಗವನ್ನು ಪ್ರತ್ಯೇಕಿಸಿಡುತ್ತಿದ್ದರು. ಸತ್ಯದಲ್ಲಿ, ಅವರು ಅದಕ್ಕಿಂತಲೂ ಬಹಳಷ್ಟು ಹೆಚ್ಚು ದಾನ ಮಾಡುತ್ತಿದ್ದರು." ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: "ದಾನ ನೀಡುವಾಗ ಅವರು ಅಹ್ಮದಿ ಮತ್ತು ಅಹ್ಮದಿಯೇತರ ಎಂಬ ಭೇದಭಾವ ಮಾಡುತ್ತಿದ್ದರೇ?" ಎಂದು ನಾನು ತಾಯಿಯನ್ನು ಕೇಳಿದಾಗ, "ಇಲ್ಲ, ಯಾರು ಅಹ್ಮದಿ, ಯಾರು ಅಹ್ಮದಿಯೇತರ ಎಂದು ಅವರು ಎಂದಿಗೂ ಭೇದಭಾವ ಮಾಡಲಿಲ್ಲ. ಅಗತ್ಯವುಳ್ಳವನಾಗಿದ್ದರೆ ಅವನಿಗೆ ಕೊಟ್ಟುಬಿಡುತ್ತಿದ್ದರು" ಎಂದು ತಾಯಿ ತಿಳಿಸಿದರು. (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ(ರ), ಭಾಗ-2, ಪುಟ-291)

ಹಝ್ರತ್ ಶೇಖ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್(ರ) ಬರೆಯುತ್ತಾರೆ: ಯಾಚಕನನ್ನು ಎಂದಿಗೂ ಬರಿಗೈಲಿ ಮರಳಿಸದೇ ಇರುವುದು ಅವರ ಅಭ್ಯಾಸವಾಗಿತ್ತು, ಹಾಗೆಯೇ ಯಾರಾದರೂ ಯಾಚಿಸದಿದ್ದರೂ ಅಗತ್ಯವುಳ್ಳವರಿಗೆ ಸಹಾಯ ಮಾಡುವುದು ಅವರ ಉತ್ತಮ ಗುಣವಾಗಿತ್ತು. ಅಷ್ಟೇ ಅಲ್ಲದೆ, ಯಾಚಿಸುವವರ ಸೂಕ್ಷ್ಮಾತಿಸೂಕ್ಷ್ಮ ವಿಧಾನಗಳನ್ನು ಅವರು ಬಹಳ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಿದ್ದರು. ಅಂತಹ ಸಂದರ್ಭಗಳಲ್ಲೂ ದಾನ ಮಾಡುತ್ತಿದ್ದರು. ಸಾಹಿಬ್‌ಝಾದಾ ಸಿರಾಜುಲ್ ಹಕ್ ಸಾಹಿಬ್‌ರ ವರದಿಯಂತೆ: ಒಮ್ಮೆ ಒಬ್ಬ ವ್ಯಕ್ತಿಯು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಒಂದು ಸುಂದರವಾದ ಟೋಪಿಯನ್ನು ಕಳುಹಿಸಿದನು. ಆ ಪಾರ್ಸಲ್ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ತಲುಪಿದಾಗ ಒಬ್ಬ ಹಿಂದೂ ಕೂಡ ಅಲ್ಲಿದ್ದರು. ಅವರು ಪಾರ್ಸಲ್ ಬಿಚ್ಚಿದಾಗ ಅದು ಟೋಪಿ ಆಗಿತ್ತು. ಆ ಹಿಂದೂ ಆ ಟೋಪಿಯನ್ನು ಬಹಳ ಹೊಗಳಿದರು. ಆತನ ಹೊಗಳಿಕೆಯನ್ನು ಕೇಳಿದೊಡನೆಯೇ ಹಝ್ರತ್ ಮಸೀಹ್ ಮೌಊದ್(ಅ) ಆ ಟೋಪಿಯನ್ನು ಅವರಿಗೇ ಕೊಟ್ಟುಬಿಟ್ಟರು. (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ(ರ), ಭಾಗ-2, ಪುಟ-290)

ಹಝ್ರತ್ ಮುನ್ಷಿ ಜ಼ಫರ್ ಅಹ್ಮದ್ ಸಾಹಿಬ್ ಕಪೂರ್‌ಥಲವಿ ವಿವರಿಸುತ್ತಾರೆ: ಹಾಜಿ ಹುಸೇನ್ ಎಂಬುವವರು ಹಜ್ ಮುಗಿಸಿ ಬಂದಾಗ, ಬೆಲೆಬಾಳುವ ನೈಜ ಮುತ್ತುಗಳ ಒಂದು ತಸ್ಬೀಹ್ ಮಾಡುವ ಮಾಲೆಯನ್ನು ಕಾಣಿಕೆಯಾಗಿ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ತಂದುಕೊಟ್ಟರು. "ನಾನು ಮತ್ತು ಸಿಯಾಲ್ಕೋಟ್‌ನ ಓರ್ವ ಸ್ನೇಹಿತರು ಆ ಸಮಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಬಳಿ ಇದ್ದೆವು". "ನಮ್ಮೆದುರೇ ಹಾಜಿ ಹುಸೇನ್ ಸಾಹಿಬ್ ಆ ತಸ್ಬೀಹ್ ಮಾಲೆಯನ್ನು ಹಝ್ರತ್ ಮಸೀಹ್ ಮೌಊದ್(ಅ)ಗೆ ನೀಡಿದರು. ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ) ಧನ್ಯವಾದ ಹೇಳಿದರು. ಆ ತಸ್ಬೀಹ್ ಮಾಲೆ ಬಹಳ ಸುಂದರವಾಗಿತ್ತು. ಹಾಜಿ ಹುಸೇನ್ ಹೋದ ನಂತರ ನಾನು ಆ ತಸ್ಬೀಹ್ ಮಾಲೆಯನ್ನು ಪಡೆಯಬೇಕು ಎಂದು ಯೋಚಿಸಿದೆ. ಆ ಸಿಯಾಲ್ಕೋಟ್‌ನ ಸ್ನೇಹಿತರು ಕೂಡ ಅದೇ ರೀತಿ ಯೋಚಿಸಿದ್ದರು. ಹಾಜಿ ಹುಸೇನ್ ಹೋದ ಬಳಿಕ ಆ ಸಿಯಾಲ್ಕೋಟ್‌ನ ಸ್ನೇಹಿತರು ಹೇಳಿದರು: ಹುಝೂರ್, ಈ ತಸ್ಬೀಹ್‌ಮಾಲೆ ಬಹಳ ಸುಂದರವಾಗಿದೆ. 'ನಿಮಗೆ ಇಷ್ಟವಿದ್ದರೆ ನೀವು ತೆಗೆದುಕೊಳ್ಳಿ ಎಂದು ಹೇಳಿ ಹಝ್ರತ್ ಮಸೀಹ್ ಮೌಊದ್(ಅ) ಆ ತಸ್ಬೀಹ್‌ಮಾಲೆಯನ್ನು ಅವರಿಗೆ ಕೊಟ್ಟರು. ಆಗ ನಾನು ಹೇಳಿದೆ: ಹುಝೂರ್, ಇದನ್ನು ತೆಗೆದುಕೊಳ್ಳಬೇಕೆಂದು ನಾನೂ ಯೋಚಿಸಿದ್ದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಹಾಗಾದರೆ ನೀವಿಬ್ಬರೂ ಅರ್ಧ-ಅರ್ಧ ಹಂಚಿಕೊಳ್ಳಿ. ಆ ಸಿಯಾಲ್ಕೋಟ್‌ನ ಸ್ನೇಹಿತ ನನ್ನೊಡನೆ ಹೇಳಿದರು: 'ಒಂದು ಜಪಮಾಲೆಯಲ್ಲಿ ನೂರು ಮುತ್ತುಗಳಿರುತ್ತವೆ, ಇದು ನನ್ನ ಬಳಿಯೇ ಇರಲಿ' ನಾನು ಸರಿ ನೀವೇ ಇಟ್ಟುಕೊಳ್ಳಿ ಎಂದು ಅವರಿಗೆ ಬಿಟ್ಟುಕೊಟ್ಟೆ." (ಅಸ್‌ಹಾಬೆ ಅಹ್ಮದ್, ಸಂಪುಟ-4, ಪುಟ-215, ಉರ್ದು ಲುಗ್ಗತ್, ಸಂಪುಟ-11, ಪುಟ-545)

ಹಝ್ರತ್ ಹಕೀಮ್ ಅಲ್ಲಾಹ್ ದಿತ್ತಾ ಸಾಹಿಬ್ ವಿವರಿಸುತ್ತಾರೆ: ಸರ್‌ಫರಾಝ್ ಖಾನ್ ಎಂಬುವವರು ಹೀಗೆ ತಿಳಿಸಿದರು: ನಾವು ಜಲ್ಸಗೆ ಬಂದಿದ್ದೆವು ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಯಾರೋ ಒಂದು ಕುದುರೆಯನ್ನು ನೀಡಿದ್ದರು. ಆ ಕುದುರೆ ನನಗೆ ಸಿಕ್ಕರೆ, ನಾನು ಅದನ್ನು ತೆಗೆದುಕೊಂಡು ಹೋಗಿ ಇದು ಮಸೀಹ್‌ರ ಕುದುರೆ ಎಂದು ಹೇಳುತ್ತೇನೆ ಎಂದು ನಾನು ಯೋಚಿಸಿದೆ. ಅದು ಸವಾರಿ ಮಾಡಲು ಯೋಗ್ಯವಾದ ಉತ್ತಮ ತಳಿಯ ಕುದುರೆಯಾಗಿತ್ತು. ಜಲ್ಸ ಮುಗಿದ ನಂತರ ನಾನು ಮರಳಿ ಹೋಗಲು ಬಯಸುತ್ತೇನೆ ಎಂದು ನಾನು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಹೇಳಿದೆ. 'ಸ್ವಲ್ಪ ಇರಿ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಮೂರನೇ ದಿನ ನಾನು ಪುನಃ ಹಾಗೆಯೇ ಹೇಳಿದಾಗ, ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಚೌಧರಿ ಸಾಹಿಬ್, ಈ ಕುದುರೆಯನ್ನು ತೆಗೆದುಕೊಂಡು ಹೋಗಿರಿ. ನಾನು ಕೇಳಿದೆ: ಹುಝೂರ್, ಈ ಕುದುರೆಯ ಬೆಲೆ ಎಷ್ಟು? ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಇದಕ್ಕೆ ಹುಲ್ಲು-ಕಾಳು ಹಾಕಿರಿ, ಇದರ ಮೇಲೆ ಸವಾರಿ ಮಾಡಿರಿ, ಅದೇ ಇದರ ಬೆಲೆಯಾಗಿದೆ. ಬೇರೆ ಬೆಲೆಯಿಲ್ಲ, ತೆಗೆದುಕೊಂಡು ಹೋಗಿ ಸವಾರಿ ಮಾಡಿ. (ರಿವಾಯಾತ್ ಅಸ್‌ಹಾಭೆ ಅಹ್ಮದ್, ಸಂಪುಟ-1, ಪುಟ-110)

ಹಝ್ರತ್ ಮಲಿಕ್ ಗುಲಾಮ್ ಹುಸೇನ್ ಸಾಹಿಬ್ ವಿವರಿಸುತ್ತಾರೆ: ಮೌಲವಿ ಅಬ್ದುರ್ರಹ್ಮಾನ್ ಸಾಹಿಬ್(ರ) ಅಫ್ಘಾನಿಸ್ತಾನದಿಂದ ಬಂದಾಗ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಭೇಟಿಯಾಗಲು ಬಯಸಿದರು. ಆ ಸಮಯದಲ್ಲಿ ಅವರು ಅನೇಕ ವಸ್ತುಗಳನ್ನು ತಂದಿದ್ದರು, ಜೊತೆಗೆ ಒಂದು ಚರ್ಮದ ಕೋಟು ಕೂಡ ತಂದಿದ್ದರು. ನಾನು ವಿಷಯ ತಿಳಿಸಿದಾಗ ಹಝ್ರತ್ ಮಸೀಹ್ ಮೌಊದ್(ಅ) ಒಳಗೆ ಕರೆದರು. ಅವರು ಆ ವಸ್ತುಗಳನ್ನು ಮತ್ತು ಕೋಟನ್ನು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ನೀಡಿದರು. ಹಝ್ರತ್ ಮಸೀಹ್ ಮೌಊದ್(ಅ) ಬಹಳ ಸಂತೋಷ ವ್ಯಕ್ತಪಡಿಸಿ, ಮೌಲವಿ ಸಾಹಿಬ್ ನೀವು ಬಹಳ ಶ್ರಮಪಟ್ಟಿದ್ದೀರಿ ಎಂದರು. ಅವರು ಹೇಳಿದರು: ಹುಝೂರ್, ಈ ಕೋಟನ್ನು ತಮಗಾಗಿಯೇ ತಂದಿದ್ದೇನೆ, ನೀವು ನನ್ನೆದುರೇ ಇದನ್ನು ಧರಿಸಬೇಕೆಂದು ನನ್ನ ಆಸೆ. ಹಝ್ರತ್ ಸಾಹಿಬ್(ಅ) ಎದ್ದು ನಿಂತು ಅದನ್ನು ಧರಿಸಿದರು. ಅದು ಮಣಿಗಂಟಿನವರೆಗೂ ಬರುವ ಉದ್ದನೆಯ ಕೋಟು ಆಗಿತ್ತು. ಸಂಜೆ ಊಟದ ಸಮಯದಲ್ಲಿ ಖಾಜಾ ಕಮಾಲುದ್ದೀನ್ ಸಾಹಿಬ್(ರ) ಹೇಳಿದರು: ಹುಝೂರ್, ಮೌಲವಿ ಅಬ್ದುರ್ರಹ್ಮಾನ್ ಸಾಹಿಬ್ ತಂದಿರುವ ಕೋಟು ಬಹಳ ಬೆಲೆಬಾಳುವ, ಬೆಚ್ಚಗಿರುವ ಮತ್ತು ಅತ್ಯುತ್ತಮ ಗುಣಮಟ್ಟದ್ದಾಗಿದೆ. ಖಾಜಾ ಸಾಹಿಬ್ ಅದನ್ನು ಮೊದಲೇ ನೋಡಿದ್ದರು. ಆಗ ಹುಝೂರ್ ಹೇಳಿದರು: ಖ್ವಾಜಾ ಸಾಹಿಬ್ ನಿಮಗೆ ಅದು ಬಹಳ ಇಷ್ಟವಾಗಿದ್ದರೆ, ನೀವೇ ತೆಗೆದುಕೊಳ್ಳಿ. ಹೀಗೆ ಹಝ್ರತ್ ಮಸೀಹ್ ಮೌಊದ್(ಅ) ಆ ಕೋಟನ್ನು ಅವರಿಗೆ ಕೊಟ್ಟುಬಿಟ್ಟರು. (ರಿವಾಯಾತೆ ಅಸ್‌ಹಾಬೆ ಅಹ್ಮದ್, ಸಂಪುಟ-4, ಪುಟ-14-15)

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ ವಿವರಿಸುತ್ತಾರೆ: ಲುಧಿಯಾನಾದ ಉಣ್ಣೆ ಬಟ್ಟೆ ವ್ಯಾಪಾರಿ ಹಾಫಿಝ್ ನೂರ್ ಅಹ್ಮದ್ ಸಾಹಿಬ್ ಹಝ್ರತ್ ಮಸೀಹ್ ಮೌಊದ್(ಅ)ರ ಹಳೆಯ ಮತ್ತು ನಿಷ್ಠಾವಂತ ಸೇವಕರಲ್ಲಿ ಒಬ್ಬರಾಗಿದ್ದರು. ಒಮ್ಮೆ ಅವರ ವ್ಯಾಪಾರದಲ್ಲಿ ಭಾರಿ ನಷ್ಟವುಂಟಾಗಿ ವ್ಯಾಪಾರವೇ ನಿಂತುಹೋಯಿತು. ಆಗ ಅವರು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಬೇರೆ ಕಡೆಗೆ ಹೋಗಿ ಬೇರೆ ವ್ಯಾಪಾರ ಮಾಡಲು ಬಯಸಿದರು. ಅವರು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ನಿರಂತರ ಸಂಪರ್ಕದಲ್ಲಿದ್ದರು ಮತ್ತು ತಮ್ಮ ಶಕ್ತಿಗೂ ಮೀರಿ ಆರ್ಥಿಕ ಸಹಾಯ ಮಾಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ)ರ ದಾನಶೀಲತೆ ಮತ್ತು ಉದಾರತೆಯ ಬಗ್ಗೆ ಅವರು ಹೀಗೆ ಹೇಳುತ್ತಾರೆ: ಅವರು ಸ್ವಲ್ಪ ಕೊಡುವುದನ್ನು ಅರಿತೇ ಇರಲಿಲ್ಲ. ತಮ್ಮ ವೈಯಕ್ತಿಕ ಘಟನೆಯನ್ನು ವಿವರಿಸುತ್ತಾ ಅವರು ಹೇಳುತ್ತಾರೆ: ನನ್ನ ವ್ಯಾಪಾರ ಹಾಳಾದಾಗ ಮತ್ತು ನಾನು ಬೇರೆ ಕಡೆಗೆ ಹೋಗಿ ವ್ಯಾಪಾರ ಮಾಡಲು ನಿರ್ಧರಿಸಿದಾಗ, ವ್ಯಾಪಾರ ಶುರು ಮಾಡಲು ಹಝ್ರತ್ ಮಸೀಹ್ ಮೌಊದ್(ಅ)ರ ಬಳಿ ಸ್ವಲ್ಪ ಸಾಲ ಕೇಳಿದೆ. ಹಝ್ರತ್ ಮಸೀಹ್ ಮೌಊದ್(ಅ) ತಾವು ಹಣ ಇಡುತ್ತಿದ್ದ ಪೆಟ್ಟಿಗೆಯನ್ನೇ ತಂದು ನನ್ನ ಮುಂದಿಟ್ಟು, ಎಷ್ಟು ಬೇಕೋ ಅಷ್ಟು ತೆಗೆದುಕೊಳ್ಳಿ ಎಂದರು. ಹಝ್ರತ್ ಮಸೀಹ್ ಮೌಊದ್(ಅ) ಪೂರ್ತಿಯಾಗಿ ತೆಗೆದುಕೋ ಎಂದು ಹೇಳುತ್ತಿದ್ದರೂ ನಾನು ನನ್ನ ಅಗತ್ಯಕ್ಕೆ ತಕ್ಕಷ್ಟು ಮಾತ್ರ ತೆಗೆದುಕೊಂಡೆ. ವಾಸ್ತವವೇನೆಂದರೆ, ಸ್ನೇಹಿತರ ಜೊತೆಗಿನ ಅವರ ಒಡನಾಟವೇ ವಿಭಿನ್ನವಾಗಿತ್ತು. ಅವರು ತಮ್ಮ ಸಂಪತ್ತನ್ನು ಸ್ನೇಹಿತರ ಸಂಪತ್ತೆಂದೇ ಭಾವಿಸುತ್ತಿದ್ದರು ಮತ್ತು ಈ ವಿಷಯದಲ್ಲಿ ಯಾರಾದರೂ ಮುಜುಗರ ಪಟ್ಟರೆ ಅವರಿಗೆ ಬಹಳ ಬೇಸರವಾಗುತ್ತಿತ್ತು.

(ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ(ರ), ಭಾಗ-3, ಪುಟ-306-307, ಫೇರೊಝುಲ್ ಲುಗ್ಗಾತ್, ಪುಟ-298, ಲುಗ್ಗಾತ್ ಫಾರ್ಸಿ ಪುಟ-363, ದಾರ್ ಉಮರ್ ಫಾರೂಖ್)

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್(ರ) ಹೇಳುತ್ತಾರೆ: ಶೇಖ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್ ಸಿರ್ಸಾವಿ ಎಂಬವರು ನನ್ನ 32 ವರ್ಷಗಳ ಆತ್ಮೀಯ ಸ್ನೇಹಿತ, ಸಹೋದರ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಹಳೆಯ ಸೇವಕರಾಗಿದ್ದಾರೆ. ಆರಂಭದಿಂದಲೇ ಅವರ ಸ್ವಭಾವ ಆಧ್ಯಾತ್ಮಿಕವಾಗಿತ್ತು. ತಲೀಮುಲ್ ಇಸ್ಲಾಮ್ ಶಾಲೆಯಲ್ಲಿ ಆರಂಭದಿಂದ ಇಂದಿನವರೆಗೂ ಶಿಕ್ಷಕರಾಗಿದ್ದಾರೆ. ಆರಂಭದ ದಿನಗಳಲ್ಲಿ ಅವರೇ ಅತಿಥಿಗಳಿಗೆ

ಊಟ ಬಡಿಸುತ್ತಿದ್ದರು, ಅಂದರೆ ಅವರನ್ನು ಅತಿಥಿ ಸತ್ಕಾರದ ಮೇಲ್ವಿಚಾರಕರು ಎನ್ನಬಹುದು. ಅವರು ಇಲ್ಲಿಗೆ ಬಂದಾಗಿನಿಂದ ಹಝ್ರತ್ ಮಸೀಹ್ ಮೌಊದ್(ಅ)ರ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದ್ದರು ಮತ್ತು ಅವರ ಅಗತ್ಯಗಳನ್ನು ಪೂರೈಸುವ ಸಂಪೂರ್ಣ ಜವಾಬ್ದಾರಿಯನ್ನು ತಾವೇ ಹೊತ್ತಿದ್ದರು. ಒಮ್ಮೆ ಹಝ್ರತ್ ಮೀರ್ ನಾಸಿರ್ ನವಾಬ್ ಸಾಹಿಬ್(ರ) ಶೇಖ್ ಸಾಹಿಬ್‌ರ ಮೇಲೆ ತೀವ್ರವಾಗಿ ಕೋಪಗೊಂಡರು. ಅವರು ಲಂಗರ್‌ಖಾನೆಯ ನಿರ್ವಹಣೆಗಾಗಿ ಸಿಹಿತಿಂಡಿ ಅಂಗಡಿಯವರ ಬಳಿ ಮಾಡಿದ ಸಾಲಗಳ ಪಟ್ಟಿಯನ್ನು ಸಿದ್ಧಪಡಿಸಿದರು. ಆದರೆ ಆ ಸಾಲಗಳು ತೀರಿಸಲ್ಪಟ್ಟಿವೆ ಎಂಬುದು ಅವರಿಗೆ ತಿಳಿದಿರಲಿಲ್ಲ. ಲಂಗರ್‌ಖಾನೆಯ ನಿರ್ವಹಣೆಗಾಗಿ ಇಷ್ಟೊಂದು ಸಾಲ ಮಾಡಿದ್ದಾರೆ ಎಂಬ ವಿಷಯ ಹಝ್ರತ್ ಮಸೀಹ್ ಮೌಊದ್(ಅ)ರ ಬಳಿಗೆ ಹೋಯಿತು. ಹಝ್ರತ್ ಮಸೀಹ್ ಮೌಊದ್(ಅ) ನಗುತ್ತಾ ಹೀಗೆ ಹೇಳಿದರು: ನನಗೆ ಈ ವಿಷಯ ತಿಳಿದಿದೆ ಮತ್ತು ಆ ಸಾಲ ತೀರಿಸಲ್ಪಟ್ಟಿದೆ. ಮೀರ್ ಸಾಹಿಬ್ ನೀವು ಚಿಂತಿಸಬೇಡಿ, ಪ್ರತಿಯೊಂದು ವಾರವೂ ಈ ಸಾಲ ಚುಕ್ತಾ ಆಗುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಶೇಖ್ ಸಾಹಿಬ್‌ರ ವಾರದ ಅಥವಾ ಅವರು ಬಯಸಿದಾಗಿನ ಖರ್ಚುಗಳನ್ನು ನೀಡುತ್ತಿದ್ದರು. ಒಬ್ಬ ಮಗನು ತಂದೆಯ ಬಳಿ ಕೇಳುವಂತೆ ಶೇಖ್ ಸಾಹಿಬ್ ಅತ್ಯಂತ ಮುಕ್ತವಾಗಿ, ಇಷ್ಟು ಖರ್ಚಾಗಿದೆ ಎಂದು ಹೇಳುತ್ತಿದ್ದರು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ತಕ್ಷಣವೇ ಅದನ್ನು ನೀಡುತ್ತಿದ್ದರು. ಇಂತಹ ಪರಿಪೋಷಣೆಯ ರೀತಿಯ ಉದಾರತೆ ಅವರಲ್ಲಿತ್ತು. (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ(ರ), ಭಾಗ–3, ಪುಟ–310–311, ಫೇರೋಝುಲ್ ಲುಗ್ಹಾತ್ ಪುಟ–371)

ಇದರಲ್ಲಿ ವೈಯಕ್ತಿಕ ಖರ್ಚುಗಳು ಇರುತ್ತಿದ್ದವು ಮತ್ತು ಲಂಗರ್‌ಖಾನೆಯ ಖರ್ಚುಗಳೂ ಇರುತ್ತಿದ್ದವು.

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ(ರ) ಬರೆಯುತ್ತಾರೆ: ಹಝ್ರತ್ ಸೈಯದ್ ಫಝ್ಲ್ ಶಾಹ್ ಸಾಹಿಬ್(ರ) ಹಝ್ರತ್ ಮಸೀಹ್ ಮೌಊದ್(ಅ)ರ ಅತ್ಯಂತ ನಿಷ್ಠಾವಂತ ಸೇವಕರಲ್ಲಿ ಒಬ್ಬರಾಗಿದ್ದರು. ಶಾಹ್ ಸಾಹಿಬ್ ಸೈಯದ್ ನಾಸಿರ್ ಶಾಹ್ ಸಾಹಿಬ್‌ರ ಅಣ್ಣನಾಗಿದ್ದರು. ಹಝ್ರತ್ ಮಸೀಹ್ ಮೌಊದ್(ಅ)ರ ಬಗ್ಗೆ ಅವರಿಗೆ ಅಪಾರ ಪ್ರೀತಿಯಿತ್ತು. ಕೊನೆಗೆ ಅವರು ವಲಸೆ ಬಂದು ಖಾದಿಯಾನಿಗೆ ಬಂದರು ಮತ್ತು ವೃದ್ಧಾಶ್ರಮದಲ್ಲಿ ವಾಸಿಸುತ್ತಿದ್ದರು. ಜುಲೈ 1900ರ ಘಟನೆ, ಅವರು ಖಾದಿಯಾನಿಗೆ ಬಂದಿದ್ದರು. 6 ಜುಲೈ 1900ರಂದು ಅವರು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಮರಳಿ ಹೋಗಲು ಅನುಮತಿ ಕೇಳಿದರು ಮತ್ತು ಕೆಲವು ಉಪದೇಶದ ಮಾತುಗಳನ್ನು ಬರೆದುಕೊಡುವಂತೆ ವಿನಂತಿಸಿದರು. ಜೊತೆಗೆ ಕೆಲವು ಔಷಧಿಗಳು ಮತ್ತು ಒಂದು ಉಡುಪನ್ನೂ ಕೇಳಿದರು. ಆ ಸಮಯದಲ್ಲಿ ಹಝ್ರತ್ ಸಾಹಿಬ್(ಅ)ರಿಗೆ ತಲೆತಿರುಗುವಿಕೆ ಮತ್ತು ತೀವ್ರ ತಲೆನೋವಿನ ಸಮಸ್ಯೆಯಿತ್ತು, ನಮಾಝಿಗೂ ಬರಲಾಗಿರಲಿಲ್ಲ. ಆದರೂ ಆ ತೀವ್ರ ತಲೆನೋವಿನ ನಡುವೆಯೂ ಶಾಹ್ ಸಾಹಿಬ್‌ರ ಪತ್ರಕ್ಕೆ ಉತ್ತರವಾಗಿ ಒಂದು ಉಪದೇಶವನ್ನು ಬರೆದರು, ಜೊತೆಗೆ ಔಷಧಿ ಮತ್ತು ಉಡುಪನ್ನೂ ನೀಡಿದರು. ಈ ಘಟನೆಯು, ತಮ್ಮ ಅನಾರೋಗ್ಯದ ಅತ್ಯಂತ ಕಠಿಣ ಪರಿಸ್ಥಿತಿಯಲ್ಲೂ ತಮ್ಮ ಸೇವಕರ ನ್ಯಾಯಸಮ್ಮತ ಕೋರಿಕೆಗಳನ್ನು ಪೂರೈಸಲು ಅವರು ಸದಾ ಸಿದ್ಧರಿದ್ದರು ಮತ್ತು ಜನರ ಒಳಿತು ಹಾಗೂ ಪ್ರಯೋಜನಕ್ಕಾಗಿ ತಮ್ಮ ನೋವನ್ನೂ ಲೆಕ್ಕಿಸುತ್ತಿರಲಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.
(ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ(ರ), ಭಾಗ–3, ಪುಟ–307–308)

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ)ರ ನಡವಳಿಕೆಯನ್ನು ಗಮನಿಸುವಾಗ, ಕೆಲವೊಮ್ಮೆ ಅವರು ಸ್ನೇಹಿತರ ಸಂತೋಷದ ಸಮಾರಂಭಗಳಲ್ಲಿ ಉದಾರವಾಗಿ ಪಾಲ್ಗೊಳ್ಳುತ್ತಿದ್ದರು ಎಂಬುದು ತಿಳಿದುಬರುತ್ತದೆ. ಇದು ಅವರ ಪ್ರೀತಿ ಮತ್ತು ಉದಾರತೆಯ ಸಂಕೇತವಾಗಿತ್ತು. ಹಝ್ರತ್ ಮುನ್ಷಿ ಅಬ್ದುಲ್ಲಾ ಸಾಹಿಬ್ ಸನೌರಿರಿಗೆ ಅವರು ಕಾಲಕಾಲಕ್ಕೆ ಬರೆದ ಪತ್ರಗಳು ಮತ್ತು ಸ್ವತಃ ಮುನ್ಷಿ ಸಾಹಿಬ್‌ರ ಹೇಳಿಕೆಯಿಂದ ಸಾಬೀತಾಗುವುದೇನೆಂದರೆ, ಒಮ್ಮೆ ಮುನ್ಷಿ ಸಾಹಿಬ್‌ರ ವಿವಾಹದ ಔತಣದ ಸಮಯದಲ್ಲಿ ಮತ್ತು ಇನ್ನೊಮ್ಮೆ ಅವರ ಮಗನ ನಾಮಕರಣ ಸಮಾರಂಭದ ಸಮಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಬಳಿಯಿಂದ ಹಣ ಖರ್ಚು ಮಾಡಿದ್ದರು ಮತ್ತು ಹೀಗೆ ಖರ್ಚು ಮಾಡುವುದರಲ್ಲಿ ಅವರಿಗೆ ಬಹಳ ಸಂತೋಷವಿತ್ತು. ಕೆಲವೊಮ್ಮೆ ಜನರು ತಮ್ಮ ಇಂತಹ ಸಮಾರಂಭಗಳಿಗಾಗಿ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಸ್ವಲ್ಪ ಹಣ ಕಳುಹಿಸಿ, ಅಲ್ಲಿಯೇ ನಮ್ಮ ಪರವಾಗಿ ಊಟದ ವ್ಯವಸ್ಥೆ ಮಾಡಿ ಎಂದು ಬರೆಯುತ್ತಿದ್ದರು. ಆದರೆ ಖಾದಿಯಾನಿನಲ್ಲಿ ಊಟದ ವ್ಯವಸ್ಥೆ ಎಂದರೆ ಕೇವಲ ಕೆಲವೇ ಜನರ ಊಟವಲ್ಲ ಎಂಬುದನ್ನು ಅವರು ಮರೆತುಬಿಡುತ್ತಿದ್ದರು, ಏಕೆಂದರೆ ಹಝ್ರತ್ ಮಸೀಹ್ ಮೌಊದ್(ಅ)ರ ಸುತ್ತಮುತ್ತ ಬಹಳಷ್ಟು ಜನರಿರುತ್ತಿದ್ದರು. ಅವರು ಕಳುಹಿಸುತ್ತಿದ್ದ ಹಣ ಬಹಳ ಕಡಿಮೆಯಿರುತ್ತಿತ್ತು ಮತ್ತು ಅದು ಸಾಕಾಗುತ್ತಿರಲಿಲ್ಲ. ಆದರೂ ಹಝ್ರತ್ ಮಸೀಹ್ ಮೌಊದ್(ಅ) ಈ ಬಗ್ಗೆ ಏನೂ ಹೇಳದೆ, ತಮ್ಮ ಕಡೆಯಿಂದಲೂ ಹಣ ಸೇರಿಸಿ ಅವರ ಇಚ್ಛೆಯನ್ನು ಪೂರೈಸುತ್ತಿದ್ದರು. ಇಂತಹ ಅನೇಕ ಸಂದರ್ಭಗಳು ಎದುರಾಗುತ್ತಿದ್ದವು, ಆದರೆ ಹಝ್ರತ್ ಮಸೀಹ್ ಮೌಊದ್(ಅ) ಎಂದಿಗೂ ನೇರವಾಗಿಯಾಗಲಿ, ಪರೋಕ್ಷವಾಗಿಯಾಗಲಿ ಇದನ್ನು ಪ್ರಸ್ತಾಪಿಸುತ್ತಿರಲಿಲ್ಲ, ಬದಲಾಗಿ ಇದು ಆ ಸ್ನೇಹಿತನ ಕಡೆಯಿಂದ ನೀಡುತ್ತಿರುವ ಔತಣ ಎಂದೇ ಹೇಳುತ್ತಿದ್ದರು. (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ(ರ), ಭಾಗ–3, ಪುಟ–310)

ಕೆಲವೊಮ್ಮೆ ಆತ್ಮೀಯ ಸ್ನೇಹಿತರಾಗಿದ್ದರೆ ಈ ಬಗ್ಗೆ ಅವರಿಗೆ ತಿಳಿಸುತ್ತಿದ್ದರು. ಹಝ್ರತ್ ಮುನ್ಷಿ ಅಬ್ದುಲ್ಲಾ ಸಾಹಿಬ್ ಸನೌರಿ(ರ)ರ ವಿವಾಹದ ಸಂದರ್ಭದಲ್ಲಿ ಬರೆದ ಪತ್ರದಲ್ಲಿ ಹೀಗೆ ತಿಳಿಸಿದ್ದರು: ನಿಮಗೆ ವಿವಾಹದ ಶುಭಾಶಯಗಳು. ನಿಮ್ಮ ಪತ್ರದಂತೆ ಶುಕ್ರವಾರ ನಿಮ್ಮ ಪರವಾಗಿ ಅತಿಥಿಗಳಿಗೆ ವಿವಾಹದ ಔತಣವನ್ನು ಬಡಿಸಲಾಯಿತು. ಅತಿಥಿಗಳು ಬಹಳಷ್ಟಿದ್ದರು ಮತ್ತು ಸೇಠ್ ಅಬ್ದುರ್ರಹ್ಮಾನ್ ಸಾಹಿಬ್ ಮದರಾಸಿ ಹಾಗೂ ಇತರ ಅನೇಕ ಗಣ್ಯ ಅತಿಥಿಗಳು ಇದ್ದರು, ಒಟ್ಟು 80ಕ್ಕೂ ಹೆಚ್ಚು ಜನರಿದ್ದರು. ನೀವು 10 ರೂಪಾಯಿ ಕಳುಹಿಸಿದ್ದಿರಿ, ಅದು ಸಾಕಾಗುತ್ತಿರಲಿಲ್ಲ. ಆದ್ದರಿಂದ ಈ ಸಂತೋಷದ ಸಂದರ್ಭದಲ್ಲಿ ನಾನು ನನ್ನ ಕಡೆಯಿಂದ 10 ರೂಪಾಯಿ ಸೇರಿಸಿ 20 ರೂಪಾಯಿಗಳಲ್ಲಿ ಊಟದ ವ್ಯವಸ್ಥೆ ಮಾಡಿದೆ. ಪಲಾವ್, ಸಿಹಿ ಅನ್ನ, ಖೋರ್ಮಾ ಮತ್ತು ನಾನ್ ಮುಂತಾದ ಉತ್ತಮ ಊಟವನ್ನು ತಯಾರಿಸಲಾಗಿತ್ತು. ಅತಿಥಿಗಳು ಬಹಳ ಸಂತೋಷಪಟ್ಟು ನಿಮಗೆ ಪ್ರಾರ್ಥನೆ ಸಲ್ಲಿಸಿದರು. ಅತಿಥಿಗಳಿಗೆ ಇದು ಅವರ ಕಡೆಯಿಂದಲೇ ಇರುವ ಔತಣ ಎಂದೇ ತಿಳಿಸಲಾಗಿತ್ತು, ತಾವು ಹಣ ಸೇರಿಸಿದ್ದನ್ನು ಬಹಿರಂಗಪಡಿಸಿರಲಿಲ್ಲ. (ಮಕ್ತೂಬಾತೆ ಅಹ್ಮದ್, ಸಂಪುಟ–3, ಪುಟ–230, ಮಕ್ತೂಬ್ ಸಂಖ್ಯೆ–60, ಮುನ್ಶಿ ಅಬ್ದುಲ್ಲಾ ಸನ್ನೋರಿ ಸಾಹಿಬ್)

ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಮುನ್ಷಿ ಅಬ್ದುಲ್ಲಾ ಸಾಹಿಬ್ ಸನೌರಿ(ರ)ರ ಮಗನ ನಾಮಕರಣದ ಸಂದರ್ಭದಲ್ಲಿ ಬರೆದ ಪತ್ರದಲ್ಲಿ ಹೀಗೆ ತಿಳಿಸಿದ್ದಾರೆ: ಎರಡು ಕುರಿಗಳನ್ನು ಬಲಿಕೊಡಲಾಯಿತು, ಅದರ ಮಾಂಸ ಅತ್ಯುತ್ತಮವಾಗಿತ್ತು. ಒಂದು ಪಾತ್ರೆ ಮಾಂಸದ ಪಲಾವ್ ಮತ್ತು ಒಂದು ಪಾತ್ರೆ ಕೇಸರಿ ಇತ್ಯಾದಿಗಳನ್ನು ಹಾಕಿದ ಸಿಹಿ ಅನ್ನವನ್ನು ಮಾಡಲಾಗಿತ್ತು. ರೊಟ್ಟಿ ಮತ್ತು ಮಾಂಸವನ್ನೂ ಮಾಡಲಾಗಿತ್ತು. ಸುಮಾರು 70 ಅತಿಥಿಗಳಿದ್ದರು. ಅವರಿಗೆಲ್ಲರಿಗೂ ಉತ್ತಮವಾಗಿ ಊಟ ಬಡಿಸಲಾಯಿತು. ನಿಮ್ಮ ಸದುದ್ದೇಶದಿಂದಾಗಿ ಪಲಾವ್ ಮತ್ತು ಸಿಹಿ ಅನ್ನ ಎರಡೂ ಬಹಳ ರುಚಿಯಾಗಿ ಬಂದಿದ್ದವು. ಇದು ಒಟ್ಟು 24 ರೂಪಾಯಿಗಳ ಖರ್ಚಿನಲ್ಲಿ ಮುಗಿಯಿತು, ನೀವು ಇಷ್ಟೊಂದು ಹಣ ನೀಡಲಾರಿರಿ ಎಂದು ನನಗೆ ತಿಳಿದಿದೆ. ಹಾಗಾಗಿ ಅದರ ಅರ್ಧದಷ್ಟು, ಅಂದರೆ 12 ರೂಪಾಯಿಗಳನ್ನು ನಿಮಗೆ ಸಾಧ್ಯವಾದರೆ ಕಳುಹಿಸಿ ಮತ್ತು ಈ ಔತಣಕ್ಕಾಗಿ ಅವರಿಗೆ ಶುಭಾಶಯಗಳನ್ನೂ ತಿಳಿಸಿದರು.

(ಮಕ್ತೂಬಾತೆ ಅಹ್ಮದ್, ಸಂಪುಟ–3, ಪುಟ–234, ಮಕ್ತೂಬಾತೆ ಸಂಖ್ಯೆ–65, ಮುನ್ಶಿ ಅಬ್ದುಲ್ಲಾಹ್ ಸನ್ನೋರಿ ಸಾಹಿಬ್(ರ))

ಹಝ್ರತ್ ಅಹ್ಮದ್ ನೂರ್ ಕಾಬೂಲಿ ಸಾಹಿಬ್(ರ) ವಿವರಿಸುತ್ತಾರೆ: 1902ರಲ್ಲಿ ನಾನು ಖಾದಿಯಾನಿಗೆ ಬಂದಾಗ, ಅಸರ್ ಸಮಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ನನ್ನಿಂದ ಬೈಅತ್ ಸ್ವೀಕರಿಸಿದರು. ಹಝ್ರತ್ ಮಸೀಹ್ ಮೌಊದ್(ಅ) ತಾವಾಗಿಯೇ ನನಗೆ ಮನೆ ಕಟ್ಟಲು ಜಾಗ ನೀಡಿದರು ಮತ್ತು ನನ್ನ ಕೋರಿಕೆಯಿಲ್ಲದೆಯೇ ನನ್ನ ವಿವಾಹವನ್ನೂ ಮಾಡಿಸಿದರು. ನನಗೆ ತಿಳಿಯದಂತೆಯೇ ಕೆಲವು ಸ್ನೇಹಿತರೊಂದಿಗೆ ನನ್ನನ್ನು ಕಳುಹಿಸಿಕೊಟ್ಟರು. ನನಗಾಗಿ ತಮ್ಮ ಲಂಗರ್‌ನಿಂದ ಒಂದು ಚೀಲ ಗೋಧಿ ಹಿಟ್ಟನ್ನು ನಿಗದಿಪಡಿಸಿದರು. ‘ಅಹ್ಮದ್ ನೂರ್ ಬದುಕಿರುವವರೆಗೂ ನನ್ನ ಖಾತೆಯಿಂದ ಈ ಹಿಟ್ಟನ್ನು ಅವನಿಗೆ ನೀಡುತ್ತಿರಿ’ ಎಂದು ಹಝ್ರತ್ ಮಸೀಹ್ ಮೌಊದ್(ಅ) ಮೌಲವಿ ಮುಹಮ್ಮದ್ ಅಲಿ ಸಾಹಿಬ್‌ರಿಗೆ ಆದೇಶ ನೀಡಿದರು. (ರಿವಾತ್ ಅಹ್ಮದ್, ಸಂಪುಟ–2, ಪುಟ–307)

ಮಿಯಾನ್ ಅಬ್ದುರ್ರಹೀಮ್ ಸಾಹಿಬ್(ರ) ವಿವರಿಸುತ್ತಾರೆ: ಒಮ್ಮೆ ನಾನು ತೀವ್ರ ಅನಾರೋಗ್ಯಕ್ಕೀಡಾಗಿದ್ದೆ. ನಾನು ಬದುಕುಳಿಯುವ ಆಸೆಯೇ ಇರಲಿಲ್ಲ ಮತ್ತು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದೆ. ಹಝ್ರತ್ ಮಸೀಹ್ ಮೌಊದ್(ಅ) ಬುಟ್ಟರ್ ಗ್ರಾಮದ ಕಡೆಯಿಂದ ವಾಯುವಿಹಾರ ಮುಗಿಸಿ ಹಿಂತಿರುಗುತ್ತಿದ್ದಾಗ, ನನ್ನ ದೊಡ್ಡಪ್ಪ ಮೀರನ್ ಬಖ್ಶ್ ಸಾಹಿಬ್(ರ) ಮೋರಿ ದರ್ವಾಝಾದ ಚೌಕದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಭೇಟಿಯಾಗಿ ಹೀಗೆ ಹೇಳಿದರು: ಹುಝೂರ್, ಅಬ್ದುರ್ರಹೀಮ್‌ನ ಆರೋಗ್ಯ ಬಹಳ ಕೆಟ್ಟುಹೋಗಿದೆ, ದಯವಿಟ್ಟು ಬಂದು ನೋಡಿರಿ.’ ಹಝ್ರತ್ ಮಸೀಹ್ ಮೌಊದ್(ಅ)ರ ಜೊತೆಗೆ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹಾಗೂ ಇತರ ಅನೇಕ ಸ್ನೇಹಿತರಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ನಮ್ಮ ಮನೆಗೆ ಬಂದರು. ನಾನು ಮಂಚದ ಮೇಲೆ ಮಲಗಿರುವುದನ್ನು ನೋಡಿ ತಮ್ಮ ಬಲಗೈಯಿಂದ ನನ್ನ ಭುಜವನ್ನು ಅಲ್ಲಾಡಿಸುತ್ತಾ, ಏಕೆ

ಗಾಬರಿಗೊಳ್ಳುತ್ತೀಯಾ? ಎಂದು ಕೇಳಿದರು. ಈ ಮಾತಿಗೆ ನನಗೆ ಎಚ್ಚರವಾಯಿತು. ಅದೇ ವೇಳೆ ಹಝ್ರತ್ ಮಸೀಹ್ ಮೌಊದ್(ಅ) ಮನೆಯ ಛಾವಣಿಯ ಕಡೆಗೆ ನೋಡಿ ಹೀಗೆ ಹೇಳಿದರು: 'ಅಬ್ದುರ್ರಹೀಮ್, ನೀನು ಈ ಕಾಯಿಲೆಯಿಂದ ಸಾಯುಲಾರಿರಿ. ಆದರೆ ಈ ಮನೆ ಬಹಳ ಹಳೆಯದಾಗಿದೆ ಮತ್ತು ಶಿಥಿಲಗೊಂಡಿದೆ. ಇದು ನಿನ್ನ ಮರಣಕ್ಕೆ ಕಾರಣವಾಗಬಹುದು. ಇದರ ಛಾವಣಿ ಬಹಳ ಹಾಳಾಗಿದೆ, ನೀನು ಗುಣಮುಖನಾದ ಮೇಲೆ ಈ ಛಾವಣಿಯನ್ನು ಸರಿಪಡಿಸು.' ನಂತರ ನನ್ನ ತಾಯಿಯೊಡನೆ ಹೀಗೆ ಹೇಳಿದರು: ನನ್ನೊಡನೆ ಬಂದು ಔಷಧಿ ತೆಗೆದುಕೊಂಡು ಹೋಗಿ ಇವನಿಗೆ ಕುಡಿಸಿರಿ. ನಾವು ದುಆ ಸಹ ಮಾಡುತ್ತೇವೆ, ಖಂಡಿತವಾಗಿಯೂ ಗುಣಮುಖನಾಗುವನು. ನನ್ನ ತಾಯಿ ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಅವರ ಮನೆಗೆ ಹೋದರು. ಅವರು ಮೂರು ಪೊಟ್ಟಣ ಔಷಧಿ ನೀಡಿದರು. ಒಂದು ಪೊಟ್ಟಣವನ್ನು ನಾನು ಬೆಳಗ್ಗೆ 9-10 ಗಂಟೆಗೆ ತಿಂದೆ, ಎರಡನೆಯದನ್ನು ಸಂಜೆ ತಿಂದೆ. ಆ ಎರಡು ಪೊಟ್ಟಣಗಳನ್ನು ತಿಂದ ಬಳಿಕ ನಾನು ಎದ್ದು ಮಂಚದ ಮೇಲೆ ಕುಳಿತೆ. ಮೂರನೇ ಪೊಟ್ಟಣವನ್ನು ಮರುದಿನ ಬೆಳಗ್ಗೆ ತಿಂದೆ. ಕೇವಲ ಈ ಮೂರು ಪೊಟ್ಟಣ ಔಷಧಿ ತಿಂದಿದ್ದರಿಂದ ನನ್ನ ಕಾಯಿಲೆ ಸಂಪೂರ್ಣವಾಗಿ ವಾಸಿಯಾಯಿತು. ಐದಾರು ದಿನಗಳ ನಂತರ ನಾನು ಸಂಪೂರ್ಣ ಗುಣಮುಖನಾದೆ, ಸ್ವಲ್ಪ ಸಾಮಾನ್ಯ ದೌರ್ಬಲ್ಯ ಮಾತ್ರ ಇತ್ತು. ಒಂದು ವಾರದ ನಂತರ ನಾನು ಹಝ್ರತ್ ಮಸೀಹ್ ಮೌಊದ್(ಅ)ರನ್ನು ಭೇಟಿಯಾಗಲು ಹೋದೆ. ದೌರ್ಬಲ್ಯವಿದ್ದ ಕಾರಣ ಯಾರೋ ಆಸರೆ ನೀಡಿ ನನ್ನನ್ನು ಮೇಲೆ ಕರೆದೊಯ್ದರು. ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಮುಂದೆ ನಿಂತಾಗ ಅವರು, ನೀನು ಗುಣಮುಖನಾದೆಯಾ? ಎಂದು ಕೇಳಿದರು. ನಾನು ಹೇಳಿದೆ: ಹುಝೂರ್, ನಿಮ್ಮ ಪ್ರಾರ್ಥನೆ ಮತ್ತು ಔಷಧಿಯಿಂದ ಅಂದಿನಿಂದ ನನಗೆ ಜ್ವರವೇ ಇಲ್ಲ. ನಂತರ ಹುಝೂರ್, ಮನೆಯ ಛಾವಣಿಯ ಕೆಲಸ ಏನಾಯಿತು? ಎಂದು ಕೇಳಿದರು. ನಾನು ಹೇಳಿದೆ: ಹುಝೂರ್, ಒಂದೂವರೆ ತಿಂಗಳಿಂದ ಕಾಯಿಲೆಯಾಗಿದ್ದೆ. ನನ್ನ ಬಳಿ ಒಂದು ಪೈಸೆಯೂ ಇಲ್ಲ, ಛಾವಣಿಯನ್ನು ಹೇಗೆ ಸರಿಪಡಿಸಲಿ?' ಹಝ್ರತ್ ಮಸೀಹ್ ಮೌಊದ್(ಅ) 'ನಾವು ಮಾಡಿಸಿಕೊಡುತ್ತೇವೆ' ಎಂದು ಹೇಳಿ ತಕ್ಷಣವೇ ಮೌಲವಿ ಮುಹಮ್ಮದ್ ಅಲಿ ಸಾಹಿಬ್ ರವರನ್ನು ಕರೆಸಿ ಹೀಗೆ ಹೇಳಿದರು: 'ನೀವು ಮದ್ರಸದ ಕೋಣೆಗಳಿಗಾಗಿ ಮರಗಳನ್ನು ತರಿಸುವಾಗ ಅಬ್ದುರ್ರಹೀಮ್‌ನ ಮನೆಯ ಛಾವಣಿಗೂ ಮರಗಳನ್ನು ತರಿಸಿ ಅದನ್ನು ಮಾಡಿಸಿಕೊಡಿರಿ. ಅದಕ್ಕೆ ಎಷ್ಟು ಖರ್ಚಾಗುತ್ತದೋ ಅದನ್ನು ನಾವು ಕೊಡುತ್ತೇವೆ.' ಅದರಂತೆ ಮೌಲವಿ ಮುಹಮ್ಮದ್ ಅಲಿ ಸಾಹಿಬ್, ಮಿಸ್ತ್ರಿ ರಕ್ಕಾ ರಾಮ್‌ನನ್ನು ನನ್ನ ಮನೆ ನೋಡಲು ಮತ್ತು ಮರದ ಖರ್ಚನ್ನು ಅಂದಾಜಿಸಲು ಕಳುಹಿಸಿದರು. ಅವನು ಬಂದು 10 ಮರದ ದಿಮ್ಮಿಗಳು ಬೇಕಾಗುತ್ತವೆ ಎಂದು ತಿಳಿಸಿದನು. ಮೌಲವಿ ಸಾಹಿಬ್ ಹಝ್ರತ್ ಮಸೀಹ್ ಮೌಊದ್(ಅ)ರೊಡನೆ 30 ರೂಪಾಯಿ ಖರ್ಚಾಗಬಹುದು ಎಂದು ತಿಳಿಸಿದಾಗ, ಅವರು ತಕ್ಷಣವೇ 30 ರೂಪಾಯಿಗಳನ್ನು ನೀಡಿದರು ಮತ್ತು ನನ್ನ ಮನೆಯ ಛಾವಣಿ ಸಿದ್ಧವಾಯಿತು. ಕೆಲಸಗಾರರಿಗೆ ಎಷ್ಟಾಯಿತೋ ನನಗೆ ತಿಳಿದಿಲ್ಲ, ಅದನ್ನೂ ಹಝ್ರತ್ ಮಸೀಹ್ ಮೌಊದ್(ಅ)ರೇ ನೀಡಿದರು.

(ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ-4, ಪುಟ-174-175)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತೇ ತಯ್ಯಿಬ ಎಂಬ ಜೀವನಚರಿತ್ರೆಯ ಸಾರಾಂಶವನ್ನು ಹೀಗೆ ಬರೆಯುತ್ತಾರೆ: ನಮ್ಮ ದೊಡ್ಡ ಮಾವ ಹಝ್ರತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಯೀಲ್ ಸಾಹಿಬ್(ರ) ನನ್ನ ಕೋರಿಕೆಯ ಮೇರೆಗೆ ಹಝ್ರತ್ ಮಸೀಹ್ ಮೌಊದ್(ಅ)ರ ನೈತಿಕ ಗುಣಗಳು ಮತ್ತು ವೈಶಿಷ್ಟ್ಯಗಳ ಕುರಿತು ಲೇಖನವೊಂದನ್ನು ಬರೆದಿದ್ದರು. ಆ ಲೇಖನದಲ್ಲಿ ಅವರು ಬರೆಯುತ್ತಾರೆ: "ಹಝ್ರತ್ ಮಸೀಹ್ ಮೌಊದ್(ಅ) ಅತ್ಯಂತ ದಯಾಮಯಿ, ಉದಾರಿ, ಅತಿಥಿಸತ್ಕಾರ ಪ್ರಿಯರು ಮತ್ತು ಜನರಲ್ಲಿ ಅತ್ಯಂತ ಧೈರ್ಯಶಾಲಿಯಾಗಿದ್ದರು. ಕಷ್ಟ-ಪರೀಕ್ಷೆಗಳ ಸಮಯದಲ್ಲಿ ಜನರ ಹೃದಯಗಳು ಕುಸಿದುಬೀಳುತ್ತಿದ್ದಾಗ, ಅವರು ಗಂಡುಸಿಂಹದಂತೆ ಮುಂದೆ ಸಾಗುತ್ತಿದ್ದರು. ಕ್ಷಮೆ, ಉದಾರತೆ, ವಿನಯ, ನಿಷ್ಠೆ, ಸರಳತೆ, ದೇವಪ್ರೇಮ, ಪ್ರವಾದಿ ಪ್ರೇಮ, ಹಿರಿಯರ ಗೌರವ, ವಾಗ್ದಾನ ಪಾಲನೆ, ಉತ್ತಮ ಸಾಮಾಜಿಕ ನಡವಳಿಕೆ, ಗಾಂಭೀರ್ಯ, ಸ್ವಾಭಿಮಾನ, ಧೈರ್ಯ, ದೃಢಸಂಕಲ್ಪ ಮತ್ತು ಪ್ರಸನ್ನವದನತೆ ಅವರ ಪ್ರಮುಖ ನೈತಿಕ ಗುಣಗಳಾಗಿದ್ದವು." ಅವರು ಮುಂದುವರಿದು ಬರೆಯುತ್ತಾರೆ: "ನಾನು ಎರಡು ವರ್ಷದ ಮಗುವಾಗಿದ್ದಾಗ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಕಂಡೆ. ನಾನು 27 ವರ್ಷದ ಯುವಕನಾಗಿದ್ದಾಗ ಅವರು ಇಹಲೋಕ ತ್ಯಜಿಸಿದರು. ಆದರೆ ದೇವನಾಣೆ ಇಟ್ಟು ಹೇಳುತ್ತೇನೆ, ಅವರಿಗಿಂತ ಉತ್ತಮ, ಸದಾಚಾರಿ, ಪುಣ್ಯಾತ್ಮ, ವಾತ್ಸಲ್ಯ ತೋರುವ, ಅಲ್ಲಾಹನು ಮತ್ತು ಅವನ ಪ್ರವಾದಿಯ ಪ್ರೀತಿಯಲ್ಲಿ ಮುಳುಗಿರುವ ಬೇರೆ ಯಾವ ವ್ಯಕ್ತಿಯನ್ನೂ ನಾನು ನೋಡಿಲ್ಲ. ಅವರು ಮನುಷ್ಯರ ಉದ್ಧಾರಕ್ಕಾಗಿ ಈ ಪ್ರಪಂಚದಲ್ಲಿ ಪ್ರಕಟವಾದ ಒಂದು ದೈವಿಕ ಜ್ಯೋತಿಯಾಗಿದ್ದರು, ಸತ್ಯವಿಶ್ವಾಸದ ಕೊರತೆಯ ದೀರ್ಘಕಾಲದ ಬರಗಾಲದ ನಂತರ ಈ ಭೂಮಿಯ ಮೇಲೆ ಸುರಿದು ಅದನ್ನು ಹಸಿರಾಗಿಸಿದ ಕೃಪೆಯ ಮಳೆಯಾಗಿದ್ದರು."

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸ್ವತಃ ಹೀಗೆ ಹೇಳುತ್ತಾರೆ: ಮೀರ್ ಸಾಹಿಬ್(ರ) ನೀಡಿದ ಈ ಸಾಕ್ಷ್ಯವೇ ನಾನು ಕೂಡ ಕಣ್ಣಾರೆ ಕಂಡ ಸಾಕ್ಷ್ಯ ಆಗಿದೆ. (ಸೀರತ್ ತೈಯಬ, ಹಝ್ರತ್ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-66-67)

ಅಲ್ಲಾಹನು ನಮಗೂ ಈ ಉನ್ನತ ನೈತಿಕ ಗುಣಗಳನ್ನು ಹೊಂದುವಂತೆ ಮಾಡಲಿ, ಆ ಗುಣಗಳನ್ನು ಮೂಡಿಸಲಿಕ್ಕಾಗಿಯೇ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರ ದಾಸ್ಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಕಳುಹಿಸಿದ್ದನು.

-------------*****-------------

## ಜಾಮಿಯಾ ಅಹ್ಮದಿಯಾ ಖಾದಿಯಾನ್ ಮತ್ತು ಅಲ್ಪಾವಧಿಯ ಮುಅಲ್ಲಿಮ್ ಕೋರ್ಸ್‌ಗಾಗಿ ಪ್ರವೇಶಕ್ಕಾಗಿ ಪ್ರಕಟಣೆ

ಜಾಮಿಯಾ ಅಹ್ಮದಿಯಾ ಖಾದಿಯಾನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಥಾಪಿಸಿದ ಪವಿತ್ರ ಸಂಸ್ಥೆಯಾಗಿದ್ದು, ಇದರಿಂದ ನೂರಾರು ವಿದ್ವಾಂಸರು ಮತ್ತು ಮುಬಲ್ಲಿಗೀನ್‌ಗಳು ಪದವಿ ಪಡೆದಿದ್ದಾರೆ ಮತ್ತು ಇಸ್ಲಾಮಿನ ನಿಜವಾದ ಬೋಧನೆಗಳನ್ನು ಪ್ರಪಂಚದ ಮೂಲೆ ಮೂಲೆಗಳಿಗೆ ಹರಡುವ ತಮ್ಮ ಕರ್ತವ್ಯವನ್ನು ಪೂರೈಸುತ್ತಿದ್ದಾರೆ. ಸಾಧ್ಯವಾದಷ್ಟು ವಾಖಿಫೀನ್ ನೌ ಮತ್ತು ವಾಖಿಫೀನೆ ನೌ ಅಲ್ಲದ ವಿದ್ಯಾರ್ಥಿಗಳು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶ ಪಡೆಯಬೇಕು ಮತ್ತು ಧಾರ್ಮಿಕ ಶಿಕ್ಷಣವನ್ನು ಪಡೆಯುವ ಮೂಲಕ ಜಮಾಅತ್ತಿಗೆ ಸೇವೆ ಸಲ್ಲಿಸಲು ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕು.

ಜಾಮಿಯಾ ಅಹ್ಮದಿಯಾ ಖಾದಿಯಾನ್‌ನಲ್ಲಿ ಏಳು ವರ್ಷಗಳ ಮುರಬ್ಬಿ ಕೋರ್ಸ್, ಅಲ್ಪಾವಧಿಯ ಮುಅಲ್ಲಿಮ್ ಕೋರ್ಸ್‌ನ ಪ್ರವೇಶ ಪ್ರಕ್ರಿಯೆಯು ಪ್ರಾರಂಭವಾಗಿದೆ. ಆದ್ದರಿಂದ, ಮೆಟ್ರಿಕ್ಯುಲೇಷನ್ ಅಥವಾ 2+ ಪರೀಕ್ಷೆಗಳನ್ನು ಪೂರ್ಣಗೊಳಿಸಿದ ಮತ್ತು ಜಾಮಿಯಾ ಅಹ್ಮದಿಯಾದಲ್ಲಿ ಅಥವಾ ಅಲ್ಪಾವಧಿಯ ಮುಅಲ್ಲಿಮ್ ಕೋರ್ಸ್‌ನಲ್ಲಿ ಪ್ರವೇಶ ಪಡೆಯಲು ಬಯಸುವ ವಿದ್ಯಾರ್ಥಿಗಳು ವಕ್ಫ್ ನೌ ಭಾರತ್ ಇಲಾಖೆ ಅಥವಾ ಶಿಕ್ಷಣ ಮೇಲ್ವಿಚಾರಣಾ ಇಲಾಖೆಯನ್ನು ಸಂಪರ್ಕಿಸಿ ಜಾಮಿಯಾ ಅಹ್ಮದಿಯಾ ಪ್ರವೇಶ ನಮೂನೆಯನ್ನು ಆದಷ್ಟು ಬೇಗ ಭರ್ತಿ ಮಾಡಿ ವಕ್ಫ್ ನೌ ಭಾರತ್ ಕಚೇರಿಗೆ (ಶಿಕ್ಷಣ ಮೇಲ್ವಿಚಾರಣಾ ಇಲಾಖೆ) ಕಳುಹಿಸಬೇಕು.

ಪ್ರವೇಶಕ್ಕೆ ಈ ಕೆಳಗಿನ ಷರತ್ತುಗಳು:

(1) ಮೆಟ್ರಿಕ್ಯುಲೇಷನ್ ಪಾಸ್ ಆದ ವಿದ್ಯಾರ್ಥಿಗೆ ವಯಸ್ಸಿನ ಮಿತಿ 17 ವರ್ಷಗಳು ಮತ್ತು 2+ ಪಾಸ್ ಆದ ವಿದ್ಯಾರ್ಥಿಗೆ 19 ವರ್ಷಗಳು. ಹಾಫ಼ಿಝ್‌ಗಳಿಗೆ ವಯಸ್ಸಿನ ಮಿತಿಯಲ್ಲಿ ಅಸಾಧಾರಣ ಸಡಿಲಿಕೆ ನೀಡಬಹುದು.

(2) ಜಾಮಿಯಾ ಅಹ್ಮದಿಯಾ ಪ್ರವೇಶಕ್ಕಾಗಿ, ನ್ಯಾಷ್ನಲ್ ಕೆರಿಯರ್ ಪ್ಲ್ಯಾನಿಂಗ್ ಸಮಿತಿಯು ವಕ್ಫ್ ನೌ ಭಾರತ್ ವಿದ್ಯಾರ್ಥಿಗಳ ಸಂದರ್ಶನ ಮತ್ತು ಲಿಖಿತ ಪರೀಕ್ಷೆಯನ್ನು ನಡೆಸಿ ಅವರನ್ನು ಜಾಮಿಯಾ ಅಹ್ಮದಿಯಾಕ್ಕೆ ಆಯ್ಕೆ ಮಾಡುತ್ತದೆ. ಲಿಖಿತ ಪರೀಕ್ಷೆಯು ಪವಿತ್ರ ಖುರ್‌ಆನ್, ಇಸ್ಲಾಂ, ಅಹ್ಮದಿಯಾತ್, ಧಾರ್ಮಿಕ ಮಾಹಿತಿ, ಉರ್ದು, ಇಂಗ್ಲಿಷ್ ಮತ್ತು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಹೊಂದಿರುತ್ತದೆ.

(3) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಯಶಸ್ವಿಯಾದ ವಿದ್ಯಾರ್ಥಿಗಳು ನೂರ್ ಆಸ್ಪತ್ರೆ, ಖಾದಿಯಾನ್‌ನಿಂದ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ. ಲಿಖಿತ ಪರೀಕ್ಷೆ, ಸಂದರ್ಶನ ಮತ್ತು ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಸೈಯಿದುನಾ ಹುಝೂರ್ ಅನ್ವರ್[ಅತಬಿಅ] ಅವರ ಅನುಮೋದನೆಯೊಂದಿಗೆ ಜಾಮಿಯಾ ಅಹ್ಮದಿಯಾಕ್ಕೆ ಪ್ರವೇಶ ಪಡೆಯುತ್ತಾರೆ.

(4) ಅದೇ ರೀತಿ, ವಿವಾಹಿತ ಮತ್ತು ಪದವಿ ವಿದ್ಯಾರ್ಥಿಗಳಿಗೆ ಅಲ್ಪಾವಧಿಯ ಮುಅಲ್ಲಿಮ್ ಕೋರ್ಸ್‌ನ ಅವಧಿ ಎರಡೂವರೆ ವರ್ಷಗಳು, ಇದರಲ್ಲಿ ಎರಡು ವರ್ಷಗಳು (24 ತಿಂಗಳುಗಳು) ಬೋಧನೆ ಮತ್ತು 6 ತಿಂಗಳ ತರಬೇತಿ ಸೇರಿವೆ. ಮೆಟ್ರಿಕ್ಯುಲೇಷನ್/2+ ಪಾಸ್ ಮತ್ತು ಪದವಿಪೂರ್ವ ವಿದ್ಯಾರ್ಥಿಗಳಿಗೆ ಶಿಕ್ಷಕ ಕೋರ್ಸ್‌ನ ಅವಧಿ ಮೂರುವರೆ ವರ್ಷಗಳು, ಇದರಲ್ಲಿ 3 ವರ್ಷಗಳ ಬೋಧನೆ ಮತ್ತು 6 ತಿಂಗಳ ತರಬೇತಿ ಸೇರಿದೆ.

(5) ಮೇಲ್ ಮೂಲಕ ಪ್ರವೇಶ ನಮೂನೆಗಾಗಿ ಕರೆ ಮಾಡುವ

ವಿಳಾಸ:

qdnwaqfenau@gmail.com

ವಕ್ಫ್-ಇ-ನೌ ಇಲಾಖೆ (ನಜರತ್ ತಾಲೀಮ್)


ದಾರುಲ್ ಬಾಲಾಗ್, ಸಿವಿಲ್ ಲೈನ್, ಖಾಡಿಯನ್

ಜಿಲ್ಲೆ: ಗುರುದಾಸ್ಪುರ, ಪಂಜಾಬ್ (ಭಾರತ) ಪಿನ್: 143516

ಸಂಪರ್ಕ:01872-500975

**(ಅಧ್ಯಕ್ಷರು ರಾಷ್ಟ್ರೀಯ ವೃತ್ತಿ ಯೋಜನಾ ಸಮಿತಿ ವಕ್ಫ್ ನವ ಭಾರತ್)**

**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:**
**https://akhbarbadr.in/Kannada/#gsc.tab=0**



# ಖುತ್‌ಬ ಜುಮುಅ

## ಹಝ್ರತ್ ಮಸೀಹ್ ಮೌಊದ್(ಅ)ರ ದಾನಶೀಲತೆಯ ಸುಂದರ ಪ್ರಸ್ತಾವನೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **03–07–2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾವ್ ಅವರ ಔದಾರ್ಯ ಮತ್ತು ದಾನಶೀಲತೆಯ ಕೆಲವು ಘಟನೆಗಳ ಕೆಲವು ಘಟನೆಗಳನ್ನು ಪ್ರಸ್ತಾಪಿಸುವೆನು.

ಹಝ್ರತ್ ಶೇಖ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ್(ರ) ಬರೆಯುತ್ತಾರೆ:

"ಹಝ್ರತ್ ಮಸೀಹ್ ಮೌಊದ್(ಅ.ಸ.) ಅವರ ದಾನಶೀಲತೆಯು ಒಂದು ಅಪಾರ ಸಾಗರವಾಗಿತ್ತು ಮತ್ತು ಅವರ ಕೈಯು ಮುತ್ತುಗಳನ್ನು ಸುರಿಸುವ ಮೋಡದಂತಿತ್ತು. ಅಂದರೆ, ಅದು ಮುತ್ತುಗಳನ್ನು ಸುರಿಸುವ ಮೇಘವಾಗಿತ್ತು; ಸುರಿಯುತ್ತಿತ್ತು ಮತ್ತು ಜನರನ್ನು ತೃಪ್ತಿಗೊಳಿಸುತ್ತಿತ್ತು. ಈ ಸರಮಾಲೆಯು ರಮಝಾನ್ ತಿಂಗಳಲ್ಲಿ ಇನ್ನಷ್ಟು ಹೆಚ್ಚಾಗುತ್ತಿತ್ತು. ಅವರು ಅತ್ಯಂತ ರಹಸ್ಯವಾದ ರೀತಿಗಳಲ್ಲಿಯೂ ಅಗತ್ಯವಂತರಿಗೆ ನೀಡುತ್ತಲೇ ಇರುತ್ತಿದ್ದರು. ಅತ್ಯಂತ ಬೆಲೆಬಾಳುವ ವಸ್ತುವನ್ನೂ ಮತ್ತೊಬ್ಬರಿಗೆ ನೀಡುವುದರಲ್ಲಿ ಅವರಿಗೆ ಎಂದಿಗೂ ಸಂಕೋಚವಾಗುತ್ತಿರಲಿಲ್ಲ."

ಈ ಗುಣವು ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಜೀವನದ ಪ್ರತಿಯೊಂದು ಹಂತದಲ್ಲಿಯೂ ಸ್ಪಷ್ಟವಾಗಿ ಗೋಚರಿಸುತ್ತದೆ. ಬಅಸತ್ ಮತ್ತು ಮಾಮೂರಿಯತ್‌ಗೆ ಮುಂಚಿನ ಕಾಲದಲ್ಲಿಯೂ ಈ ಗುಣವು ತನ್ನದೇ ಆದ ವೈಭವದಲ್ಲಿ ಪ್ರಕಟವಾಗಿತ್ತು. ಆ ಸಮಯದಲ್ಲಿ ಹಝ್ರತ್ ಅ.ಸ. ಅವರು ಲೋಕದ ಗದ್ದಲದಿಂದ ದೂರವಾಗಿ, ಒಂದು ರೀತಿಯ ಏಕಾಂತ ಜೀವನವನ್ನು ನಡೆಸುತ್ತಿದ್ದರು. ಮಿಯಾನ್ ಘಫಾರಾ ಸಾಹಿಬ್, ಅಂದರೆ ಅಬ್ದುಲ್ ಘಫ್ಫಾರ್ ಸಾಹಿಬ್ ಕಾಶ್ಮೀರಿ, ತಮ್ಮ ವಿವಾಹದ ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ತಮ್ಮ ನೆರವಿಗಾಗಿ ಎರಡು ಬೆಲೆಬಾಳುವ ಆಭರಣಗಳನ್ನು ನೀಡಿದ ಘಟನೆ ವಿವರಿಸುತ್ತಾರೆ. ಇದು ಹಝ್ರತ್ ಅ.ಸ. ಅವರ ಬಅಸತ್‌ಗಿಂತ ಮುಂಚಿನ ಘಟನೆ.

ಹಝ್ರತ್ ಶೇಖ್ ಸಾಹಿಬ್ ರ.ಹ. ಬರೆಯುತ್ತಾರೆ:

"ಇದು ಒಂದೇ ಒಂದು ಉದಾಹರಣೆಯಲ್ಲ. ಇಂತಹ ಅನೇಕ ಘಟನೆಗಳಿವೆ. ಯಾರಾದರೂ ಅವರ ಬಳಿ ಏನನ್ನಾದರೂ ಕೇಳಿದಾಗ, ಅವರು ಅದನ್ನು ನೀಡದೆ ನಿರಾಕರಿಸಿದ ಸಂದರ್ಭವೇ ಇರಲಿಲ್ಲ. ಹಾಗೆಯೇ, ಯಾರಾದರೂ ಕೇಳುವ ಮುನ್ನವೇ ಅವರ ಅಗತ್ಯವನ್ನು ಅರಿತು, ಅವರಿಗೆ ಸಹಾಯ ಮಾಡದೆ ಇದ್ದ ಸಂದರ್ಭವೂ ಇರಲಿಲ್ಲ. ಅವರು ಕರೀಮ್ ಇಬ್ನೆ ಕರೀಮ್ ಇಬ್ನೆ ಕರೀಮ್ ಆಗಿದ್ದರು." (ಸೀರತ್ ಮಸೀಹ್ ಮೌಊದ್ ಅ.ಸ., ಹಝ್ರತ್ ಶೈಖ್ ಯಾಕೂಬ್ ಅಲಿ ಇರ್ಫಾನಿ ರ.ಹ., ಭಾಗ 3, ಪುಟ 312; ಭಾಗ 2, ಪುಟ 290.)

ಹಝ್ರತ್ ಬಶೀರ್ ಅಹ್ಮದ್ ಸಾಹಿಬ್ ಭಟ್ಟಿ ಅವರ ತಾಯಿ ಹೇಳುತ್ತಾರೆ:

ಒಮ್ಮೆ ಹಝ್ರತ್ ಅಮೀರುಲ್ ಮುಮಿನೀನ್, ಖಲೀಫತುಲ್ ಮಸೀಹ್ ಸಾನಿ ರ.ಅ. ಅವರ ವಿವಾಹದ ಸಂದರ್ಭದಲ್ಲಿ, ಒಬ್ಬ ಮೀರಾಸಿ ಮಹಿಳೆ ಢೋಲನ್ನು ತೆಗೆದುಕೊಂಡು ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಮನೆಗೆ ಬಂದಳು. ಅವಳು ಢೋಲು ಬಾರಿಸಲು ಪ್ರಾರಂಭಿಸಿದಳು. ವಿವಾಹದ ಸಂದರ್ಭವಾಗಿದ್ದುದರಿಂದ ಏನಾದರೂ ಹಣ ಅಥವಾ ವಸ್ತು ಪಡೆಯುವುದು ಅವಳ ಉದ್ದೇಶವಾಗಿತ್ತು. ಅದು ಅಲ್ಲಿನ ಸಾಮಾನ್ಯ ಸಂಪ್ರದಾಯವೂ ಆಗಿತ್ತು. ಹಝ್ರತ್ ಅ.ಸ. ಅವರು ಢೋಲಿನ ಶಬ್ದವನ್ನು ಕೇಳಿದ ತಕ್ಷಣ ಆ ಕಡೆ ಗಮನ ಹರಿಸಿ, "ಅವಳಿಗೆ ಢೋಲು ಬಾರಿಸುವುದನ್ನು ನಿಲ್ಲಿಸಲು ಹೇಳಿರಿ ಮತ್ತು ಅವಳು ಏನು ಕೇಳುತ್ತಿದ್ದಾಳೋ ಅದನ್ನು ಅವಳಿಗೆ ಕೊಟ್ಟುಬಿಡಿರಿ" ಎಂದು ಆದೇಶಿಸಿದರು. ಅವಳಿಗೆ ನಾಲ್ಕೈದು ರೂಪಾಯಿಗಳನ್ನು ನೀಡಲಾಯಿತು. ನಂತರ ಅವಳು, "ಚಳಿಗಾಲ ಬಂದಿದೆ; ನನಗೆ ಚಳಿಯಾಗುತ್ತದೆ" ಎಂದು ಹೇಳಿದಳು. ಆಗ ಹಝ್ರತ್ ಅ.ಸ. ಅವರು ಅವಳಿಗೆ ಒಂದು ರಜಾಯಿಯನ್ನೂ ಕೊಡಿಸಿದರು. ಆದರೆ ಢೋಲು ಬಾರಿಸುವುದನ್ನು ನಿಲ್ಲಿಸಲಾಯಿತು. (ರಿವಾಯಾತ್ ಅಸ್ಹಾಬೆ ಅಹ್ಮದ್, ಸಂಪುಟ 3, ಪುಟ 441.)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರ.ಅ. ಅವರು ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅ.ಸ. ಅವರಿಗೆ ಯಾವುದೇ ವಿಶೇಷ ರೀತಿಯ ಉಡುಪುಗಳ ಬಗ್ಗೆ ಆಸಕ್ತಿ ಇರಲಿಲ್ಲ ಎಂಬುದನ್ನು ನೆನಪಿಡಬೇಕು. ಜೀವನದ ಕೊನೆಯ ಕೆಲವು ವರ್ಷಗಳಲ್ಲಿ ಅವರಿಗೆ ಸರಳವಾದ ಹೊಲಿಸಿದ ಬಟ್ಟೆಗಳು ಉಡುಗೊರೆಯಾಗಿ ಬಹಳ ಬರುತ್ತಿದ್ದವು. ವಿಶೇಷವಾಗಿ ಕೋಟ್, ಸದರಿ, ಪೈಜಾಮಾ, ಕುರ್ತಾ ಮುಂತಾದವುಗಳನ್ನು ಶೈಖ್ ರಹ್ಮತುಲ್ಲಾ ಸಾಹಿಬ್ ಲಾಹೌರಿ ಅವರು ಪ್ರತಿಯೊಂದು ಈದ್ ಮತ್ತು ಈದ್‌ಉಲ್ ಅಝ್ಹಾ ಸಂದರ್ಭದಲ್ಲಿ ನಝ್ರಾನೆಯಾಗಿ ತರುತ್ತಿದ್ದರು. ಹಝ್ರತ್ ಅ.ಸ. ಅವರು ಅವುಗಳನ್ನೇ ಬಳಸುತ್ತಿದ್ದರು. ಆದರೆ ಅವುಗಳ ಹೊರತಾಗಿ ಕೆಲವೊಮ್ಮೆ ತಾವು ಸಹ ಬಟ್ಟೆಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಅಮಾಮಾವನ್ನು ಸಾಮಾನ್ಯವಾಗಿ ತಾವೇ ಖರೀದಿಸಿ ಧರಿಸುತ್ತಿದ್ದರು. ಆದರೆ ಬಟ್ಟೆಗಳು ಬಂದಷ್ಟೇ ವೇಗವಾಗಿ ಅವು ತಬರ್ರುಕ್ ಆಗಿ ವಿತರಿಸಲ್ಪಡುತ್ತಿದ್ದವು. ಜನರು ನಿರಂತರವಾಗಿ ಹಝ್ರತ್ ಅ.ಸ. ಅವರಿಂದ ಬಟ್ಟೆಗಳನ್ನು ತಬರ್ರುಕ್‌ಗಾಗಿ ಕೇಳುತ್ತಿದ್ದರು. ಕೆಲವೊಮ್ಮೆ ಪರಿಸ್ಥಿತಿ ಹೀಗಾಗುತ್ತಿತ್ತು: ಹಝ್ರತ್ ಅ.ಸ. ಅವರು ಒಂದು ಬಟ್ಟೆಯನ್ನು ತಬರ್ರುಕ್ ಆಗಿ ನೀಡಿದ ಕೂಡಲೇ, ತಾವು ಧರಿಸಲು ಮತ್ತೊಂದು ಬಟ್ಟೆಯನ್ನು ಮಾಡಿಸಿಕೊಳ್ಳಬೇಕಾಗುತ್ತಿತ್ತು. ಕೆಲವರು ತಮ್ಮದೇ ಒಂದು ಬಟ್ಟೆಯನ್ನು ಕಳುಹಿಸಿ, "ಹುಝೂರ್! ತಾವು ತೆಗೆದಿರುವ ಬಟ್ಟೆಯನ್ನು ತಬರ್ರುಕ್ ಆಗಿ ದಯಪಾಲಿಸಬೇಕು" ಎಂದು ವಿನಂತಿಸುತ್ತಿದ್ದರು. (ಸೀರ'ತ'ುಲ್ ಮಹ್ದೀ, ಸಂಪುಟ 1, ಭಾಗ 2, ರಿವಾಯತ್ 447.)

ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್ ರ.ಅ. ಅವರು ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ನನಗೆ ಒಮ್ಮೆ ಹೇಳಿದರು: "ನನ್ನ ಬಳಿ ಒಂದು ಚಿಕ್ಕ ಹಮಾಯಿಲ್ ಪವಿತ್ರ ಖುರ್‌ಆನ್ ಇತ್ತು. ಅದರ ಬರಹವೂ ಬಹಳ ಸ್ಪಷ್ಟವಾಗಿತ್ತು ಮತ್ತು ಅದು ನನಗೆ ಬಹಳ ಪ್ರಿಯವಾಗಿತ್ತು. ಆದರೆ ಒಬ್ಬ ವ್ಯಕ್ತಿ ಅದನ್ನು ಕೇಳಿದಾಗ, ಅವನ ಪ್ರಶ್ನೆಯನ್ನು ನಿರಾಕರಿಸಬಾರದೆಂದು ನಾನು ಅದನ್ನು ಅವನಿಗೆ ಕೊಟ್ಟುಬಿಟ್ಟೆ." (ಝಿಕ್ರೆ ಹಬೀಬ್, ಪುಟ 138.)

ಖಾದಿಯಾನ್‌ನ ಅಂಚೆಕಛೇರಿಯಲ್ಲಿ ಅಂಚೆಗಾರರಾಗಿದ್ದ ಹಝ್ರತ್ ಖುರೈಶಿ ಶೈಖ್ ಮುಹಮ್ಮದ್ ಸಾಹಿಬ್ ರ.ಅ. ಅವರು ಹೇಳುತ್ತಾರೆ: ಒಮ್ಮೆ ನಾನು ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಸೇವೆಗೆ ಅನೇಕ ಮನಿ ಆರ್ಡರ್‌ಗಳನ್ನು ವಿತರಿಸಲು ತೆಗೆದುಕೊಂಡು ಹೋದೆ. ಅವುಗಳ ಹಣವನ್ನು ಹಝ್ರತ್ ಅ.ಸ. ಅವರಿಗೆ ಹಸ್ತಾಂತರಿಸಿದ ಬಳಿಕ, ನಾನು ನಗರದಲ್ಲಿ ಡೆಲಿವರಿಯ ಕೆಲಸ ಮಾಡುತ್ತಾ ಹೋದೆ. ಸಂಜೆ ಸುಮಾರು ನಾಲ್ಕು ಗಂಟೆಗೆ ಪೋಸ್ಟ್ ಆಫೀಸ್‌ಗೆ ಹಿಂದಿರುಗಿ, ವಿತರಿಸಿದ ಮನಿ ಆರ್ಡರ್‌ಗಳ ಲೆಕ್ಕವನ್ನು ಪರಿಶೀಲಿಸಿದಾಗ, ತಪ್ಪಾಗಿ ಆರು ರೂಪಾಯಿಗಳನ್ನು ಯಾರಿಗೋ ಹೆಚ್ಚುವರಿಯಾಗಿ ನೀಡಿರುವುದು ತಿಳಿಯಿತು. ನನಗೆ ಬಹಳ ಆತಂಕವಾಯಿತು. ಪೋಸ್ಟ್‌ಮಾಸ್ಟರ್ ಅಲ್ಲಾಹ್ ದಿತ್ತಾ ಎಂಬ ವ್ಯಕ್ತಿ, ಅವನು ಅಹ್ಮದಿಯೇತರನಾಗಿದ್ದರೂ, "ನೀನು ಹೋಗಿ ಮಿರ್ಝಾ ಸಾಹಿಬ್ ಅವರಿಂದ ವಿಚಾರಿಸು" ಎಂದು ಪದೇಪದೇ ಒತ್ತಾಯಿಸಿದ. ಕೊನೆಗೆ ನಾನು ಹಝ್ರತ್ ಅ.ಸ. ಅವರ ಸೇವೆಗೆ ಹೋದೆ ಮತ್ತು ವಿಷಯವನ್ನು ತಿಳಿಸಿದೆ. ಹಝ್ರತ್ ಅ.ಸ. ಅವರು ಹೇಳಿದರು: "ಮಿಯಾನ್! ನನಗೆ ಎಷ್ಟು ಹಣ ಬಂದಿತ್ತು ಎಂಬುದೇ ಗೊತ್ತಿಲ್ಲ. ನಾನು ಅದರಲ್ಲಿ ಕೆಲವು ಹಣವನ್ನು ಈಗಾಗಲೇ ಖರ್ಚು ಮಾಡಿಬಿಟ್ಟಿದ್ದೇನೆ. ಆದರೆ ನೀನು ಬಡವನಾಗಿರುವುದರಿಂದ ಈ ಹಣವನ್ನು ನಾನು ನಿನಗೆ ಕೊಡುತ್ತೇನೆ. ಮುಂದೆ ಎಚ್ಚರಿಕೆಯಿಂದಿರು; ಏಕೆಂದರೆ ನೀನು ಬಡವನು." ಈ ಒಂದು ಘಟನೆಯಲ್ಲಿಯೇ ಹಝ್ರತ್ ಅ.ಸ. ಅವರ ಉತ್ತಮ ನೈತಿಕಗುಣ, ದಾನಶೀಲತೆ ಹಾಗೂ ಔದಾರ್ಯವು ಎಷ್ಟು ಉನ್ನತ ಮಟ್ಟದಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ. (ರಿವಾಯಾತ್ ಅಸ್ಹಾಬೆ ಅಹ್ಮದ್, ಸಂಪುಟ 5, ಪುಟ 337–338.)

ಹಝ್ರತ್ ಮಿರ್ ಮೆಹ್ದೀ ಹುಸೈನ್ ಸಾಹಿಬ್ ರ.ಅ. ಅವರು ಹೇಳುತ್ತಾರೆ: ಒಮ್ಮೆ ಮೌಲವಿ ಮುಹಮ್ಮದ್ ಅಹ್ಸನ್ ಸಾಹಿಬ್ ನನ್ನ ಬಳಿ "ಚಶ್ಮಾ–ಎ–ಮಸೀಹಿ"ಯ ಒಂದು ಪ್ರತಿಯನ್ನು ಕೇಳಿದರು. ಕಚೇರಿಯಲ್ಲಿ ಕೆಲವು ಪ್ರತಿಗಳನ್ನು ಭವಿಷ್ಯದ ಅಗತ್ಯಕ್ಕಾಗಿ ಉಳಿಸಿಟ್ಟಿದ್ದವು. ಆದ್ದರಿಂದ ನಾನು ಅವರಲ್ಲಿ

ಹೆಚ್ಚುವರಿ ಪ್ರತಿ ಇಲ್ಲವೆಂದು ತಿಳಿಸಿದೆ. ಅವರು ಹಝ್ರತ್ ಅ.ಸ. ಅವರ ಅನುಮತಿ ಪಡೆಯಲು ಪತ್ರ ಬರೆದರು. ಪತ್ರದ ಸಾರಾಂಶವೆಂದರೆ: ಕಚೇರಿಯಲ್ಲಿ ಕೇವಲ ಇಪ್ಪತ್ತು ಪ್ರತಿಗಳು ಉಳಿದಿವೆ; ನನಗೆ ಒಂದು ಪ್ರತಿಯ ಅಗತ್ಯವಿದೆ; ಯಾವುದೇ ತೊಂದರೆ ಇಲ್ಲದಿದ್ದರೆ ಒಂದು ಪ್ರತಿಯನ್ನು ನೀಡಬೇಕು. ಹಝ್ರತ್ ಅ.ಸ. ಅವರು ಉತ್ತರಿಸಿದರು: "ನೀವು ಒಂದು ಪ್ರತಿಯನ್ನು ತೆಗೆದುಕೊಳ್ಳಿರಿ." ಮತ್ತು ಅದೇ ಪ್ರತಿಯ ಮೇಲೆ ಬರೆಯುತ್ತಾ ಸಹಿ ಮಾಡಿದರು.

ಇಲ್ಲಿ ಸಹಾಬಿಯವರ 'ಸಿದ್ಕ್ ಮತ್ತು ಸರಾಹತ್' ಅಂದರೆ ಸತ್ಯಸಂಧತೆ ಮತ್ತು ಸ್ಪಷ್ಟತೆ ಕೂಡ ಗೋಚರಿಸುತ್ತದೆ. ಅವರು ಕಚೇರಿಯ ಪರಿಸ್ಥಿತಿಯನ್ನು ಮರೆಮಾಡದೆ ತಿಳಿಸಿದರು. ಅದೇ ಸಮಯದಲ್ಲಿ ಹಝ್ರತ್ ಅ.ಸ. ಅವರ ಇನಾಯತ್ ಮತ್ತು ಸಖಾವತ್ (ದಾನಶೀಲತೆ) ಕೂಡ ಪ್ರಕಟವಾಗುತ್ತದೆ. ಭವಿಷ್ಯದ ಅಗತ್ಯಕ್ಕಾಗಿ ಉಳಿಸಿಟ್ಟಿದ್ದ ಪ್ರತಿಯಾದರೂ, ಸಾಯಿಲ್‌ನ ಪ್ರಶ್ನೆಯನ್ನು ತಿರಸ್ಕರಿಸಲಿಲ್ಲ. (ರಿವಾಯಾತ್ ಅಸ್ಹಾಬೆ ಅಹ್ಮದ್, ಸಂಪುಟ 3, ಪುಟ 479.)

ಹಝ್ರತ್ ಅ.ಸ. ಅವರ ಕುಟುಂಬದೊಂದಿಗೆ ಪಂಡಿತ್ ಮೋಹನ್ ಲಾಲ್ ಅವರ ಕುಟುಂಬಕ್ಕೆ ಹಳೆಯ ಸಂಬಂಧವಿತ್ತು. ಅವರು ಕೆಲವೊಮ್ಮೆ ಪಂಡಿತ್ ಲೇಖರಾಮ್ ಅವರ ಪತ್ರ ಅಥವಾ ಸಂದೇಶವನ್ನು ತೆಗೆದುಕೊಂಡು ಹಝ್ರತ್ ಅ.ಸ. ಅವರ ಬಳಿಗೆ ಬರುತ್ತಿದ್ದರು. ಹಝ್ರತ್ ಅ.ಸ. ಅವರು ಪಂಡಿತ್ ಮೋಹನ್ ಲಾಲ್ ಅವರನ್ನು ಎಂದಿಗೂ ಖಾಲಿಹಸ್ತದಿಂದ ಹಿಂದಿರುಗಿಸುತ್ತಿರಲಿಲ್ಲ. ಹಣ್ಣುಗಳು, ಉತ್ತಮ ಗುಣಮಟ್ಟದ ಸಕ್ಕರೆ ಮುಂತಾದ ಯಾವುದಾದರೂ ವಸ್ತುವನ್ನು ಉಡುಗೊರೆಯಾಗಿ ನೀಡುತ್ತಿದ್ದರು. ಪಂಡಿತ್ ಮೋಹನ್ ಲಾಲ್ ಅವರು ಹೇಳುತ್ತಿದ್ದರು: "ಹಝ್ರತ್ ಸಾಹಿಬ್ ಬಹಳ ಮೆಹರ್ಬಾನಿ ಮಾಡುತ್ತಿದ್ದರು. ಯಾವಾಗಲೂ ನಗುತ್ತಾ ಭೇಟಿಯಾಗುತ್ತಿದ್ದರು ಮತ್ತು ಎಂದಿಗೂ ಖಾಲಿಹಸ್ತದಿಂದ ಕಳುಹಿಸುತ್ತಿರಲಿಲ್ಲ."

ಒಮ್ಮೆ ಹಝ್ರತ್ ಅ.ಸ. ಅವರು ಅವರಿಗೆ ಅತ್ಯಂತ ಉತ್ತಮವಾದ ಸೇಬುಗಳನ್ನು ನೀಡಿದರು. ಅವರು ಅವುಗಳನ್ನು ತೆಗೆದುಕೊಂಡು ಹೋದಾಗ ಪಂಡಿತ್ ಲೇಖರಾಮ್, "ಏನು ತಂದಿದ್ದೀಯ?" ಎಂದು ಕೇಳಿದರು. "ಸೇಬುಗಳನ್ನು ತಂದಿದ್ದೇನೆ" ಎಂದು ಉತ್ತರಿಸಿದರು. ಲೇಖರಾಮ್ ಅವುಗಳನ್ನು ನೋಡಿ, "ಕೊಡು, ನಾನೂ ತಿನ್ನುತ್ತೇನೆ" ಎಂದರು. ಆಗ ಮೋಹನ್ ಲಾಲ್ ಹಾಸ್ಯವಾಗಿ ಹೇಳಿದರು: "ನೀನು ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ದೊಡ್ಡ ವಿರೋಧಿಯಾಗಿದ್ದೀಯ. ಅವರ ವಿರುದ್ಧ ಮಾತನಾಡುತ್ತೀಯ. ಹಾಗಿದ್ದರೆ ಅವರ ಮನೆಯ ವಸ್ತುವನ್ನು ನೀನು ಏಕೆ ತಿನ್ನಬೇಕು?" ಆದರೆ ಲೇಖರಾಮ್ ತಕ್ಷಣವೇ ಅವರ ಕೈಯಿಂದ ಸೇಬನ್ನು ಕಿತ್ತುಕೊಂಡು ತಿನ್ನಲು ಪ್ರಾರಂಭಿಸಿದರು. ಪಂಡಿತ್ ಮೋಹನ್ ಲಾಲ್ ಕೊನೆಯಲ್ಲಿ ಹೇಳುತ್ತಾರೆ: "ನಾನು ಯಾವಾಗಲೂ ಹಝ್ರತ್ ಸಾಹಿಬ್ ಅವರಿಂದ ಪ್ರೀತಿ ಮತ್ತು ವಾತ್ಸಲ್ಯವನ್ನೇ ಕಂಡಿದ್ದೇನೆ." (ಹಯಾತೆ ಅಹ್ಮದ್, ಹಝ್ರತ್ ಶೈಖ್ ಯಾಕೂಬ್ ಅಲಿ ಇರ್ಫಾನಿ ರ.ಹ., ಸಂಪುಟ 2, ಭಾಗ 2, ಪುಟ 186-187)

ಹಝ್ರತ್ ಮುನ್ಶಿ ಝಫರ್ ಅಹ್ಮದ್ ಸಾಹಿಬ್ ರ.ಅ. ಹೇಳುತ್ತಾರೆ: "ಹುಝೂರ್ ಅವರ ಬಳಿ ಮುಶ್ಕ್-ಕಸ್ತೂರಿ ಇರುತ್ತಿತ್ತು. ಒಮ್ಮೆ ನಾನು, 'ಹುಝೂರ್! ನನಗೆ ಮುಶ್ಕ್ ಬೇಕಾಗಿದೆ' ಎಂದು ಹೇಳಿದೆ. ಹಝ್ರತ್ ಅ.ಸ. ಅವರು ಡಬ್ಬಿಯನ್ನು ನನ್ನ ಮುಂದೆ ಇಟ್ಟು, 'ಇದರಿಂದ ನಿಮಗೆ ಎಷ್ಟು ಬೇಕೋ ತೆಗೆದುಕೊಳ್ಳಿರಿ' ಎಂದರು. ನಾನು ಅದರಿಂದ ಸ್ವಲ್ಪ ಮಾತ್ರ ತೆಗೆದುಕೊಂಡೆ. ಆಗ ಹಝ್ರತ್ ಅ.ಸ. ಅವರು ನಗುತ್ತಾ, 'ಇದು ಏನೂ ಅಲ್ಲ!' ಎಂದು ಹೇಳಿ, ಸುಮಾರು ಒಂದೂವರೆ ತೋಲದಷ್ಟು ಮುಶ್ಕ್ ಅನ್ನು ಸ್ವತಃ ನನಗೆ ನೀಡಿದರು." (ಅಸ್ಹಾಬೆ ಅಹ್ಮದ್, ಸಂಪುಟ-4, ಪುಟ-213)

ಮುಶ್ಕ್ ಅತ್ಯಂತ ಬೆಲೆಬಾಳುವ ವಸ್ತುವಾಗಿತ್ತು. ಆದರೆ ಹಝ್ರತ್ ಅ.ಸ. ಅವರಿಗೆ ವಸ್ತುವಿನ ಬೆಲೆ ಮುಖ್ಯವಾಗಿರಲಿಲ್ಲ. ಅವರ ಜೀವನವು ಉನ್ನತ ಅಖ್ಲಾಕಿನ ಆದರ್ಶವನ್ನು ಸ್ಥಾಪಿಸುವುದಕ್ಕಾಗಿ ಇತ್ತು.

ಹಕೀಮ್ ಮುಫ್ತಿ ಫಝ್ಲುರ್ ರಹ್ಮಾನ್ ಸಾಹಿಬ್ ರ.ಅ. ಅವರು ತಮ್ಮ ಜೀವನದ ಅತ್ಯಂತ ಹೃದಯಸ್ಪರ್ಶಿ ಘಟನೆಯೊಂದನ್ನು ವಿವರಿಸುತ್ತಾರೆ.

ಅವರ ಪತ್ನಿಗೆ ಮಗುವಾದ ಏಳನೆಯ ದಿನ, ಸಂಜೆ ವೇಳೆಗೆ ಅವಳಿಗೆ ತೀವ್ರವಾದ ಸೆಳೆತದ ಲಕ್ಷಣಗಳು ಕಾಣಿಸಿಕೊಂಡವು. ಆ ದಿನಗಳಲ್ಲಿ ಈ ರೋಗವು ಹರಡಿದ್ದರಿಂದ ಪರಿಸ್ಥಿತಿ ಬಹಳ ಗಂಭೀರವಾಗಿತ್ತು. ಅವರು ಮಗ್ರಿಬ್ ನಂತರ ಹಝ್ರತ್ ಅ.ಸ. ಅವರ ಸೇವೆಗೆ ಧಾವಿಸಿ ಪರಿಸ್ಥಿತಿಯನ್ನು ತಿಳಿಸಿದರು. ಹಝ್ರತ್ ಅ.ಸ. ಅವರು ಔಷಧಿಯನ್ನು ಸೂಚಿಸಿ, ಒಂದು ಗಂಟೆ ಅಥವಾ ಒಂದೂವರೆ ಗಂಟೆಯ ಬಳಿಕ ಪರಿಸ್ಥಿತಿಯನ್ನು ತಿಳಿಸುವಂತೆ ಹೇಳಿದರು. ರಾತ್ರಿ ಪೂರ್ತಿ ಹುಝೂರ್ ಅ.ಸ. ಅವರು ರೋಗಿಯ ಸ್ಥಿತಿಯ ಬಗ್ಗೆ ವಿಚಾರಿಸುತ್ತಿದ್ದರು. ಅನೇಕ ಔಷಧಿಗಳನ್ನು ಬದಲಾಯಿಸಿ ನೀಡುವಂತೆ ಸೂಚಿಸಿದರು. ಕೊನೆಗೆ ಪರಿಸ್ಥಿತಿ ಅತ್ಯಂತ ಗಂಭೀರವಾಯಿತು. ಉಸಿರಾಟ ಕಷ್ಟವಾಯಿತು, ಕುತ್ತಿಗೆ ಹಿಂದಕ್ಕೆ ಸೆಳೆಯಿತು, ಕಣ್ಣುಗಳಿಗೆ ಕತ್ತಲೆ ಬಂತು ಮತ್ತು ನಾಲಿಗೆ ಮಾತಾಡದಂತಾಯಿತು. ಮುಫ್ತಿ ಸಾಹಿಬ್ ಮತ್ತೆ ಹುಝೂರ್ ಅ.ಸ. ಅವರ ಬಳಿಗೆ ಧಾವಿಸಿದರು. ಹುಝೂರ್ ಅ.ಸ. ಅವರು ಹೇಳಿದರು: "ಲೋಕದಲ್ಲಿರುವ ಎಲ್ಲಾ ಆಯುಧಗಳನ್ನು ನಾವು ಪ್ರಯೋಗಿಸಿದ್ದೇವೆ. ಈಗ ಒಂದು ಆಯುಧ ಮಾತ್ರ ಉಳಿದಿದೆ; ಅದು ದುಆ. ನೀನು ಹೋಗು. ನಾನು ದುಆ ಮಾಡಿ ಈಗ ಎದ್ದೇಳುತ್ತೇನೆ." ಹುಝೂರ್ ಅ.ಸ. ಅವರ ಈ ಮಾತುಗಳಲ್ಲಿ ಸ್ನೇಹಿತನ ನೋವಿನ ಬಗ್ಗೆ ಎಂತಹ ಆಳವಾದ ಕಾಳಜಿ ಅಡಗಿದೆ!

ತದನಂತರ ಅವರು ಮನೆಗೆ ಹಿಂದಿರುಗಿ ತಮ್ಮ ಪತ್ನಿಗೆ ಹೇಳಿದರು: "ಈಗ ನಿನಗೆ ಏನು ಚಿಂತೆ? ಈಗ ಗುತ್ತಿಗೆದಾರನೇ ಗುತ್ತಿಗೆ ತೆಗೆದುಕೊಂಡಿದ್ದಾನೆ."

ರಾತ್ರಿ ಸುಮಾರು ಎರಡು ಗಂಟೆಯಾಗಿತ್ತು. ಅವರು ಮತ್ತೊಂದು ಕೋಣೆಯಲ್ಲಿ ಮಲಗಿದರು. ಬೆಳಿಗ್ಗೆ ಪಾತ್ರೆಗಳ ಶಬ್ದದಿಂದ ಅವರ ಕಣ್ಣು ತೆರೆದವು. ನೋಡಿದಾಗ, ಅವರ ಪತ್ನಿ ಎದ್ದು ಪಾತ್ರೆಗಳನ್ನು ಸರಿಪಡಿಸುತ್ತಿದ್ದರು. ಅವರು, "ಈಗ ಹೇಗಿದ್ದೀಯ?" ಎಂದು ಕೇಳಿದರು. ಅವಳು ಉತ್ತರಿಸಿದಳು: "ನೀವು ಮಲಗಿದ್ದಿರಿ. ಎರಡು ಗಂಟೆಗಳ ನಂತರ ಸರ್ವಶಕ್ತನಾದ ಅಲ್ಲಾಹನು ನನಗೆ ಕರುಣಿಸಿದನು." ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್!
(ಸೀರತೆ ಅಹ್ಮದ್, ಹಝ್ರತ್ ಖುದ್ರತುಲ್ಲಾ ಸನೌರಿ ಸಾಹಿಬ್ ರ.ಹ., ಪುಟ 170-172)

ಈ ಘಟನೆಯು ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಸ್ನೇಹಿತರಿಗಾಗಿ ಇರುವ 'ಕರುಣೆ, ನೋವು ಮತ್ತು ದಾನಶೀಲತೆ ಈ ಮೂರೂ ಗುಣಗಳ ಉನ್ನತ ಮಟ್ಟವನ್ನು ತೋರಿಸುತ್ತದೆ.

ಹಝ್ರತ್ ಶೈಕ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ್ ಬರೆಯುತ್ತಾರೆ: ಖಾದಿಯಾನ್‌ನಲ್ಲಿ ನಿಹಾಲ್ ಸಿಂಗ್ ಎಂಬ ಜಾಟ್ ವ್ಯಕ್ತಿಯಿದ್ದನು. ಅವನು ತನ್ನ ಯೌವನದಲ್ಲಿ ಸೈನ್ಯದಲ್ಲಿ ಕೆಲಸವಾಡಿತ್ತಿದ್ದನು ಮತ್ತು ಪಿಂಚಣಿಯನ್ನು ಕೂಡ ಪಡೆಯುತ್ತಿದ್ದನು. ಅವನ ಮನೆ ಖಾನ್ ಬಹಾದ್ದುರ್ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರ ಮನೆಯ ಪಕ್ಕದಲ್ಲೇ ಇತ್ತು. ಅವನು ಜಮಾಅತಿನ ಕಠಿಣ ವಿರೋಧಿಯಾಗಿದ್ದನು. ಆತನ ಯೋಜನೆಯಿಂದಾಗಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹಝ್ರತ್ ನೂರುದ್ದೀನ್ ಸಾಹಿಬ್(ರ) ಹಾಗೂ ಕೆಲವು ಅಹ್ಮದಿಗಳ ವಿರುದ್ಧ ಸುಳ್ಳು ಫೌಜ್ದಾರಿ ಮೊಕದ್ದಮೆ ದಾಖಲಿಸುವುದರಲ್ಲಿಯೂ ಅವನ ಪಾತ್ರವಿತ್ತು. ಅಹ್ಮದಿಗಳಿಗೆ ತೊಂದರೆ ಕೊಡುವುದು ಮತ್ತು ನಿಂದಿಸುವುದು ಅವನಿಗೆ ಸಾಮಾನ್ಯವಾಗಿತ್ತು. ಅದೇ ದಿನಗಳಲ್ಲಿ ಅವನ ಸೋದರಳಿಯ ಸಂತಾ ಸಿಂಗ್ ಅವರ ಪತ್ನಿಗೆ ಮುಶ್ಕ್‌ನ ಅಗತ್ಯವಾಯಿತು. ಬೇರೆಡೆ ಅದು ದೊರೆಯಲಿಲ್ಲ. ಕೊನೆಗೆ ಇದೇ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಬಾಗಿಲಿಗೆ ಬಂದು ಮುಶ್ಕ್ ಕೇಳಿದನು. ಹಝ್ರತ್ ಅ.ಸ. ಅವರು ಅವನನ್ನು ಕಾಯಿಸದೆ ತಕ್ಷಣ ಹೊರಗೆ ಬಂದರು. ಅವನ ಅಗತ್ಯವನ್ನು ಕೇಳಿದ ಕೂಡಲೇ, "ನಿಲ್ಲು, ನಾನು ಈಗಲೇ ತರುತ್ತೇನೆ" ಎಂದು ಹೇಳಿ ಒಳಗೆ ಹೋದರು. ಸ್ವಲ್ಪ ಹೊತ್ತಿನಲ್ಲೇ ಸುಮಾರು ಅರ್ಧ ತೋಲದಷ್ಟು ಮುಶ್ಕ್ ತಂದು ಅವನಿಗೆ ನೀಡಿದರು. (ಸೀರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಶೈಕ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ್(ರ), ಭಾಗ-2, ಪುಟ-295-296)

ಹಝ್ರತ್ ಶೈಕ್ ಯಾಖೂಬ್ ಅಲಿ ಇರ್ಫಾನಿ ಸಾಹಿಬ್(ರ) ಬರೆಯುತ್ತಾರೆ: ದೇಶದಲ್ಲಿ ಪ್ಲೇಗ್ ಹರಡಿದಾಗ, ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ಸರ್ವಶಕ್ತನಾದ ಅಲ್ಲಾಹನ ವಹೀ ಮತ್ತು ಜ್ಞಾನದ ಅಧೀನದಲ್ಲಿ ಒಂದು ಔಷಧಿಯನ್ನು ತಯಾರಿಸಲು ಪ್ರಾರಂಭಿಸಿದರು. ಅದಕ್ಕೆ "ತಿರ್ಯಾಕೆ ಇಲಾಹಿ" ಎಂಬ ಹೆಸರು ನೀಡಿದರು. ಈ ಔಷಧಿಗೆ ಯಾವುದೇ ನಿಶ್ಚಿತವಾದ ಸಾಮಾನ್ಯ ಸೂತ್ರವಿರಲಿಲ್ಲ. ಸರ್ವಶಕ್ತನಾದ ಅಲ್ಲಾಹನ ವಹೀ-ಎ-ಖಫಿಯ ಮಾರ್ಗದರ್ಶನದಂತೆ ಅದರ ಅಂಶಗಳನ್ನು ಸೇರಿಸಲಾಗುತ್ತಿತ್ತು. ಅದರಲ್ಲಿ ಸಾವಿರಾರು ರೂಪಾಯಿಗಳ ಮೌಲ್ಯದ ರತ್ನಗಳು ಮತ್ತು ಅನೇಕ ಬೆಲೆಬಾಳುವ ಔಷಧಿಗಳನ್ನು ಸೇರಿಸಲಾಗಿತ್ತು.

ಔಷಧಿ ಸಿದ್ಧವಾದಾಗ ಹಝ್ರತ್ ಅ.ಸ. ಅವರು ಅದನ್ನು ಅತ್ಯಂತ ಉದಾರತೆಯಿಂದ ಜನರಿಗೆ ಹಂಚಿದರು. ಯಾರಿಂದಲೂ ಏನನ್ನೂ ಪಡೆಯಲಿಲ್ಲ. ಹೊರಗಿನಿಂದ ಕೇಳಿದವರಿಗೆ ಸಹ ರಿಜಿಸ್ಟರ್ಡ್ ಪಾರ್ಸೆಲ್ ಅನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕಳುಹಿಸುತ್ತಿದ್ದರು.

ಡಾಕ್ಟರ್ ಸಾದಿಕ್ ಸಾಹಿಬ್ ಒಮ್ಮೆ ವಿವರಿಸಿದಂತೆ, ಒಬ್ಬ ವ್ಯಕ್ತಿ ಎರಡು-ಮೂರು ಮಾಶೆ ತಿರ್ಯಾಕನ್ನು ಕೇಳಿದಾಗ, ಹಝ್ರತ್ ಅ.ಸ. ಅವರು ಅದಕ್ಕಿಂತಲೂ ಬಹಳ ಹೆಚ್ಚಿನ ಪ್ರಮಾಣವನ್ನು ಡಬ್ಬಿಯಲ್ಲಿ ಹಾಕಿ ರಿಜಿಸ್ಟರ್ ಮಾಡಿ ಕಳುಹಿಸಿದರು. ಹಝ್ರತ್ ಶೈಖ್ ಯಾಕೂಬ್ ಅಲಿ ಇರ್ಫಾನಿ ರ.ಹ. ಹೇಳುತ್ತಾರೆ ನಾನು ಸ್ವತಃ ಅವರಿಗೂ ಒಮ್ಮೆ ಕೇಳಿದಾಗ, ಹಝ್ರತ್ ಅ.ಸ. ಅವರು ಬಹಳ ದೊಡ್ಡ ಪ್ರಮಾಣವನ್ನು ನೀಡಿದರು. ಕೇವಲ ತಿಯಾಕ್‌ನಲ್ಲೇ ಇಂತಹ ಉದಾರತೆ ಇರಲಿಲ್ಲ ಬದಲಿಗೆ ಔಷಧಿಗಳ ವಿಷಯದಲ್ಲಿಯೂ ಇದೇ ಉದಾರತೆಯ ಮಾದರಿ ಇತ್ತು. ಕೆಲವೊಮ್ಮೆ ಸಂಪೂರ್ಣ ಬಾಟಲಿಯನ್ನೇ ನೀಡಿ ಬಿಡುತ್ತಿದ್ದರು. ಕೆಲವೊಮ್ಮೆ ಅತ್ಯಂತ ಬೆಲೆಬಾಳುವ ಮುಶ್ಕನ್ನೂ ತಮ್ಮ ಕಠಿಣ ವಿರೋಧಿಗಳಿಗೆ ನೀಡುತ್ತಿದ್ದರು. (ಸೀರತ್ ಮಸೀಹ್ ಮೌಊದ್ ಅ.ಸ., ಭಾಗ 2, ಪುಟ 309-310)

ಹಝ್ರತ್ ಶೈಖ್ ಮುಹಮ್ಮದ್ ನಸೀಬ್ ಸಾಹಿಬ್ ರ.ಅ. ಹೇಳುತ್ತಾರೆ: "ಒಮ್ಮೆ ನಮಗೆ ಕಸ್ತೂರಿಯ ಅಗತ್ಯವಾಯಿತು. ಆ ದಿನಗಳಲ್ಲಿ ಖಾದಿಯಾನ್‌ನಲ್ಲಿ ಅದು ಸಿಗುವುದು ಬಹಳ ಕಷ್ಟವಾಗಿತ್ತು. ಹಝ್ರತ್ ಸಾಹಿಬ್ ಅವರ ಸೇವೆಯಲ್ಲಿ ವಿನಂತಿಸಿದೆವು. ಅವರು ಅಗತ್ಯಕ್ಕಿಂತಲೂ ಬಹಳ ಹೆಚ್ಚಿನ ಪ್ರಮಾಣವನ್ನು

ನೀಡಿದರು." (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ-5, ಪುಟ-446)

ಮುನ್ಷಿ ಝಫರ್ ಅಹ್ಮದ್ ಸಾಹಿಬ್ ಕಪುರಥಲವೀ(ರ) ಅವರು ಹೀಗೆ ವಿವರಿಸುತ್ತಾರೆ: "ಒಬ್ಬ ಸ್ನೇಹಿತನು ಬಹಳ ಪರಿಶ್ರಮ, ಪ್ರಯತ್ನ ಹಾಗೂ ಅಪಾರ ವೆಚ್ಚವನ್ನು ಮಾಡಿ, ಒಬ್ಬ ವ್ಯಕ್ತಿಯಿಂದ ಒಂದು 'ಕುಷ್ಟಾ' ತಯಾರಿಸುವ ವಿಧಾನವನ್ನು ಪಡೆದುಕೊಂಡನು. ಆ ವಿಧಾನದ ಪ್ರಕಾರ ಕುಷ್ಟಾವನ್ನು ತಯಾರಿಸಿ, ಅದನ್ನು ಹಝ್ರತ್ ಸಾಹಿಬ್ ಅವರ ಸೇವೆಗೆ ಅರ್ಪಿಸಿದನು ಮತ್ತು ಅದರ ತಯಾರಿಕಾ ವಿಧಾನವನ್ನೂ ಸಹ ನೀಡಿದನು. ಇನ್ನೊಬ್ಬ ಸ್ನೇಹಿತನು ನನಗೆ, 'ಆ ಕುಷ್ಟಾದ ತಯಾರಿಕಾ ವಿಧಾನವನ್ನು ಪಡೆದುಕೊಳ್ಳಬೇಕು' ಎಂದು ಹೇಳಿದನು. ಆದರೆ ಆ ಸ್ನೇಹಿತನು ಆ ವಿಷಯವನ್ನು ಯಾರಿಗೂ ತಿಳಿಸುತ್ತಿರಲಿಲ್ಲ. ಆಗ ನಾನು ಹಝ್ರತ್ ಸಾಹಿಬ್ ಅವರ ಸೇವೆಗೆ ತೆರಳಿ, 'ಅಮೂಕ ಸ್ನೇಹಿತರು ಯಾವುದೋ ಒಂದು ಕುಷ್ಟಾವನ್ನು ಹುಝೂರ್ ಅವರಿಗೆ ನೀಡಿದ್ದಾರೆ' ಎಂದು ವಿನಂತಿಸಿದೆ. ಸದಕ್ಕೆ ಹುಝೂರ್ ಹೇಳಿದರು: 'ಆ ಬಾಟಲಿ ಅಲ್ಲಿ ಇಟ್ಟಿದೆ; ಅದನ್ನು ತೆಗೆದುಕೊಂಡು ಹೋಗು.' ನಾನು ಕೇಳಿದೆ: 'ಅದರ ತಯಾರಿಕಾ ವಿಧಾನವೂ ಸಿಗಬಹುದೇ?' ಹುಝೂರ್ ಹೇಳಿದರು: 'ಅದೂ ಅಲ್ಲಿಯೇ ಅದರ ಜೊತೆಯಲ್ಲಿ ಇಟ್ಟಿದೆ.' ಹೀಗಾಗಿ ನಾನು ಆ ಕುಷ್ಟಾವನ್ನು ಅದರ ತಯಾರಿಕಾ ವಿಧಾನದೊಂದಿಗೆ ತೆಗೆದುಕೊಂಡು ಬಂದು, ಆ ಸ್ನೇಹಿತನಿಗೆ ತೋರಿಸಿ, 'ನೀವು ನನಗೆ ಹೇಳುತ್ತಿರಲಿಲ್ಲವಲ್ಲ; ನಾನು ಅದನ್ನು ಪಡೆದುಕೊಂಡು ಬಂದಿದ್ದೇನೆ. ಇದೇ ನೋಡಿ' ಎಂದು ಹೇಳಿದನು. ಆ ಸ್ನೇಹಿತನು ಹುಝೂರ್ ಅವರ ಸೇವೆಗೆ ತೆರಳಿ, 'ಹುಝೂರ್, ನೀವು ಅದನ್ನು ಅವರಿಗೆ ಕೊಟ್ಟುಬಿಟ್ಟಿದ್ದೀರಿ' ಎಂದು ಹೇಳಿದನು. ಆಗ ಹುಝೂರ್ ಹೇಳಿದರು, 'ಅವನು ನಮ್ಮಿಂದ ತೆಗೆದುಕೊಂಡು ಹೋಗಿದ್ದಾನೆ. ಕೇಳಲು ಬಂದಿದ್ದನು; ನಾವು ಕೊಟ್ಟುಬಿಟ್ಟೆವು' ಎಂದು ಹೇಳಿದರು. ನಂತರ ಹುಝೂರ್ ಹೀಗೆ ಹೇಳಿದರು: 'ಮಿರ್ಝಾ ಸಾಹಿಬ್ (ಅಂದರೆ ನಮ್ಮ ದಿವಂಗತ ತಂದೆಯವರ ಬಿಯಾಝ್ (ವೈದ್ಯಕೀಯ ಟಿಪ್ಪಣಿಗಳ ಪುಸ್ತಕ) ನಮ್ಮ ಬಳಿಯಿದೆ. ನಿಮಗೆ ಔಷಧಿಗಳ ತಯಾರಿಕಾ ವಿಧಾನಗಳು ಬೇಕಲ್ಲವೇ? ಹಾಗಿದ್ದರೆ ನಿಮ್ಮ ತಂದೆಯವರ ಆ ಬಿಯಾಝ್ ಅನ್ನು ನಾನು ನಿಮಗೆ ಕೊಡುತ್ತೇನೆ. ಅದರಲ್ಲಿ ಬಹಳ ಉತ್ತಮವಾದ ಔಷಧಿ ವಿಧಾನಗಳಿವೆ. ಅದನ್ನೂ ನೀವು ತೆಗೆದುಕೊಂಡು ಹೋಗಬಹುದು.' ಆದರೆ ನಂತರ ಆ ಬಿಯಾಝ್ ಅನ್ನು ಪಡೆದುಕೊಳ್ಳುವ ವಿಚಾರ ನನ್ನ ಮನಸ್ಸಿನಿಂದ ತಪ್ಪಿಹೋಯಿತು; ಹುಝೂರ್ ಅವರು ಅದನ್ನು ನನಗೆ ಅನುಗ್ರಹಪೂರ್ವಕವಾಗಿ ನೀಡಲು ಇಚ್ಛಿಸಿದ್ದರು." (ಅಸ್ಹಾಬ್-ಎ-ಅಹ್ಮದ್, ಸಂಪುಟ 4, ಪುಟ 214-215)

ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್ ರ.ಅ. ಅವರು ತಮ್ಮ ಒಂದು ಪತ್ರದಲ್ಲಿ ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಸೇವೆಯಲ್ಲಿ ಹೀಗೆ ಬರೆದಿದ್ದರು: "ಗರ್ಭಧಾರಣೆಯ ಕಾರಣದಿಂದ ಕೆಲವು ಕಾಲದಿಂದ ನನ್ನ ಮನೆಯಲ್ಲಿ ಅಂತಹ ತೊಂದರೆ ಉಂಟಾಗಿದೆ; ಮನೆಯಲ್ಲಿ ಅಡುಗೆ ತಯಾರಿಸಲು ಸಾಧ್ಯವಾಗುತ್ತಿಲ್ಲ. ರೊಟ್ಟಿಯನ್ನು ತಂದುರ್‌ನಲ್ಲಿ ಬೇಯಿಸಿಕೊಳ್ಳಲಾಗುತ್ತಿದೆ. ಆದರೆ ಹಂಡಿಯಲ್ಲಿ ಅಡುಗೆ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ ಕೆಲವು ಕಾಲ ಲಂಗರ್‌ನಿಂದ ಸಾರು (ಸಾಲನ್) ದೊರೆಯುವಂತೆ ವ್ಯವಸ್ಥೆ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ."

ಇದಕ್ಕೆ ಉತ್ತರವಾಗಿ ಹುಝೂರ್ ಅ.ಸ. ಅವರು ಲಂಗರ್‌ನ ಇಂಚಾರ್ಜ್ ಆಗಿದ್ದ ಮಿಯಾಂ ನಜ್ಮುದ್ದೀನ್ ಸಾಹಿಬ್ ರ.ಅ. ಅವರಿಗೆ ಪತ್ರ ಬರೆದು ಹೀಗೆ ನಿರ್ದೇಶಿಸಿದರು: "ಮುಫ್ತಿ ಸಾಹಿಬರಿಗೆ ದಿನಕ್ಕೆ ಎರಡು ವೇಳೆ ಲಂಗರ್‌ನಿಂದ ಉತ್ತಮವಾದ ಸಾಲನ್ ನೀಡುತ್ತಿರಬೇಕು. ಇದು ವಿಶೇಷವಾಗಿ ಒತ್ತಿ ಹೇಳುವ ಆದೇಶವಾಗಿದೆ." (ಝಿಕ್ರ್-ಎ-ಹಬೀಬ್, ಹಜ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್ ರ.ಅ., ಪುಟ 281)

ಹಝ್ರತ್ ಮುಹಮ್ಮದ್ ಇಸ್ಮಾಯೀಲ್ ಸಾಹಿಬ್ ರ.ಅ. ಅವರು ವಿವರಿಸುತ್ತಾರೆ: ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ಹಝ್ರತ್ ಈಸಾ ಅ.ಸ. ಅವರ ಪರಿಸ್ಥಿತಿಗಳು ಮತ್ತು ಜೀವನಚರಿತ್ರೆಯ ಕುರಿತು ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಒಂದು ತಂಡವನ್ನು ನಸೀಬೀನ್‌ಗೆ ಕಳುಹಿಸುವ ಸಂಕಲ್ಪ ಮಾಡಿದರು. ಆ ತಂಡದಲ್ಲಿ ಮಿರ್ಝಾ ಖುದಾ ಬಖ್ಶ್ ಸಾಹಿಬ್ ಮತ್ತು ಮೌಲ್ವಿ ಕುತ್ಬುದ್ದೀನ್ ಸಾಹಿಬ್ ಇದ್ದರು. ಮೂರನೆಯ ಸದಸ್ಯರಾಗಿ ನನ್ನ ತಂದೆಯವರಾದ ಮಿಯಾಂ ಜಮಾಲುದ್ದೀನ್ ಸಾಹಿಬ್ ಇದ್ದರು. ಈ ಮೂವರನ್ನೂ ಖುರಾ-ಅಂದಾಜಿಯ ಮೂಲಕ ಆಯ್ಕೆ ಮಾಡಲಾಗಿತ್ತು. ಹುಝೂರ್ ಅ.ಸ. ಅವರು ಪ್ರಯಾಣಕ್ಕೆ ಅಗತ್ಯವಾದ ಬಟ್ಟೆಬರೆ ಮತ್ತು ಇತರ ವಸ್ತುಗಳ ಸಿದ್ಧತೆಗಾಗಿ ಮೂವರಿಗೂ ತಲಾ ಐವತ್ತು ರೂಪಾಯಿಗಳನ್ನು ನೀಡಿದರು. ನಂತರ ಹುಝೂರ್ ಅ.ಸ. ಅವರು ತಂಡಕ್ಕೆ ಬೀಳ್ಕೊಡುಗೆಗಾಗಿ ಒಂದು ಜಲ್ಸಾವನ್ನೂ ಏರ್ಪಡಿಸಿದರು. ಆದರೆ ಕೆಲವು ಕಾರಣಗಳಿಂದಾಗಿ ನಂತರ ಆ ತಂಡದ ಪ್ರಯಾಣವನ್ನು ಸ್ಥಗಿತಗೊಳಿಸಲಾಯಿತು. ತಂಡ ಹೋಗುವುದು ನಿಂತಾಗ ನನ್ನ ತಂದೆಯವರು ತಮಗೆ ನೀಡಲಾಗಿದ್ದ ಐವತ್ತು ರೂಪಾಯಿಗಳನ್ನು ಹುಝೂರ್ ಅ.ಸ. ಅವರ ಖಿದ್ಮತ್‌ಗೆ ಹಿಂದಿರುಗಿಸಲು ಮುಂದಾದರು. ಆಗ ಹುಝೂರ್ ಅ.ಸ. ಅವರು ಹೀಗೆ ಹೇಳಿದರು: "ನಾವು ಯಾರಿಗಾದರೂ ಒಮ್ಮೆ ಏನನ್ನಾದರೂ ನೀಡಿದರೆ, ಅದನ್ನು ಮರಳಿ ತೆಗೆದುಕೊಳ್ಳುವುದಿಲ್ಲ."

ನನ್ನ ತಂದೆಯವರು ಮನೆಗೆ ಹಿಂದಿರುಗಿದ ನಂತರ ಈ ಘಟನೆ ನನಗೆ ತಿಳಿಸಿದರು. (ರಿವಾಯಾತ್-ಎ-ಅಸ್ಹಾಬ್-ಎ-ಅಹ್ಮದ್, ಸಂಪುಟ 2, ಪುಟ 140)

ಹಝ್ರತ್ ಮಲಿಕ್ ಗುಲಾಮ್ ಹುಸೈನ್ ಸಾಹಿಬ್ ರ.ಅ. ಅವರು ವಿವರಿಸುತ್ತಾರೆ: ಇದು 1894 ಅಥವಾ 1895ರ ಜಲ್ಸಾ ಸಾಲಾನಾದ ಸಂದರ್ಭ. ಹಿಸಾಮುದ್ದೀನ್ ಸಾಹಿಬ್ ಸಿಯಾಲ್ಕೋಟಿ ಅವರಿಗೆ ಅಡುಗೆ ಮಾಡುವುದರಲ್ಲಿ ಹಾಗೂ ರುಚಿಕರವಾದ ಆಹಾರ ಸೇವಿಸುವುದರಲ್ಲಿ ಬಹಳ ಆಸಕ್ತಿ ಇತ್ತು. ಅವರು ಆ ಸಮಯದಲ್ಲಿ ಜಲ್ಸಾಗೆ ಬಂದಿದ್ದರು. ಅವರು ಹಝ್ರತ್ ಸಾಹಿಬ್ ಅ.ಸ. ಅವರ ಖಿದ್ಮತ್‌ನಲ್ಲಿ ಶಬ್‌ದೀಗ್ ಎಂಬ ಆಹಾರದ ಬಹಳ ಪ್ರಶಂಸೆಯನ್ನು ಮಾಡಿದರು. ಅವರು ಹುಝೂರ್ ಅ.ಸ ಅವರಿಗೆ ಹೇಳಿದರು: "ಹುಝೂರ್! ಶಬ್‌ದೀಗ್ ಬಹಳ ರುಚಿಕರವಾಗಿ ತಯಾರಾಗುತ್ತದೆ. ಇದರಲ್ಲಿ ವಿವಿಧ ರೀತಿಯ ಮಾಂಸ, ಹಣ್ಣುಗಳು ಮತ್ತು ತರಕಾರಿಗಳನ್ನು ಹಾಕಲಾಗುತ್ತದೆ ಮತ್ತು ಇಡೀ ರಾತ್ರಿ ಬೇಯಿಸಲಾಗುತ್ತದೆ." ಆಗ ಹಝ್ರತ್ ಸಾಹಿಬ್ ಅ.ಸ. ಅವರು ನನ್ನನ್ನು ಕರೆದು ಹೇಳಿದರು: "ಶಾಹ್ ಸಾಹಿಬ್ ಅವರಿಗೆ ಯಾವುದು ಇಷ್ಟವೋ, ಎಷ್ಟು ಸಾಮಗ್ರಿಗಳು ಬೇಕೆಂದು ಅವರು ಬಯಸುತ್ತಾರೋ, ಅವೆಲ್ಲವನ್ನೂ ಅವರಿಗಾಗಿ ಒದಗಿಸಿಕೊಡು." ಅದರಂತೆ ಮಾಂಸವನ್ನು ಇಲ್ಲಿಂದಲೇ ಪಡೆದುಕೊಳ್ಳಲಾಯಿತು ಮತ್ತು ಶಾಲ್ಗಮ್‌ಗಳನ್ನು ಬಟಾಲಾದಿಂದ ತರಿಸಲಾಯಿತು. ಸಂಜೆ ವೇಳೆಗೆ ಸುಮಾರು ನಾಲ್ಕು ದೊಡ್ಡ ದೇಗ್‌ಗಳನ್ನು ಇಡಲಾಯಿತು. ಅಲ್ಲಿನ ಪ್ರಸಿದ್ಧ ಅಂಗಡಿಯಿಂದ ಸುಮಾರು ಎರಡೂವರೆ ಮಣ ಉತ್ತಮ ಅಕ್ಕಿಯನ್ನೂ ಖರೀದಿಸಲಾಯಿತು. ಬೆಳಿಗ್ಗೆ ಅತಿಥಿಗಳಿಗೆ ಸಯ್ಯಿದ್ ಹಿಸಾಮುದ್ದೀನ್ ಸಾಹಿಬ್ ಅವರ ಇಚ್ಛೆಯಂತೆ ಊಟವನ್ನು ನೀಡಲಾಯಿತು. (ರಿವಾಯಾತ್-ಎ-ಅಸ್ಹಾಬ್-ಎ-ಅಹ್ಮದ್, ಸಂಪುಟ 4, ಪುಟ 30)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರ.ಅ. ಅವರು ವಿವರಿಸುತ್ತಾರೆ: ಮುಂಶಿ ಜಫರ್ ಅಹ್ಮದ್ ಸಾಹಿಬ್ ರ.ಅ. ಅವರು ನನಗೆ ಬರೆದು ಕೊಟ್ಟಿರುವ ಒಂದು ವರದಿ ಇದೆ. ಒಮ್ಮೆ ಜಲ್ಸಾ ಸಾಲಾನಾದ ಸಂದರ್ಭದಲ್ಲಿ ಖರ್ಚಿಗಾಗಿ ಹಣವೇ ಉಳಿದಿರಲಿಲ್ಲ. ಆ ದಿನಗಳಲ್ಲಿ ಜಲ್ಸಾ ಸಾಲಾನಾಗಾಗಿ ನಿಯಮಿತವಾಗಿ ಚಂದಾ ಸಂಗ್ರಹವಾಗುತ್ತಿರಲಿಲ್ಲ. ಅಂದರೆ ನಿಯಮಿತ ಚಂದಾ ವ್ಯವಸ್ಥೆ ಇರಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ಸ್ವಂತವಾಗಿ ಖರ್ಚು ಮಾಡುತ್ತಿದ್ದರು. ಮೀರ್ ನಾಸಿರ್ ನವಾಬ್ ಸಾಹಿಬ್ ರ.ಅ. ಅವರು ಲಂಗರ್‌ನ ಇಂಚಾರ್ಜ್ ಆಗಿದ್ದರು. ಅವರು ಬಂದು ಅರ್ಜಿ ಸಲ್ಲಿಸಿದರು: "ರಾತ್ರಿಯಲ್ಲಿ ಅತಿಥಿಗಳಿಗಾಗಿ ಯಾವುದೇ ಆಹಾರ ಸಾಮಗ್ರಿ ಉಳಿದಿಲ್ಲ. ಖರ್ಚು ಮುಗಿದಿದೆ, ಹಣ ಮುಗಿದಿದೆ, ಆಹಾರ ಸಾಮಗ್ರಿಯೂ ಮುಗಿದಿದೆ. ಈಗ ಅತಿಥಿಗಳಿಗಾಗಿ ಊಟದ ವ್ಯವಸ್ಥೆ ಮಾಡಲು ಏನೂ ಇಲ್ಲ." ಹಝ್ರತ್ ಅ.ಸ. ಅವರು ಹೇಳಿದರು: "ಬೀವೀ ಸಾಹಿಬಾರಿಂದ ಯಾವುದಾದರೂ ಆಭರಣವನ್ನು ಪಡೆದುಕೊಂಡು, ಎಷ್ಟು ಅಗತ್ಯವೋ ಅಷ್ಟು ಮಾರಾಟ ಮಾಡಿ ಆಹಾರ ಸಾಮಗ್ರಿಯ ವ್ಯವಸ್ಥೆ ಮಾಡಿಕೊಳ್ಳಿ." ಅದರಂತೆ ಹಝ್ರತ್ ಅಮ್ಮಾಜಾನ್ ರ.ಅ. ಅವರ ಆಭರಣವನ್ನು ಮಾರಾಟ ಮಾಡಲಾಯಿತು ಅಥವಾ ಗಿರವಿಟ್ಟುಕೊಂಡು ಮೀರ್ ಸಾಹಿಬ್ ರ.ಅ. ಅವರು ಹಣವನ್ನು ಪಡೆದುಕೊಂಡರು ಮತ್ತು ಅತಿಥಿಗಳಿಗಾಗಿ ಆಹಾರ ಸಾಮಗ್ರಿಯ ವ್ಯವಸ್ಥೆ ಮಾಡಲಾಯಿತು. ಎರಡು ದಿನಗಳ ನಂತರ ಮತ್ತೆ ರಾತ್ರಿ ವೇಳೆ ನನ್ನ ಸಮ್ಮುಖದಲ್ಲಿ ಮೀರ್ ಸಾಹಿಬ್ ರ.ಅ. ಅವರು ಅರ್ಜಿ ಸಲ್ಲಿಸಿದರು: "ನಾಳೆಗಾಗಿ ಮತ್ತೆ ಏನೂ ಉಳಿದಿಲ್ಲ. ಎರಡು ದಿನಗಳು ಆಭರಣದ ಹಣದಿಂದ ಕಳೆದವು. ಈಗ ಮುಂದೆ ಏನು ಮಾಡಬೇಕು?" ಹಝ್ರತ್ ಅ.ಸ. ಅವರು ಹೇಳಿದರು: "ನಾವು ಬಾಹ್ಯ ಕಾರಣ-ಕಾರ್ಯಗಳ ಪರಿಗಣನೆಯೊಂದಿಗೆ ವ್ಯವಸ್ಥೆ ಮಾಡಬೇಕಾದುದನ್ನು ಮಾಡಿದ್ದೇವೆ. ನಮ್ಮ ಬಳಿ ಇದ್ದುದನ್ನೆಲ್ಲ ನಾವು ಕೊಟ್ಟಿದ್ದೇವೆ. ಈಗ ನಮಗೆ ಚಿಂತೆಯ ಅಗತ್ಯವಿಲ್ಲ. ಇವರು ಯಾರ ಅತಿಥಿಗಳೋ, ಅಲ್ಲಾಹ್‌ನ ನಿಮಿತ್ತವಾಗಿ ಬಂದಿರುವ ಜನರು. ಇವರು ಅಲ್ಲಾಹ್‌ನ ಅತಿಥಿಗಳು. ಈಗ ಆತನೇ ಅವರ ವ್ಯವಸ್ಥೆ ಮಾಡುತ್ತಾನೆ." ಮುಂದಿನ ದಿನ ಬೆಳಿಗ್ಗೆ ಎಂಟು ಅಥವಾ ಒಂಬತ್ತು ಗಂಟೆಯ ಸಮಯದಲ್ಲಿ ಅಂಚೆಗಾರ ಬಂದಾಗ, ಹುಝೂರ್ ಅ.ಸ. ಅವರು ಮೀರ್ ಸಾಹಿಬ್ ರ.ಅ. ಮತ್ತು ನನ್ನನ್ನು ಕರೆಸಿದರು. ಅಂಚೆಗಾರನ ಕೈಯಲ್ಲಿ ಸುಮಾರು ಹತ್ತು ಅಥವಾ ಹದಿನೈದು ಮನಿ ಆರ್ಡರ್‌ಗಳು ಇದ್ದವು. ವಿವಿಧ ಸ್ಥಳಗಳಿಂದ ಅವು ಬಂದಿದ್ದವು. ಕೆಲವು ನೂರು ರೂಪಾಯಿಗಳಾಗಿದ್ದವು, ಕೆಲವು ಐವತ್ತು ರೂಪಾಯಿಗಳಾಗಿದ್ದವು. ಅವುಗಳ ಮೇಲೆ ಹೀಗೆ ಬರೆಯಲಾಗಿತ್ತು: "ನಾವು ಹಾಜರಾಗಲು ಅಸಮರ್ಥರಾಗಿದ್ದೇವೆ. ಅತಿಥಿಗಳ ಖರ್ಚಿಗಾಗಿ ಈ ಹಣವನ್ನು ಕಳುಹಿಸುತ್ತಿದ್ದೇವೆ." ಹುಝೂರ್ ಅ.ಸ. ಅವರು ಆ ಹಣವನ್ನು ಸ್ವೀಕರಿಸಿ ತವಕ್ಕುಲ್ ಕುರಿತು ಭಾಷಣ ಮಾಡುತ್ತಾ ಹೇಳಿದರು: "ಒಬ್ಬ ಲೋಕಾಸಕ್ತ ವ್ಯಕ್ತಿಗೆ ತನ್ನ ಪೆಟ್ಟಿಗೆಯಲ್ಲಿ ಇಟ್ಟಿರುವ ಹಣದ ಮೇಲೆ ಯಾವ ರೀತಿಯ ವಿಶ್ವಾಸವಿರುತ್ತದೆಯೆಂದರೆ, ಯಾವಾಗ ಬೇಕಾದರೂ ಅದನ್ನು ತೆಗೆದುಕೊಳ್ಳಬಹುದು ಎಂದು ಅವನಿಗೆ ಭರವಸೆಯಿರುತ್ತದೆ. ಅದಕ್ಕಿಂತಲೂ

ಹೆಚ್ಚಿನ ವಿಶ್ವಾಸವು ಅಲ್ಲಾಹ್ ತಆಲಾ ಮೇಲೆ ತವಕ್ಕುಲ್ ಮಾಡುವವರಿಗೆ ಅಲ್ಲಾಹ್ ತಆಲಾ ಮೇಲೆ ಇರುತ್ತದೆ. ಮತ್ತು ಇದೇ ರೀತಿ ಸಂಭವಿಸುತ್ತದೆ, ಅಗತ್ಯವಿದ್ದಾಗ ಅಲ್ಲಾಹ್ ತಆಲಾ ತಕ್ಷಣವೇ ವ್ಯವಸ್ಥೆ ಮಾಡುತ್ತಾನೆ." (ಸೀರತುಲ್ ಮಹ್ದೀ, ಸಂಪುಟ 2, ಭಾಗ 4, ಪುಟ 97–98, ವರದಿ ಸಂಖ್ಯೆ–1124)

ಹೀಗಾಗಿ ಹುಝೂರ್ ಅ.ಸ. ಅವರು "ಇವರು ಅಲ್ಲಾಹ್‌ನ ಅತಿಥಿಗಳು, ಆತನ ನಿಮಿತ್ತವಾಗಿ ಬಂದಿದ್ದಾರೆ" ಎಂದು ಹೇಳಿದಾಗ, ಖಂಡಿತವಾಗಿಯೂ ದುವಾ ಕೂಡ ಮಾಡಿರಬೇಕು. ಅವರ ತವಕ್ಕುಲ್ ಪರಿಪೂರ್ಣವಾಗಿತ್ತು. ಮತ್ತು ಅಲ್ಲಾಹ್ ತಆಲಾ ಅವರಿಗಾಗಿ ವ್ಯವಸ್ಥೆ ಮಾಡಿಕೊಟ್ಟನು.

ಹಝ್ರತ್ ಮಿಯಾಂ ರಹ್ಮತುಲ್ಲಾಹ್ ಸಾಹಿಬ್ ರ.ಅ. ಅವರು ವಿವರಿಸುತ್ತಾರೆ: "ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ಆಗಾಗ್ಗೆ ಹೇಳುತ್ತಿದ್ದರು: 'ಕ್ಷಾಮ ಮತ್ತು ಸೋಂಕು ಒಂದೇ ಸಮಯದಲ್ಲಿ ಸಮೀಪಿಸುತ್ತಿವೆ. ಆದರೂ ಜನರು ತೌಬಾ ಮಾಡುವುದಿಲ್ಲ. ಅವರು ಹಸಿವಿನಿಂದ ಸಾಯುತ್ತಿದ್ದಾರೆ.' ಇದಾದ ಮೂರು ವರ್ಷಗಳ ನಂತರ ದೇಶದಲ್ಲಿ ಭೀಕರವಾದ ಪ್ಲೇಗ್ ಹರಡಿತು. ಕ್ಷಾಮದ ದಿನಗಳಲ್ಲಿ ಹುಝೂರ್ ಅ.ಸ. ಹೇಳುತ್ತಿದ್ದರು: 'ಹದೀಸ್‌ಗಳಲ್ಲಿ ಮಸೀಹ್ ಮೌಊದ್‌ನ ಕಾಲದಲ್ಲಿ ಕ್ಷಾಮ ಉಂಟಾಗುವುದರ ಉಲ್ಲೇಖವಿದೆ. ನಬಿಯ್ಯೇ ಕರೀಮ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರ ಉಪದೇಶ ಮತ್ತು ಅಲ್ಲಾಹ್ ತಆಲಾದ ವಾಗ್ದಾನವು ನೆರವೇರಿದೆ.' ಇನ್ನೊಂದೆಡೆ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರ.ಅ. ಅವರಿಗೆ ಆದೇಶಿಸಿದರು: 'ಸಾಧ್ಯವಾದಷ್ಟು ಧಾನ್ಯವನ್ನು ಸಂಗ್ರಹಿಸಬೇಕು.' ಆ ಸಮಯದಲ್ಲಿ ಲಂಗರ್‌ನ ವ್ಯವಸ್ಥೆ ಸ್ವತಃ ಹಝ್ರತ್ ಅ.ಸ. ಅವರ ಮೇಲ್ವಿಚಾರಣೆಯಲ್ಲಿತ್ತು. ಕ್ಷಾಮದ ಅಪಾಯವಿತ್ತು. ಆದ್ದರಿಂದ ನೀವು ಅ.ಸ. ಅವರು ಮುಂಚಿತವಾಗಿಯೇ ಧಾನ್ಯ ಮುಂತಾದವುಗಳ ವ್ಯವಸ್ಥೆ ಮಾಡುವಂತೆ ಹೇಳಿದರು ಮತ್ತು ಈ ಕೆಲಸವನ್ನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರ.ಅ. ಅವರಿಗೆ ವಹಿಸಿದರು. ಹುಝೂರ್ ಅ.ಸ. ಅವರ ಆದೇಶದ ಮೇರೆಗೆ ಹಝ್ರತ್ ಮೌಲ್ವಿ ಸಾಹಿಬ್ ರ.ಅ. ಅವರು ನನ್ನಿಂದ ಲಂಗರ್‌ಖಾನಾಗಾಗಿ ಮೂವತ್ತು ಚೀಲ ಗೋಧಿಯನ್ನು ಖರೀದಿಸಿದರು. ಚಂದಾದ ಕೊರತೆಯಿತ್ತು. ಮನೆಯಲ್ಲಿ ಇದ್ದಷ್ಟು ಆಭರಣವನ್ನೂ ಹುಝೂರ್ ಅ.ಸ. ಅವರು ಮಾರಾಟ ಮಾಡಿದರು. ಗೋಧಿ ಖರೀದಿಸಲು ಹಝ್ರತ್ ಮೌಲ್ವಿ ಸಾಹಿಬ್ ರ.ಅ. ಅವರಿಗೆ ಏಳು ನೂರು ರೂಪಾಯಿಗಳನ್ನು ನೀಡಿದರು. ಹಝ್ರತ್ ಮೌಲ್ವಿ ಸಾಹಿಬ್ ರ.ಅ. ಅವರು ಮಿಯಾಂ ನಜ್ಮುದ್ದೀನ್ ಸಾಹಿಬ್ ರ.ಅ. ಅವರನ್ನು ಗೋಧಿ ಖರೀದಿಸಲು ಗ್ರಾಮಕ್ಕೆ ಕಳುಹಿಸಿದರು. ಅವರೊಂದಿಗೆ ಮಿರ್ಝಾ ಇಸ್ಮಾಯೀಲ್ ಸಾಹಿಬ್ ಅವರೂ ಹೋದರು. ಧಾನ್ಯವನ್ನು ಖರೀದಿಸಲಾಯಿತು. ಬಿಕಾನೇರ್‌ನಿಂದ ಜನರು ತಮ್ಮ ಪ್ರದೇಶವನ್ನು ತೊರೆದು ನಮ್ಮ ದೇಶಕ್ಕೆ ಬರತೊಡಗಿದರು. ಅಲ್ಲಿ ಭೀಕರ ಕ್ಷಾಮ ಉಂಟಾಗಿತ್ತು. ಎಲ್ಲೆಡೆ 'ರೊಟ್ಟಿ! ರೊಟ್ಟಿ!' ಎಂಬ ಕೂಗು ಕೇಳಿಬರುತ್ತಿತ್ತು. ಹುಝೂರ್ ಅ.ಸ. ಅವರು ಆದೇಶಿಸಿದರು: 'ಲಂಗರ್‌ನಲ್ಲಿ ಯಾವಾಗಲೂ ಹಿಟ್ಟು ತಯಾರಾಗುತ್ತಿರಲಿ ಮತ್ತು ರೊಟ್ಟಿಗಳು ಸಿದ್ಧವಾಗಿರಲಿ.' ಮಿಯಾಂ ನಜ್ಮುದ್ದೀನ್ ಸಾಹಿಬ್ ಅವರಿಗೆ ಹೇಳಿದರು: 'ರೊಟ್ಟಿ ಕೇಳಲು ಬರುವ ಪ್ರತಿಯೊಬ್ಬರಿಗೂ ರೊಟ್ಟಿ ನೀಡಬೇಕು. ಯಾರೂ ಖಾಲಿಹಸ್ತರಾಗಿ ಹಿಂದಿರುಗಬಾರದು.' ಕೆಲವೇ ದಿನಗಳಲ್ಲಿ ಖರೀದಿಸಿದ್ದ ಧಾನ್ಯವೆಲ್ಲ ಮುಗಿದುಹೋಯಿತು. ಆಗ ಹುಝೂರ್ ಅ.ಸ. ಅವರು ಒಂದು ಭಾಷಣವನ್ನು ನೀಡಿದರು. ಅದರ ಅರ್ಥ ಹೀಗಿತ್ತು: 'ಇದು ತಾತ್ಕಾಲಿಕ ಸಂದರ್ಭವಾಗಿದೆ. ಯಾವಾಗಲೂ ಇಂತಹ ತ್ಯಾಗ ಮಾಡಬೇಕಾಗುವುದಿಲ್ಲ ಮತ್ತು ಇಂತಹ ಪ್ರತಿಫಲವೂ ಯಾವಾಗಲೂ ದೊರೆಯುವುದಿಲ್ಲ. ಇವು ಸತ್ಯವಿಶ್ವಾಸಿಗಳಿಗೆ ವಿಶೇಷ ದಿನಗಳಾಗಿವೆ. ಅಲ್ಲಾಹ್ ತಆಲಾದ ಸಂತೋಷವನ್ನು ಪಡೆಯುವ ಉದ್ದೇಶದಿಂದ ಅಲ್ಲಾಹ್ ತಆಲಾ ತನ್ನ ಸ್ನೇಹಿತರಿಗೆ ತೌಫೀಕ್ ನೀಡಲಿ.' ಈ ಭಾಷಣದ ಪರಿಣಾಮವಾಗಿ ಸ್ವಲ್ಪ ಹಣ ಸಂಗ್ರಹವಾಯಿತು. ಹೊರಗಿನಿಂದಲೂ ಹಣ ಬಂದಿತು. ಮತ್ತೆ ಧಾನ್ಯವನ್ನು ಖರೀದಿಸಲಾಯಿತು. ಹೀಗೆ ಕ್ಷಾಮದ ದಿನಗಳಲ್ಲಿ ಈ ವ್ಯವಸ್ಥೆ ಮುಂದುವರಿಯಿತು. ಕ್ಷಾಮದಿಂದ ಬಳಲಿದವರು ಬಂದಾಗ ಅವರಿಗೆ ತಕ್ಷಣ ಆಹಾರ ಒದಗಿಸಲಾಗುತ್ತಿತ್ತು. ಹುಝೂರ್ ಅ.ಸ. ಅವರು ಆಗಾಗ್ಗೆ ಹೀಗೆ ಹೇಳುತ್ತಿದ್ದರು: 'ನಾನು ಅಮುಕ ಪತ್ರಿಕೆಯಲ್ಲಿ ಓದಿದ್ದೇನೆ, ಒಂದು ದೇಶದಲ್ಲಿ ಇಷ್ಟು ಮಕ್ಕಳು ಹಸಿವಿನಿಂದ ಸತ್ತಿದ್ದಾರೆ ಮತ್ತು ಇಷ್ಟು ಜನರು ಸತ್ತಿದ್ದಾರೆ. ಧಾನ್ಯವೇ ದೊರೆಯುತ್ತಿಲ್ಲ. ಧಾನ್ಯ ದೊರೆಯದಿರುವುದು ಅಲ್ಲಾಹ್ ತಆಲಾದ ಕಠಿಣ ಗಝಬ್‌ನ ಲಕ್ಷಣವಾಗಿದೆ.' ಹುಝೂರ್ ಅ.ಸ. ಅವರು ಪದೇಪದೇ ಅಲ್ಲಾಹ್ ತಆಲಾ ಕರುಣೆ ತೋರಿಸಲಿ ಎಂದು ದುವಾ ಮಾಡುತ್ತಿದ್ದರು. ಮತ್ತು ಬಹಳ ವ್ಯಾಕುಲತೆಯಿಂದ ಮಿಯಾಂ ನಜ್ಮುದ್ದೀನ್ ಸಾಹಿಬ್ ಅವರಲ್ಲಿ ಹಾಗೂ ಹಝ್ರತ್ ಮೌಲ್ವಿ ಸಾಹಿಬ್ ರ.ಅ. ಅವರಲ್ಲಿ ಧಾನ್ಯದ ಕುರಿತು ವಿಚಾರಿಸುತ್ತಿದ್ದರು." (ರಿವಾಯಾತ್–ಎ–ಅಸ್ಹಾಬ್–ಎ–ಅಹ್ಮದ್, ಸಂಪುಟ 4, ಪುಟ 72–73)

ಇಂದಿಗೂ ಜಗತ್ತಿನ ಕೆಲವು ದೇಶಗಳಲ್ಲಿ ಇಂತಹ ಪರಿಸ್ಥಿತಿಗಳು ಕಂಡುಬರುತ್ತಿವೆ. ಅತ್ಯಂತ ಕಷ್ಟಕರವಾದ ಸ್ಥಿತಿ ಇದೆ. ಎಲ್ಲೋ ಕ್ಷಾಮವಿದೆ, ಧಾನ್ಯ ದೊರೆಯುವುದಿಲ್ಲ; ಅಥವಾ ಬೆಲೆಗಳು ಅಷ್ಟು ಹೆಚ್ಚಾಗಿವೆ, ಜನರಿಗೆ ಅದನ್ನು ಖರೀದಿಸಲು ಸಾಧ್ಯವಾಗುತ್ತಿಲ್ಲ. ಬಡತನ ಮತ್ತು ಹಸಿವಿನಿಂದ ಜನರು ಸಾವನ್ನಪ್ಪುತ್ತಿದ್ದಾರೆ. ಅಲ್ಲಾಹ್ ತಆಲಾದ ಫಝ್ಲ್‌ನಿಂದ ಎಲ್ಲೆಲ್ಲಿ ಇಂತಹ ಪರಿಸ್ಥಿತಿಯ ಮಾಹಿತಿ ದೊರೆಯುತ್ತದೆಯೋ, ಅಲ್ಲಿ ಜಮಾಅತ್ ಅವರ ಸಹಾಯಕ್ಕಾಗಿ ಹಣವನ್ನು ಕಳುಹಿಸುತ್ತದೆ ಮತ್ತು ಅಗತ್ಯಗಳನ್ನು ಪೂರೈಸಲು ಪ್ರಯತ್ನಿಸುತ್ತದೆ. ಜಮಾಅತ್‌ನ ಸದಸ್ಯರೂ ಇದರಲ್ಲಿ ತಮ್ಮ ಪಾಲನ್ನು ವಹಿಸುತ್ತಾರೆ. ಅಲ್ಲಾಹ್ ತಆಲಾ ಈ ಬಡವರು ಮತ್ತು ಕ್ಷಾಮಪೀಡಿತರ ಸಹಾಯಕ್ಕಾಗಿ ಇನ್ನಷ್ಟು ಸೇವೆ ಮಾಡುವ ತೌಫೀಕ್ ಅನ್ನು ಎಲ್ಲರಿಗೂ ನೀಡಲಿ. ಆಮೀನ್.

ಹಝ್ರತ್ ಖಾರ್ಯಿ ನೂರ್ ಮುಹಮ್ಮದ್ ಸಾಹಿಬ್ ರ.ಅ. ಅವರು ವಿವರಿಸುತ್ತಾರೆ: ಇದು ಹಝ್ರತ್ ಅಮೀರುಲ್ ಮೊಮಿನೀನ್, ಖಲೀಫತುಲ್ ಮಸೀಹ್ ಸಾನೀ ರ.ಅ. ಅವರ ಕಾಲದ ಘಟನೆ. ನನ್ನ ಸಹಪಾಠಿಗಳು ಇದ್ದರು. ಅವರೊಂದಿಗೆ ದಾರುಲ್ ಮಸೀಹ್‌ನಲ್ಲಿ ರಾತ್ರಿ ವೇಳೆ ಅಧ್ಯಯನ ಮಾಡುವ ಅವಕಾಶ ನನಗೆ ದೊರೆಯುತ್ತಿತ್ತು. ಹಝ್ರತ್ ಮೌಲ್ವಿ ಶೇರ್ ಅಲಿ ಸಾಹಿಬ್ ರ.ಅ. ಅವರು ನಮಗೆ ಪಾಠ ಮಾಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ಮಹಿಳೆಯರಿಗಾಗಿ ವಅಝ್ ಮಾಡುತ್ತಿದ್ದರು. ಆ ಸಮಯದಲ್ಲಿ ಅವರ ವಅಝ್‌ನ ಧ್ವನಿ ನಮ್ಮ ಕಿವಿಗಳಿಗೆ ಸ್ಪಷ್ಟವಾಗಿ ಕೇಳಿಬರುತ್ತಿತ್ತು. ಆದರೆ ದುರದೃಷ್ಟವಶಾತ್ ಅದರಲ್ಲಿ ಯಾವುದೂ ಈಗ ನನಗೆ ನೆನಪಿಲ್ಲ. ಲಂಗರ್‌ನ ಹಿಟ್ಟಿಗಾಗಿ ಸಾಮಾನ್ಯವಾಗಿ ಮುಲ್ಲಾ ಅಹ್ಮದ್ ನೂರ್ ಅವರು ಹೋಗುತ್ತಿದ್ದರು. ಕತ್ತೆಯ ಮೇಲೆ ಹಿಟ್ಟಿನ ಚೀಲಗಳು ಬಂದಾಗ, ಆ ಹಿಟ್ಟಿನ ಚೀಲವನ್ನು ಎತ್ತಿಕೊಂಡು ದಾರುಲ್ ಮಸೀಹ್‌ಗೆ ತಲುಪಿಸುವ ಅವಕಾಶವನ್ನೂ ಅಲ್ಲಾಹ್ ತಆಲಾ ನನಗೆ ನೀಡುತ್ತಿದ್ದನು. ಒಮ್ಮೆ ನಾನು ಹುಝೂರ್ ಅ.ಸ. ಅವರನ್ನು ನೋಡಿದೆ. ಅವರು ತಮ್ಮ ಕುರ್ತಾದ ಜೇಬಿನಲ್ಲಿ ಅನೇಕ ರೂಪಾಯಿಗಳನ್ನು ತಂದರು ಮತ್ತು ಅವುಗಳನ್ನು ಎಣಿಸದೆ ಮುಲ್ಲಾ ಅಹ್ಮದ್ ನೂರ್ ಅವರ ಜೇಬಿನಲ್ಲಿ ಹಾಕಿದರು. ಅಂದರೆ ಲಂಗರ್‌ಖಾನಾದ ವ್ಯವಸ್ಥೆ ನಡೆಯಲು ಬೇಕಾದ ವಸ್ತುಗಳನ್ನು ಖರೀದಿಸಿ ತರಲು ಹಣವನ್ನು ನೀಡಿದರು. (ರಿವಾಯಾತ್–ಎ–ಅಸ್ಹಾಬ್–ಎ–ಅಹ್ಮದ್, ಸಂಪುಟ 4, ಪುಟ 75)

ಹಝ್ರತ್ ಮಿಯಾಂ ಚಿರಾಗುದ್ದೀನ್ ಸಾಹಿಬ್ ರ.ಅ. ಅವರು ವಿವರಿಸುತ್ತಾರೆ: ಒಮ್ಮೆ ನನ್ನ ಗಂಟಲು ಅಷ್ಟು ಬಿಗಿದುಕೊಂಡಿತು, ಧ್ವನಿಯೇ ಹೊರಬರದಂತಾಯಿತು. ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ಹಝ್ರತ್ ಮೌಲ್ವಿ ನೂರುದ್ದೀನ್ ಸಾಹಿಬ್ ರ.ಅ. ಅವರಿಗೆ ಹೇಳಿದರು: "ಚಿರಾಗ್‌ನ ಗಂಟಲಿನ ಚಿಕಿತ್ಸೆ ಮಾಡಿ. ಅವನ ಧ್ವನಿ ಏಕೆ ಹೊರಬರುತ್ತಿಲ್ಲ?" ಹಝ್ರತ್ ಮೌಲ್ವಿ ಸಾಹಿಬ್ ರ.ಅ. ಅವರು ಚಿಕಿತ್ಸೆ ನೀಡುತ್ತಿದ್ದರು. ಆದರೆ ಯಾವುದೇ ಪ್ರಯೋಜನವಾಗಲಿಲ್ಲ. ನಂತರ ಒಂದು ಸಂದರ್ಭದಲ್ಲಿ ಡಾಕ್ಟರ್ ಮುಹಮ್ಮದ್ ಹುಸೈನ್ ಶಾಹ್ ಸಾಹಿಬ್, ಡಾಕ್ಟರ್ ಯಾಕೂಬ್ ಬೇಗ್ ಸಾಹಿಬ್ ಮತ್ತು ಡಾಕ್ಟರ್ ಬೌಡೆ ಖಾನ್ ಸಾಹಿಬ್ ಅವರು ಲಾಹೋರ್‌ನಲ್ಲಿ ಒಟ್ಟಿಗೆ ಬಂದಿದ್ದರು. ಅವರ ಮುಂದೆ ಕೂಡ ಹಜ್ರತ್ ಅ.ಸ. ಅವರು ಈ ವಿಷಯವನ್ನು ಪ್ರಸ್ತಾಪಿಸಿದರು: "ಈ ಹುಡುಗನ ಧ್ವನಿ ಏಕೆ ನಿಂತುಹೋಗಿದೆ?" ಡಾಕ್ಟರ್ ಯಾಕೂಬ್ ಬೇಗ್ ಸಾಹಿಬ್ ಅವರು ನನ್ನ ಗಂಟಲನ್ನು ಪರೀಕ್ಷಿಸಿ ಹೇಳಿದರು: "ಹುಝೂರ್ ಅನುಮತಿ ನೀಡಿದರೆ, ಇದರ ಗಂಟಲಿನ ಒಳಭಾಗವನ್ನು ಕತ್ತರಿಸಿ ತೆಗೆಯಬಹುದು. ಹೀಗೆ ಮಾಡಿದರೆ ಧ್ವನಿ ತೆರೆಯಬಹುದು." ಹುಝೂರ್ ಅ.ಸ. ಅವರು ಇದಕ್ಕೆ ಯಾವುದೇ ಉತ್ತರ ನೀಡದೆ ಮೌನವಾಗಿದ್ದರು. ಕೆಲವು ದಿನಗಳ ನಂತರ ಹುಝೂರ್ ಅ.ಸ. ಹೇಳಿದರು: "ಚಿರಾಗ್! ಈಗ ನಾವು ನಿನ್ನ ಚಿಕಿತ್ಸೆ ಮಾಡುತ್ತೇವೆ." ಅದೇ ಸಮಯದಲ್ಲಿ ನನ್ನನ್ನು ನೋಡಿ ಹೇಳಿದರು: "ನಿನಗಾಗಿ ಒಂದು ನುಸ್ಖಾ (ಔಷಧಾ ವಿಧಾನ) ತಯಾರಿಸುತ್ತೇವೆ." ಅಲ್ಲಾಹ್ ತಆಲಾದ ಯುಕ್ತಿ ನೋಡಿ! ಅದೇ ದಿನ ಅಮೃತಸರದ ಒಬ್ಬ ಅತ್ತಾರ್ ಆಕ್ ಎಲೆಗಳ ಉಪ್ಪಿನಕಾಯಿಯ ಒಂದು ಬರಣಿಯನ್ನು ತಂದನು. ಹುಝೂರ್ ಅ.ಸ. ಅವರು ಅದನ್ನು ತೆರೆದು ನೋಡಿ ಹೇಳಿದರು: "ಇದೇ ನಿನ್ನ ಚಿಕಿತ್ಸೆ." ಊಟದ ಸಮಯದಲ್ಲಿ ಫುಲ್ಕೆಯ (ರೊಟ್ಟಿಯ) ಮೇಲೆ ಎರಡು–ಮೂರು ಎಲೆಗಳನ್ನು ಇಟ್ಟು ನನಗೆ ಕೊಡುತ್ತಿದ್ದರು. ಅದು ಬಹಳ ರುಚಿಯಾಗಿತ್ತು. ಹುಝೂರ್ ಅ.ಸ. ಅವರೂ ಅದನ್ನು ಸೇವಿಸಿದರು. ನನಗೆ ಅದರಿಂದ ಆರಾಮವಾಯಿತು. ಆಗ ಹುಝೂರ್ ಅ.ಸ. ಅವರು ಆ ಸಂಪೂರ್ಣ ಬರಣಿಯನ್ನು ನನಗೆ ನೀಡಿ: "ನೀನೇ ಇದನ್ನು ತಿನ್ನು" ಎಂದು ಹೇಳಿದರು. ನಾನು ಅದನ್ನು ಸೇವಿಸಿದೆ ಮತ್ತು ಸಂಪೂರ್ಣ ಆರೋಗ್ಯ ಹೊಂದಿದೆ.

(ರಿವಾಯಾತ್–ಎ–ಅಸ್ಹಾಬ್–ಎ–ಅಹ್ಮದ್, ಸಂಪುಟ 2, ಪುಟ 72)

ಹಝ್ರತ್ ಮಿರ್ಝಾ ಅಫ಼ಝಲ್ ಬೇಗ್ ಸಾಹಿಬ್ ರ.ಅ. ಅವರು ವಿವರಿಸುತ್ತಾರೆ: ನಾನು ಮೊದಲ ಬಾರಿಗೆ 1898ರಲ್ಲಿ ಕಾದಿಯಾನ್‌ಗೆ ಬಂದೆ. ನನ್ನ ತಂದೆ ಮಿರ್ಝಾ ಫಝಲ್ ಬೇಗ್ ಸಾಹಿಬ್ ಅವರು ನನ್ನನ್ನು ಶಿಕ್ಷಣ ಪಡೆಯಲು ತಅಲೀಮುಲ್ ಇಸ್ಲಾಮ್ ಹೈಸ್ಕೂಲ್‌ಗೆ ಸೇರಿಸಿದರು. ಬೋರ್ಡಿಂಗ್‌ನಲ್ಲಿ ಆ ಸಮಯದಲ್ಲಿ ಕೆಲವು ವಿದ್ಯಾರ್ಥಿಗಳಿದ್ದರು. ಆ ಸಮಯದಲ್ಲಿ ಬೋರ್ಡಿಂಗ್‌ನ ವಿದ್ಯಾರ್ಥಿಗಳ ಊಟದ ವ್ಯವಸ್ಥೆ ಲಂಗರ್‌ಖಾನಾದೊಂದಿಗೆ ಸಂಪರ್ಕ ಹೊಂದಿತ್ತು. ಊಟದ ಕುರಿತು ಕೆಲವು ದೂರುಗಳು ಬಂದವು.

ನನ್ನ ತಂದೆಯವರು ಹಝ್ರತ್ ಅಕ್ದಸ್ ಮಸೀಹ್ ಮೌಊದ್ ಅ.ಸ. ಅವರೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಿದರು: "ಮಕ್ಕಳಿಗೆ ಊಟದ ತೊಂದರೆ ಇದೆ." ಅದಕ್ಕೆ ಹುಝೂರ್ ಅ.ಸ. ಅವರು ಅತ್ಯಂತ ಪ್ರೀತಿಯಿಂದ ಹೇಳಿದರು: "ಮಕ್ಕಳಿಗೆ ಮನೆಯಲ್ಲಿಂದಲೇ ಊಟ ದೊರೆಯಲಿ." ಅದರಂತೆ ಹಲವು ತಿಂಗಳುಗಳ ಕಾಲ ನಮ್ಮ ಊಟ ಹುಝೂರ್ ಅ.ಸ. ಅವರ ಸ್ವಂತ ಮನೆಯಿಂದ ಬರುತ್ತಿತ್ತು. ಕೆಲವೊಮ್ಮೆ ಹುಝೂರ್ ಅ.ಸ. ಅವರು ತಮ್ಮ ಮನೆಯಿಂದ ಮಾವು, ಮಿಠಾಯಿ ಮುಂತಾದವುಗಳನ್ನೂ ಮಕ್ಕಳಿಗಾಗಿ ಕಳುಹಿಸುತ್ತಿದ್ದರು. (ರಿವಾಯಾತ್-ಎ-ಅಸ್ಹಾಬ್-ಎ-ಅಹ್ಮದ್, ಸಂಪುಟ 4, ಪುಟ 167)

ಖ್ವಾಜಾ ಅಬ್ದುರ್ರಹ್ಮಾನ್ ಸಾಹಿಬ್ ಕಶ್ಮೀರಿ ಅವರು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರ.ಅ. ಅವರಿಗೆ ತಿಳಿಸಿದರು: "ಹಾಫಿಝ್ ಹಾಮಿದ್ ಅಲಿ ಸಾಹಿಬ್ ಮರಹೂಮ್ ಹೇಳುತ್ತಿದ್ದರು:

"ಹುಝೂರ್ ಅ.ಸ. ಅವರ ಬಳಿಗೆ ಎಲ್ಲಿಂದಲಾದರೂ ಹಣ ಬಂದಾಗ, ಅವರು ನನ್ನನ್ನು ಕರೆದು ಹಣವನ್ನು ಎಣಿಸದೆ ನನಗೆ ನೀಡುತ್ತಿದ್ದರು ಮತ್ತು ಹೇಳುತ್ತಿದ್ದರು: 'ಈಗ ಈ ಹಣವನ್ನು ತೆಗೆದುಕೊಂಡು ಹೋಗಿ. ಮತ್ತೆ ಯಾವಾಗ ಹಣ ಕೈಗೆ ಬರುತ್ತದೆ ಎಂಬುದು ಯಾರಿಗೆ ಗೊತ್ತು?'"

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರ.ಅ. ಅವರು ಬರೆಯುತ್ತಾರೆ: "ಹಾಫಿಝ್ ಹಾಮಿದ್ ಅಲಿ ಸಾಹಿಬ್ ಮರಹೂಮ್ ಹಝ್ರತ್ ಸಾಹಿಬ್ ಅ.ಸ. ಅವರ ವಿಶೇಷ ಸೇವಕರಾಗಿದ್ದರು. ಹಝ್ರತ್ ಸಾಹಿಬ್ ಅ.ಸ. ಅವರು ಮನೆಯ ಅಗತ್ಯಗಳು ಮತ್ತು ಅತಿಥಿಗಳ ಆತಿಥ್ಯ ಮುಂತಾದವುಗಳಿಗಾಗಿ ಅವರಿಗೆ ಹಣ ನೀಡುತ್ತಿದ್ದರು."
(ಸೀರತುಲ್ ಮಹ್ದೀ, ಸಂಪುಟ 1, ಭಾಗ 3, ಪುಟ 529-530, ರಿವಾಯತ್ 530)

ಹಝ್ರತ್ ಖಾನ್ ಸಾಹಿಬ್ ಸಯ್ಯಿದ್ ಗುಲಾಮ್ ಹುಸೈನ್ ಸಾಹಿಬ್ ರ.ಅ. ಅವರು ಹೇಳುತ್ತಾರೆ: ಒಮ್ಮೆ ಹುಝೂರ್ ಅ.ಸ. ಅವರು ನನ್ನನ್ನು ಖಾದಿಯಾನ್‌ನಿಂದ ಕಳುಹಿಸಿ: "ಬಟಾಲಾದಿಂದ ಒಂದು ಪಾರ್ಸಲ್ ರೈಲಿನಿಂದ ಬಂದಿದೆ ಅದನ್ನು ತೆಗೆದುಕೊಂಡು ಬಾ ಎಂದು ಹೇಳಿ ನನಗೆ ಐದು ರೂಪಾಯಿಗಳನ್ನೂ ನೀಡಿದರು." ಆ ಪಾರ್ಸೆಲ್ ದ್ರಾಕ್ಷಿಯ ಒಂದು ಬುಟ್ಟಿಯಾಗಿತ್ತು. ಅದರ ಮೇಲೆ ಕೇವಲ ನಾಲ್ಕು ಆಣೆ ಖರ್ಚಾಯಿತು. ನಾನು ಬುಟ್ಟಿಯನ್ನು ತಂದು ಹಝ್ರತ್ ಅ.ಸ. ಅವರ ಮುಂದೆ ಇಟ್ಟಾಗ, ಅವರು ಅದರ ಬಟ್ಟೆಯನ್ನು ಹರಿದು ಎರಡೂ ಕೈಗಳಿಂದ ದ್ರಾಕ್ಷಿಯನ್ನು ತೆಗೆದುಕೊಂಡು ಮೊದಲು ನನಗೆ ನೀಡಿದರು ಮತ್ತು: "ಇದು ನಿಮ್ಮ ಪಾಲು" ಎಂದು ಹೇಳಿದರು. ನಾನು ಉಳಿದ ನಾಲ್ಕು ಮುಕ್ಕಾಲು ರೂಪಾಯಿಗಳನ್ನು ಹಿಂದಿರುಗಿಸಲು ಪ್ರಯತ್ನಿಸಿದಾಗ, ಹುಝೂರ್ ಅ.ಸ. ಅವರು ಬುಟ್ಟಿಯನ್ನು ಎತ್ತಿಕೊಂಡು ಒಳಗೆ ಹೋಗುತ್ತಾ ಹೇಳಿದರು: "ನಾವು ನಮ್ಮ ಸ್ನೇಹಿತರೊಂದಿಗೆ ಲೆಕ್ಕ ಇಡುವುದಿಲ್ಲ." ಆ ಸಮಯದಲ್ಲಿ ನನಗೆ ಸುಮಾರು ಹದಿನೈದು ವರ್ಷ ವಯಸ್ಸಾಗಿತ್ತು. (ರಿವಾಯಾತ್-ಎ-ಅಸ್ಹಾಬ್-ಎ-ಅಹ್ಮದ್, ಸಂಪುಟ 5, ಪುಟ 120)

ಹಝ್ರತ್ ಮುಂಶಿ ಕಾಜಿ ಮಹಬೂಬ್ ಆಲಂ ಸಾಹಿಬ್ ರ.ಅ. ಅವರು ಹೇಳುತ್ತಾರೆ: ಮೌಲ್ವಿ ಮುಹಮ್ಮದ್ ಅಲಿ ಸಾಹಿಬ್ ಮತ್ತು ಖ್ವಾಜಾ ಕಮಾಲುದ್ದೀನ್ ಸಾಹಿಬ್ ಅವರು ಪೇಶಾವರ್‌ನಲ್ಲಿ ಒಟ್ಟಿಗೆ ವಕಾಲತ್ತು ಮಾಡುತ್ತಿದ್ದರು. ಇಬ್ಬರೂ ಪಾಲುದಾರರಾಗಿದ್ದರು. ಮೌಲ್ವಿ ಮುಹಮ್ಮದ್ ಅಲಿ ಸಾಹಿಬ್ ಖಾದಿಯಾನ್‌ಗೆ ಬಂದರು ಮತ್ತು ಖ್ವಾಜಾ ಸಾಹಿಬ್ ಪೇಶಾವರ್‌ನಲ್ಲಿಯೇ ಉಳಿದರು. ಹುಝೂರ್ ಅ.ಸ. ಅವರ ಮೇಲೆ ಇದ್ದ ಕೆಲವು ಮೊಕದ್ದಮೆಗಳ, ಬಹುಶಃ ಕರಮುದ್ದೀನ್‌ನ ಮೊಕದ್ದಮೆಗಳ, ಪರವಾಗಿ ಹಾಜರಾಗಲು ಖ್ವಾಜಾ ಸಾಹಿಬ್ ಪೇಶಾವರ್‌ನಿಂದ ಬಂದರು.

ಹಝ್ರತ್ ಅಕ್ದಸ್ ಅ.ಸ. ಅವರು ಮಸ್ಜಿದ್ ಮುಬಾರಕ್‌ಗೆ ಬಂದರು. ಖ್ವಾಜಾ ಸಾಹಿಬ್ ಬಹಳ ದುಃಖಭರಿತ ಮುಖದಿಂದ ಅರ್ಜಿ ಸಲ್ಲಿಸಿದರು: "ಹುಝೂರ್! ಇಲ್ಲಿ ತಲುಪಲು ನಾನು ಯಾವ ಪರಿಸ್ಥಿತಿಗಳ ಮೂಲಕ ಬಂದಿದ್ದೇನೆ ಎಂಬುದನ್ನು ಅಲ್ಲಾಹ್ ಮತ್ತು ರಸೂಲ್ ಮಾತ್ರ ಬಲ್ಲರು. ನನ್ನ ಹೆಂಡತಿಯ ಆಭರಣವನ್ನು ಗಿರವಿಟ್ಟು ಪ್ರಯಾಣದ ಖರ್ಚಿಗೆ ಹಣ ಪಡೆದು ಇಲ್ಲಿಗೆ ಬಂದಿದ್ದೇನೆ. ನನ್ನ ಆರ್ಥಿಕ ಪರಿಸ್ಥಿತಿ ಬಹಳ ಕಷ್ಟಕರವಾಗಿದೆ." ಹಝ್ರತ್ ಸಾಹಿಬ್ ಅ.ಸ. ಅವರು ಹೇಳಿದರು: "ಖ್ವಾಜಾ ಸಾಹಿಬ್! ನಿಮಗೆ ಹಣದ ಅಗತ್ಯವಿದೆಯೇ?" ನಂತರ ಒಳಗೆ ಹೋದರು. ಖ್ವಾಜಾ ಸಾಹಿಬ್ ಅವರೂ ಜೊತೆಯಲ್ಲಿ ಹೋದರು. ಹುಝೂರ್ ಅ.ಸ. ಅವರು ಒಂದು ಟ್ರಂಕ್ ತೆರೆದು, ಕೈಯಿಂದ ಎರಡು-ಮೂರು ಮುಷ್ಟಿ ನಾಣ್ಯಗಳನ್ನು ತೆಗೆದು ಖ್ವಾಜಾ ಸಾಹಿಬ್ ಅವರ ಜೋಳಿಗೆಗೆ ಹಾಕಿ ಹೇಳಿದರು: "ಖ್ವಾಜಾ ಸಾಹಿಬ್! ಇಷ್ಟೇ ಸಾಕೇ? ಇನ್ನೂ ಬೇಕೇ?" ಖ್ವಾಜಾ ಸಾಹಿಬ್ ಹೇಳಿದರು: "ಹುಝೂರ್! ಈಗ ಸಾಕಷ್ಟಾಗಿದೆ." ನಂತರ ಖ್ವಾಜಾ ಸಾಹಿಬ್ ಆ ಹಣವನ್ನು ಮಸ್ಜಿದ್ ಮುಬಾರಕ್‌ನಲ್ಲಿ ಎಣಿಸಿದಾಗ ಸುಮಾರು ಮೂರು ನೂರು ರೂಪಾಯಿಗಳಾಗಿದ್ದವು. ಖ್ವಾಜಾ ಸಾಹಿಬ್ ಮರುದಿನ ಗುರ್ದಾಸ್ಪುರಕ್ಕೆ ತೆರಳಿದರು. ಹುಝೂರ್ ಅ.ಸ. ಅವರು ಆ ಹಣವನ್ನು ಸಹ ಎಣಿಸದೆ ಅವರ ಜೋಳಿಗೆಗೆ ಹಾಕಿದರು.

ಹುಝೂರ್ ಅ.ಸ. ಅವರ ಸಾಮಾನ್ಯ ಅಭ್ಯಾಸವೇನೆಂದರೆ, ಅವರು ಸೇವಕರಿಗೆ ಹಣವನ್ನು ಎಣಿಸಿ ನೀಡುತ್ತಿರಲಿಲ್ಲ. ಅವರಿಗೆ ಸಂಪೂರ್ಣ ವಿಶ್ವಾಸ ಮತ್ತು ನಂಬಿಕೆ ಇತ್ತು. ನಾನು ಅಲ್ಲಿ ಇದ್ದ ಅವಧಿಯಲ್ಲಿ ಎಂದಿಗೂ ಹುಝೂರ್ ಅ.ಸ. ಅವರು ಯಾವುದೇ ಸೇವಕರಿಂದ ಲೆಕ್ಕ ಕೇಳುವುದನ್ನು ನೋಡಲಿಲ್ಲ. ಯಾರಾದರೂ ಕೇಳಿದಾಗ, ಹುಝೂರ್ ಅ.ಸ. ಅವರು ಅವರಿಗೆ ನೀಡುತ್ತಿದ್ದರು.
(ರಿವಾಯಾತ್-ಎ-ಅಸ್ಹಾಬ್-ಎ-ಅಹ್ಮದ್, ಸಂಪುಟ 4, ಪುಟ 277)

ಹಝ್ರತ್ ಶೇಖ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್ ರ.ಅ. ಅವರು ಖ್ವಾಜಾ ಸಾಹಿಬ್ ಮೇಲೆ ಹುಝೂರ್ ಅ.ಸ. ಅವರ ಕರುಣೆಯನ್ನು ಉಲ್ಲೇಖಿಸುತ್ತಾ ಬರೆಯುತ್ತಾರೆ: "ಖ್ವಾಜಾ ಕಮಾಲುದ್ದೀನ್ ಸಾಹಿಬ್ ಅವರು ಇಂದು ಜಮಾಅತ್ತಿನಿಂದ ಪ್ರತ್ಯೇಕಗೊಂಡಿದ್ದಾರೆ ಮತ್ತು ತಮ್ಮ ಮೇಲೆ ಉಪಕಾರ ಮಾಡಿದ ತಂದೆಯ ಸಂತತಿಯೊಂದಿಗೆ ವೈರ ಮತ್ತು ದ್ವೇಷ ಹೊಂದಿದ್ದಾರೆ. ಆದರೆ ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಅನುಗ್ರಹ, ಕರುಣೆ, ಔದಾರ್ಯ ಮತ್ತು ದಾನಶೀಲತೆಯ ಅತ್ಯಂತ ದೊಡ್ಡ ಅನುಭವ ಹೊಂದಿದವರಾಗಿದ್ದಾರೆ. ಅವರು ಅನೇಕ ದೊಡ್ಡ ಮೊತ್ತದ ಹಣವನ್ನು ಪಡೆದರು. ಆದರೂ ಪಡೆದದ್ದನ್ನು ಎಂದಿಗೂ ಒಪ್ಪಿಕೊಳ್ಳಲಿಲ್ಲ ಮತ್ತು ತಮ್ಮ ಸೇವೆಗಳ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಗುರ್ದಾಸ್ಪುರದಲ್ಲಿ ಮೌಲ್ವಿ ಕರಮುದ್ದೀನ್ ಅವರ ಮೊಕದ್ದಮೆಗಳು ನಡೆಯುತ್ತಿದ್ದ ದಿನಗಳಲ್ಲಿ ಒಮ್ಮೆ ಅವರು ತಮ್ಮ ಪೇಶಾವರ್‌ನ ಮನೆಯಿಂದ ಬಂದ ಪತ್ರವನ್ನು ಹುಝೂರ್ ಅ.ಸ. ಅವರಿಗೆ ತೋರಿಸಿದರು. ಅದರಲ್ಲಿ ಮನೆಯ ಖರ್ಚಿನ ತೊಂದರೆಯನ್ನು ಉಲ್ಲೇಖಿಸಲಾಗಿತ್ತು. ಹುಝೂರ್ ಅ.ಸ. ಅವರು ತಕ್ಷಣ ಐದು ನೂರು ರೂಪಾಯಿಗಳನ್ನು ನಗದು ನೀಡಿದರು. ನಂತರ ತಿಂಗಳಿಗೆ ನೂರು ರೂಪಾಯಿಗಳಂತೆ ನೀಡುತ್ತಿದ್ದರು. ವಿಶೇಷವಾಗಿ ಹುಝೂರ್ ಅ.ಸ. ಅವರ ಪ್ರೇರಣೆಯಿಂದ ಅಹ್ಮದಿಗಳು ಮೊಕದ್ದಮೆಯ ಖರ್ಚಿಗಾಗಿ ಬಹಳ ದೊಡ್ಡ ಮೊತ್ತವನ್ನು ಕಳುಹಿಸಿದ್ದರು. ಆ ಹಣವೂ ಖ್ವಾಜಾ ಸಾಹಿಬ್ ಅವರ ಬಳಿಯೇ ಇತ್ತು. ಹಝ್ರತ್ ಸಾಹಿಬ್ ಅ.ಸ. ಅವರು ಎಂದಿಗೂ ಲೆಕ್ಕ ಕೇಳಲಿಲ್ಲ. ಇಂತಹ ಹಣಕಾಸಿನ ಸಹಾಯ ಮತ್ತು ದಾನಶೀಲತೆಯ ಹೊರತಾಗಿ, ಹಝ್ರತ್ ಸಾಹಿಬ್ಜಾದಾ ಅಬ್ದುಲ್ ಲತೀಫ್ ಶಹೀದ್ ರ.ಅ. ಅವರು ಹಝ್ರತ್ ಮಸೀಹ್ ಮೌಊದ್ ಅ.ಸ. ಅವರಿಗಾಗಿ ಅಫ್ಘಾನಿ ಶೈಲಿಯ ಒಂದು ಅತ್ಯಂತ ಬೆಲೆಬಾಳುವ ಕೋಟನ್ನು ತಂದಿದ್ದರು. ಖ್ವಾಜಾ ಸಾಹಿಬ್ ಅದನ್ನು ಕೇಳಿ: 'ಹುಝೂರ್! ಈ ಕೋಟನ್ನು ನನಗೆ ಅನುಗ್ರಹಿಸಿಬಿಡಿ. ನಾನು ಇದನ್ನು ಧರಿಸಿ ನ್ಯಾಯಾಲಯಕ್ಕೆ ಪ್ರವೇಶಿಸಿದರೆ ಇದರ ಬರಕತ್‌ನಿಂದ ಎದುರಾಳಿ ವಕೀಲರ ಮೇಲೆ ಮತ್ತು ನ್ಯಾಯಾಲಯದಲ್ಲಿ ನನ್ನ ಪ್ರಭಾವ ಬೀಳುತ್ತದೆ' ಎಂದು ವಿನಂತಿಸಿದರು. ಹುಝೂರ್ ಅ.ಸ. ಅವರು ನಗುತ್ತಾ ಆ ಬೆಲೆಬಾಳುವ ಕಮ್ದಾರ್ ಚೋಗಾವನ್ನು ಖ್ವಾಜಾ ಸಾಹಿಬ್ ಅವರಿಗೆ ನೀಡಿದರು."
(ಸೀರತ್ ಮಸೀಹ್ ಮೌಊದ್ ಅ.ಸ., ಹಜ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ರ.ಅ. ಇರ್ಫಾನಿ, ಭಾಗ 3, ಪುಟ 311-312)

ಹಿಂದಿನ ಖುತ್ಬಾದಲ್ಲಿಯೂ ಉಲ್ಲೇಖವಾಗಿತ್ತು, ಒಂದು ಉತ್ತಮ ಗುಣಮಟ್ಟದ ಚರ್ಮದಿಂದ ತಯಾರಿಸಲಾದ ಪೋಸ್ತೀನ್ ಕೋಟನ್ನು ಹುಝೂರ್ ಅ.ಸ. ಅವರಿಗಾಗಿ ತರಲಾಗಿತ್ತು. ಇಂದಿಗೂ ಲೆದರ್‌ನ ಉಡುಪುಗಳು ಬಹಳ ಬೆಲೆಬಾಳುವವು ಎಂದು ಪರಿಗಣಿಸಲಾಗುತ್ತದೆ. ಆ ಕಾಲದಲ್ಲಿಯೂ ಅವು ಬೆಲೆಬಾಳುವವಾಗಿದ್ದವು. ಖ್ವಾಜಾ ಸಾಹಿಬ್ ಕೇಳಿದಾಗ ಆ ಕೋಟನ್ನೂ ಹುಝೂರ್ ಅ.ಸ. ಅವರು ಅವರಿಗೆ ನೀಡಿದರು.

ಹಝ್ರತ್ ಶೇಖ್ ಹಾಮಿದ್ ಅಲಿ ಸಾಹಿಬ್ ರ.ಅ. ಅವರು ಹೇಳುತ್ತಾರೆ:

ನನ್ನಿಂದ ಜೀವನದ ಕೊನೆಯವರೆಗೂ ಎಂದಿಗೂ ಲೆಕ್ಕ ಕೇಳಲಿಲ್ಲ ಮತ್ತು ಎಂದಿಗೂ ನನ್ನ ಮೇಲೆ ಅಸಮಾಧಾನಗೊಂಡಿಲ್ಲ.

ಒಮ್ಮೆ ನಾನು ಲಾಹೋರ್‌ಗೆ ಹೋದೆ. ಹಝ್ರತ್ ಮೌಲ್ವಿ ನೂರುದ್ದೀನ್ ಸಾಹಿಬ್ ರ.ಅ. ಅವರು ಏಳು ನೂರು ರೂಪಾಯಿಗಳ ಹುಂಡಿಯನ್ನು ಕಳುಹಿಸಿದ್ದರು. ಅದನ್ನು ತೆಗೆದುಕೊಂಡು ಹೋದೆ. ಕೆಲವು ಸಾಮಗ್ರಿಗಳನ್ನು ಖರೀದಿಸಿ ತಂದೆ. ಸುಮಾರು ಐವತ್ತು ರೂಪಾಯಿಗಳು ಉಳಿದವು. ಅದರ ಲೆಕ್ಕವನ್ನು ನಾನು ಹಝ್ರತ್ ಸಾಹಿಬ್ ಅ.ಸ. ಅವರಿಗೆ ನೀಡಿದೆ. ಆಗ ನೀವು ಅ.ಸ. ಹೇಳಿದರು: 'ನಾನು ಯಾವಾಗ ಲೆಕ್ಕ ಕೇಳಿದ್ದೇನೆ?'"

(ಸೀರತ್ ಅಹ್ಮದ್, ಕುದ್ರತುಲ್ಲಾಹ್ ಸನೌರಿ ಸಾಹಿಬ್, ಪುಟ 59)

ಹಝ್ರತ್ ಶೇಖ್ ಅಹ್ಮದುದ್ದೀನ್ ಸಾಹಿಬ್ ರ.ಅ. ಅವರು ಹೇಳುತ್ತಾರೆ: ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ನನಗೆ ಆದೇಶಿಸಿ:

"ನೀವು ಅಮೃತಸರಕ್ಕೆ ಹೋಗಿ ಮಿಯಾಂ ನಬೀ ಬಖ್ಷ್ ರಫೂಗರ್ ಅವರ ಬಳಿಗೆ ಈ ಪತ್ರವನ್ನು ಕೊಡಿ. ಅವರು ಖರೀದಿಸಿ ಕೊಡುವ ವಸ್ತುಗಳನ್ನು ತಕ್ಷಣ ತೆಗೆದುಕೊಂಡು ಬನ್ನಿ ಮತ್ತು ನಾಳೆಯೊಳಗೆ ಹಿಂದಿರುಗಿ ಬನ್ನಿ." ಎಂದು ಉಪದೇಶಿಸಿದರು. ಮರುದಿನ ನಾನು ಸ್ವಲ್ಪ ತಡವಾಗಿ ತಲುಪಿದೆ. ಹುಝೂರ್ ಅ.ಸ. ಅವರ ಒಬ್ಬ ಸೇವಕ ಮಿಯಾಂ ಕರಮ್ದಾದ್ ಸಾಹಿಬ್ ಇದ್ದರು.

ಅವರಿಗೆ ಹುಝೂರ್ ಅ.ಸ. ಹೇಳಿದರು: "ಬೇಗ ಹೋಗಿ. ಅಹ್ಮದ್ ದೀನ್‌ನ್ನು ಅಮೃತಸರಕ್ಕೆ ಕಳುಹಿಸಿದ್ದೆವು. ಇನ್ನೂ ಹಿಂದಿರುಗಿಲ್ಲ. ಎಲ್ಲವೂ ಸರಿಯಾಗಿದೆಯೇ ಎಂದು ವಿಚಾರಿಸಿ." ದಾರಿಯಲ್ಲಿ ಮಿಯಾಂ ಕರಮ್ದಾದ್ ಸಾಹಿಬ್ ನನಗೆ ಸಿಕ್ಕಿದರು. ಅವರು ಹೇಳಿದರು: "ಹಝ್ರತ್ ಸಾಹಿಬ್ ಅ.ಸ. ಅವರು ನಿನ್ನ ಬಗ್ಗೆ ಬಹಳ ಚಿಂತಿತರಾಗಿದ್ದಾರೆ." ನಾನು ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಸನ್ನಿಧಿಯಲ್ಲಿ ಹಾಜರಾದಾಗ, ಅವರು ಮೊದಲು ನನ್ನನ್ನು ಕೇಳಿದರು: "ನಿಮಗೆ ಯಾವುದೇ ತೊಂದರೆ ಆಗಲಿಲ್ಲವೇ?" ಅದಕ್ಕೆ ನಾನು ಹೇಳಿದೆ: "ಹುಝೂರ್! ಯಾವುದೇ ತೊಂದರೆ ಆಗಲಿಲ್ಲ." ನನ್ನ ಪರಿಸ್ಥಿತಿಯನ್ನು ಈ ರೀತಿಯಾಗಿ ವಿಚಾರಿಸಿದುದರಿಂದ ನನ್ನ ಹೃದಯ ಸಂತೋಷದಿಂದ ತುಂಬಿಹೋಯಿತು, ನನ್ನ ಸ್ಥಿತಿಯನ್ನು ಹುಝೂರ್ ಅ.ಸ. ಅವರು ವಿಚಾರಿಸಿದ್ದಾರೆ ಎಂಬುದೇ ನನಗೆ ಬಹಳ ಸಂತೋಷದ ವಿಷಯವಾಗಿತ್ತು. ನಾನು ಒಂದು ಲೆಕ್ಕದ ಕಾಗದ ಮತ್ತು ಉಳಿದಿದ್ದ ಕೆಲವು ಹಣವನ್ನು ಹಿಂದಿರುಗಿಸಲು ಪ್ರಯತ್ನಿಸಿದೆ. ಹುಝೂರ್ ಅ.ಸ. ಹೇಳಿದರು: "ಈ ಕಾಗದ ಏನು?" ನಾನು ವಿನಯಪೂರಕವಾಗಿ ಹೇಳಿದೆ: "ಈ ವಸ್ತುಗಳ ಲೆಕ್ಕವಾಗಿದೆ ಮತ್ತು ಇವು ಉಳಿದಿರುವ ಹಣ." ಹುಝೂರ್ ಅ.ಸ. ಅವರು ಬಹಳ ಪ್ರೀತಿಯಿಂದ ಹೇಳಿದರು: "ನಮ್ಮ ಮತ್ತು ನಿಮ್ಮ ನಡುವೆ ಯಾವ ಲೆಕ್ಕವಿದೆ? ಈ ಹಣವನ್ನು ನಿಮ್ಮ ಅಗತ್ಯಕ್ಕೆ ಖರ್ಚು ಮಾಡಿಕೊಳ್ಳಿ." ನನಗೆ ಬಹಳ ಸಂತೋಷವಾಯಿತು. (ರಿವಾಯಾತ್–ಎ–ಅಸ್ಹಾಬ್–ಎ–ಅಹ್ಮದ್, ಸಂಪುಟ 4, ಪುಟ 95–96)

ಹಝ್ರತ್ ಶೇಖ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್ ರ.ಅ. ಅವರು ಬರೆಯುತ್ತಾರೆ:

"ಹಝ್ರತ್ ಹಕೀಮುಲ್ ಉಮ್ಮತ್ ಮೌಲ್ವಿ ನೂರುದ್ದೀನ್ ರ.ಅ. ಅವರು ಒಮ್ಮೆ ಹುಝೂರ್ ಅ.ಸ. ಅವರಿಂದ ಸ್ವಲ್ಪ ಸಾಲವನ್ನು ಪಡೆದರು. ಅವರು ಆ ಹಣವನ್ನು ಹುಝೂರ್ ಅ.ಸ. ಅವರ ಸೇವೆಗೆ ಹಿಂದಿರುಗಿಸಿದಾಗ, ಹುಝೂರ್ ಅ.ಸ. ಅವರು ಅದನ್ನು ಇಷ್ಟಪಡದೆ ಹಿಂದಿರುಗಿಸಿ ಹೇಳಿದರು: 'ನೀವು ನಮ್ಮ ಹಣವನ್ನು ನಿಮ್ಮ ಹಣಕ್ಕಿಂತ ಬೇರೆ ಎಂದು ಏಕೆ ಭಾವಿಸುತ್ತೀರಿ?'"

(ಸೀರತ್ ಮಸೀಹ್ ಮೌಊದ್ ಅ.ಸ., ಹಜ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ರ.ಅ. ಇರ್ಫಾನಿ, ಭಾಗ 3, ಪುಟ 307)

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ ರ.ಅ. ಅವರು ಮತ್ತಷ್ಟು ಬರೆಯುತ್ತಾರೆ:

"ಹಝ್ರತ್ ಅಕ್ದಸ್ ಅ.ಸ. ಅವರು ತಮ್ಮ ಬಅಸತ್‌ನ ಘೋಷಣೆ ಮಾಡಿದ ನಂತರ ಮತ್ತು ಅಲ್ಲಾಹ್ ತಆಲಾ ಅವರಿಗೆ 'ರಾಜರು ನಿನ್ನ ವಸ್ತ್ರಗಳಿಂದ ಬರಕತ್ ಹುಡುಕುವರು' ಎಂಬ ಶುಭವಾರ್ತೆ ನೀಡಿದ್ದಾನೆ ಎಂಬುದು ಜನರಿಗೆ ತಿಳಿದ ನಂತರ, ಸಾಮಾನ್ಯವಾಗಿ ಜನರು ಹುಝೂರ್ ಅ.ಸ. ಅವರಿಂದ ಬಟ್ಟೆಗಳನ್ನು ಕೇಳುತ್ತಿದ್ದರು. ಹುಝೂರ್ ಅ.ಸ. ಅವರು ಯಾರಿಗೂ ನಿರಾಕರಿಸುತ್ತಿರಲಿಲ್ಲ. ಕೆಲವೊಮ್ಮೆ ಪರಿಸ್ಥಿತಿ ಹೀಗಾಗುತ್ತಿತ್ತು, ಅವರ ದೇಹದ ಮೇಲೆ ಇದ್ದ ಬಟ್ಟೆಗಳಷ್ಟೇ ಉಳಿದು, ಉಳಿದ ಎಲ್ಲವನ್ನೂ ಜನರಿಗೆ ನೀಡಲಾಗುತ್ತಿತ್ತು." (ಸೀರತ್ ಮಸೀಹ್ ಮೌಊದ್ ಅ.ಸ., ಭಾಗ 2, ಪುಟ 290)

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ ರ.ಅ. ಅವರು ಬರೆಯುತ್ತಾರೆ:

"ಹಝ್ರತ್ ಅ.ಸ. ಅವರು ಮೀರ್ ಅಬ್ಬಾಸ್ ಅಲಿ ಸಾಹಿಬ್ ಅವರಿಗೆ ಬರಾಹೀನ್–ಎ–ಅಹ್ಮದಿಯ್ಯಾ ಪುಸ್ತಕದ ಬೆಲೆಯಾಗಿ ಅವರ ಬಳಿಗೆ ಬಂದ ಹಣವನ್ನು ಖರ್ಚು ಮಾಡಿಕೊಳ್ಳಲು ಅನುಮತಿ ನೀಡಿದರು. ಇದು ಅವರ ವಿಶಾಲ ಹೃದಯ ಮತ್ತು ಔದಾರ್ಯದ ಒಂದು ಸಾಮಾನ್ಯ ಸಾಕ್ಷಿಯಾಗಿದೆ."

(ಹಯಾತ್–ಎ–ಅಹ್ಮದ್, ಯಾಕೂಬ್ ಅಲಿ ಇರ್ಫಾನಿ ಸಾಹಿಬ್, ಸಂಪುಟ 2, ಭಾಗ 2, ಪುಟ 200)

ಹಝ್ರತ್ ಮುಂಶಿ ಜಫರ್ ಅಹ್ಮದ್ ಸಾಹಿಬ್ ರ.ಅ. ಅವರು ಹೇಳುತ್ತಾರೆ:

"ಮಿರ್ಝಾ ನಿಜಾಮುದ್ದೀನ್ ಸಾಹಿಬ್ ಮತ್ತು ಮಿರ್ಜಾ ಇಮಾಮುದ್ದೀನ್ ಸಾಹಿಬ್ ಅವರು ಹಜ್ರತ್ ಅ.ಸ. ಅವರ ಕಠಿಣ ವಿರೋಧಿಗಳಾಗಿದ್ದರು. ಆದರೂ ಅಗತ್ಯದ ಸಮಯದಲ್ಲಿ ಅವರು ಯಾವಾಗಲಾದರೂ ಸಹಾಯ ಕೇಳಿದರೆ, ಹಜ್ರತ್ ಅ.ಸ. ಅವರು ಅವರ ಅಗತ್ಯವನ್ನು ಪೂರೈಸುತ್ತಿದ್ದರು.

ಒಮ್ಮೆ ನನ್ನ ಸಮ್ಮುಖದಲ್ಲಿ ಮಿರ್ಝಾ ನಿಝಾಮುದ್ದೀನ್ ಸಾಹಿಬ್ ಅವರು ಹಜ್ರತ್ ಅ.ಸ. ಅವರಿಂದ ಐವತ್ತು ರೂಪಾಯಿ ಅಥವಾ ಅದರ ಸುತ್ತಮುತ್ತ ಹಣ ಕೇಳಿದರು. ಹಜ್ರತ್ ಅ.ಸ. ಅವರು ತಕ್ಷಣ ಹಾಫಿಜ್ ಹಾಮಿದ್ ಅಲಿ ಸಾಹಿಬ್ ಅವರ ಕೈಯಿಂದ ಆ ಹಣವನ್ನು ಕಳುಹಿಸಿದರು."

(ಅಸ್ಹಾಬ್–ಎ–ಅಹ್ಮದ್, ಸಂಪುಟ 4, ಪುಟ 215–216)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರ.ಅ. ಅವರು ಬರೆಯುತ್ತಾರೆ:

ಡಾಕ್ಟರ್ ಮಿರ್ ಮುಹಮ್ಮದ್ ಇಸ್ಮಾಯೀಲ್ ಸಾಹಿಬ್ ರ.ಅ. ಅವರು ನನಗೆ ತಿಳಿಸಿದರು: ಅಬ್ದುಲ್ ಮುಹೀ ಸಾಹಿಬ್ ಅರಬ್ ಅವರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರ.ಅ. ಅವರ ಕಾಲದಲ್ಲಿಯೇ ಒಂದು ದಿನ ನನ್ನೊಂದಿಗೆ ಹೀಗೆ ಹೇಳಿದರು: "ಹಝ್ರತ್ ಸಾಹಿಬ್ ಅ.ಸ. ಅವರ ದಾನಶೀಲತೆಗೆ ಏನು ಹೇಳುವುದು! ಅವರ ಕಾಲದಲ್ಲಿ ನನಗೆ ಎಂದಿಗೂ ಯಾವುದೇ ತೊಂದರೆ ಉಂಟಾಗಲಿಲ್ಲ. ಯಾವ ಅಗತ್ಯವಿದ್ದರೂ ಯಾವುದೇ ಸಂಕೋಚವಿಲ್ಲದೆ ಕೇಳುತ್ತಿದ್ದೆ. ಹುಝೂರ್ ಅ.ಸ. ಅವರು ನನ್ನ ಅಗತ್ಯಕ್ಕಿಂತಲೂ ಹೆಚ್ಚಾಗಿ ನೀಡುತ್ತಿದ್ದರು ಮತ್ತು ಸ್ವತಃ ಕೂಡ ನನಗೆ ನೀಡುತ್ತಿದ್ದರು."

ಹುಝೂರ್ ಅ.ಸ. ಅವರ ವಿಸಾಲ್ ಆದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರ.ಅ. ಅವರು ಬಹಳ ಸಖೀ ಎಂದು ಪ್ರಸಿದ್ಧರಾಗಿದ್ದರೂ, ನನ್ನ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಕೊನೆಗೆ ನಾನು ಸಂಕಷ್ಟಕ್ಕೊಳಗಾಗಿ ಅವರಿಗೆ ಬರೆದೆ:

"ನೀವು ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಖಲೀಫರಾಗಿದ್ದೀರಿ; ಆದರೆ ನನ್ನ ಅಗತ್ಯಗಳನ್ನು ಪೂರೈಸುವ ವಿಷಯದಲ್ಲಿ ಅವರ ಖಿಲಾಫತ್ ಮಾಡಲಿಲ್ಲ." ಅವರು ಹುಝೂರ್ ಅ.ಸ. ಅವರು ನನ್ನೊಂದಿಗೆ ಮಾಡುತ್ತಿದ್ದ ಸತ್ಕಾರವನ್ನು ವಿವರಿಸಿದರು. ತದನಂತರ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರ.ಅ. ಅವರು ನನ್ನ ಸಹಾಯ ಮಾಡಿದರು. ಆದರೆ ಅವರು ಹೇಳಿದರು: "ಅಲ್ಲಾಹ್‌ನ ಆಣೆ! ಹಝ್ರತ್ ಸಾಹಿಬ್ ಅ.ಸ. ಎಲ್ಲಿದ್ದರು ಮತ್ತು ನಾನು ಎಲ್ಲಿದ್ದೇನೆ! ಅವರ ಎದುರು ನಾನು ಏನೂ ಅಲ್ಲ."

(ಸೀರತುಲ್ ಮಹ್ದೀ, ಸಂಪುಟ 1, ಭಾಗ 3, ಪುಟ 545, ರಿವಾಯತ್ 562)

ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಮನೆಯಲ್ಲಿ ಒಬ್ಬ ಬಡ ಮಹಿಳೆ ಕೆಲವು ಅಕ್ಕಿಯನ್ನು ಕದ್ದಳು. ಜನರು ಆಕೆಯನ್ನು ನೋಡಿ ಗದ್ದಲ ಮಾಡಿದರು. ಆ ಸಮಯದಲ್ಲಿ ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ತಮ್ಮ ಕೋಣೆಯಲ್ಲಿ ಕೆಲಸ ಮಾಡುತ್ತಿದ್ದರು. ಗದ್ದಲ ಕೇಳಿ ಹೊರಗೆ ಬಂದಾಗ, ಒಬ್ಬ ಬಡ ಹಾಗೂ ಅತ್ಯಂತ ದಯನೀಯ ಸ್ಥಿತಿಯ ಮಹಿಳೆ ನಿಂತಿರುವುದನ್ನು ಕಂಡರು. ಆಕೆಯ ಕೈಯಲ್ಲಿ ಸ್ವಲ್ಪ ಅಕ್ಕಿಯ ಗಂಟು ಇತ್ತು. ಹುಝೂರ್ ಅ.ಸ. ಅವರಿಗೆ ವಿಷಯ ತಿಳಿದುಬಂತು. ಆ ಮಹಿಳೆಯ ದಯನೀಯ ಸ್ಥಿತಿಯನ್ನು ನೋಡಿದಾಗ ಅವರ ಹೃದಯ ಕರಗಿತು. ಹುಝೂರ್ ಅ.ಸ. ಹೇಳಿದರು:

"ಈಕೆ ಹಸಿದ ಮತ್ತು ನಿರ್ಗತಿಕಳಂತೆ ಕಾಣುತ್ತಾಳೆ. ಆಕೆಗೆ ಇನ್ನೂ ಸ್ವಲ್ಪ ಅಕ್ಕಿ ನೀಡಿ ಕಳುಹಿಸಿಬಿಡಿ ಮತ್ತು ಅಲ್ಲಾಹ್ ತಆಲಾದ ಸತ್ತಾರಿ (ದೋಷಗಳನ್ನು ಮುಚ್ಚುವ) ಗುಣವನ್ನು ಅಳವಡಿಸಿಕೊಳ್ಳಿರಿ."

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರ.ಅ. ಅವರು ಈ ಘಟನೆ ವಿವರಿಸಿ ಬರೆಯುತ್ತಾರೆ:

"ಈ ಘಟನೆಯನ್ನು ನೋಡಿ ಆತುರಪಡುವ ಒಬ್ಬ ವ್ಯಕ್ತಿ, 'ಇದು ಕಳ್ಳತನಕ್ಕೆ ಧೈರ್ಯ ನೀಡುವುದಲ್ಲವೇ?' ಎಂದು ಹೇಳಬಹುದು. ಆದರೆ ಜ್ಞಾನಿಗಳು ಅರ್ಥಮಾಡಿಕೊಳ್ಳುವ ಸಂಗತಿಯೇನೆಂದರೆ, ಆ ಸಂಪತ್ತು ಸ್ವತಃ ಹಝ್ರತ್ ಮಸೀಹ್ ಮೌಊದ್ ಅ.ಸ. ಅವರದ್ದಾಗಿತ್ತು ಮತ್ತು ಅದನ್ನು ತೆಗೆದುಕೊಂಡ ಮಹಿಳೆ ತೀವ್ರ ಹಸಿವಿನಿಂದ ಬಳಲುತ್ತಿದ್ದ ಅತ್ಯಂತ ಬಡ ಮಹಿಳೆಯಾಗಿದ್ದಳು. ಆದ್ದರಿಂದ ಇದು ಕಳ್ಳತನಕ್ಕೆ ಪ್ರೋತ್ಸಾಹ ನೀಡುವುದಲ್ಲ; ವಾಸ್ತವವಾಗಿ ಇದು 'ಇತ್‌ಆಮೆ ಮಿಸ್ಕೀನ್' ಬಡವನಿಗೆ ಆಹಾರ ನೀಡುವುದರೊಳಗೆ ಸೇರುತ್ತದೆ.

ಅಹಾದೀಸ್‌ನಿಂದಲೂ ಸಾಬೀತಾಗಿದೆ: ಕಳ್ಳತನ ಮಾಡುವ ವ್ಯಕ್ತಿ ಅತ್ಯಂತ ಬಡವನಾಗಿದ್ದು, ತೀವ್ರ ಹಸಿವಿನ ಪರಿಸ್ಥಿತಿಯಲ್ಲಿ ತಿನ್ನಲು ಬೇಕಾದ ವಸ್ತುವನ್ನು ತೆಗೆದುಕೊಂಡಿದ್ದರೆ, ಅಂತಹ ಸಂದರ್ಭಗಳಲ್ಲಿ ನಬಿಯ್ಯೇ ಕರೀಮ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರು ಅವನನ್ನು ಕಳ್ಳನೆಂದು ಪರಿಗಣಿಸದೆ ಕ್ಷಮೆ ಮತ್ತು ಕರುಣೆಯಿಂದ ನಡೆದುಕೊಂಡಿದ್ದಾರೆ." (ಸೀರತೆ ತಯ್ಯಿಬಾ, ಹಜ್ರತ್ ಮಿರ್ಜಾ ಬಶೀರ್ ಅಹ್ಮದ್ ಸಾಹಿಬ್ ರ.ಅ. ಎಂ.ಎ., ಪುಟ 64–65)

ಇವು ತಮ್ಮ ನೇತಾರ, ನಬಿಯ್ಯೇ ಕರೀಮ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರ ಪರಿಪೂರ್ಣ ವಿಧೇಯತೆಯ ಅದ್ಭುತ ಮಾದರಿಗಳಾಗಿವೆ.

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವಅಲಾ ಅಬ್ದಿಕಲ್ ಮಸೀಹಿಲ್ ಮೌಊದಿ ವ ಬಾರಿಕ್ ವ ಸಲ್ಲಿಮ್**

------------*****------------

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ** ಜುಮುಅವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

**MUSLIM TELEVISION AHMADIYYA INTERNATIONAL**
**www.mta.tv**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

# ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

## ಹಝ್ರತ್ ಉಮರ್(ರ) ಇಸ್ಲಾಮ್ ಸ್ವೀಕಾರ

ಇದೇ ಕಾಲದಲ್ಲಿ ಮಕ್ಕದಲ್ಲಿ ನಡೆದ ಇನ್ನೊಂದು ಘಟನೆ ಮಕ್ಕಕ್ಕೆ ಬೆಂಕಿ ಹಚ್ಚಿತು. ಅದು ನಡೆದುದು ಹೀಗೆ: ಹಝ್ರತ್ ಉಮರ್(ರ) ಇಸ್ಲಾಮಿನ ಕಠಿಣ ಶತ್ರುಗಳಲ್ಲಿ ಒಬ್ಬರಾಗಿದ್ದರು. (ಅವರು ಅನಂತರ ಇಸ್ಲಾಮಿನ ದ್ವಿತೀಯ ಖಲೀಫರಾದರು). ಅವರು ಒಂದು ದಿನ ಹೀಗೆ ಯೋಚಿಸಿದರು: ಇಸ್ಲಾಮ್ ಧರ್ಮವನ್ನು ನಾಶಮಾಡಲು ಇಷ್ಟರವರೆಗೆ ಅನೇಕ ಪ್ರಯತ್ನಗಳು ನಡೆದಿವೆ. ಆದರೆ ಅದರಲ್ಲಿ ಯಶಸ್ಸು ಸಿಗಲಿಲ್ಲ. ಮುಹಮ್ಮದ್‌ನನ್ನೇ ಕೊಲೆ ಮಾಡಿ ಈ ಸಮಸ್ಯೆಯನ್ನು ಎಂದೆಂದಿಗೂ ಏಕೆ ಕೊನೆಗೊಳಿಸಬಾರದು? ಈ ಯೋಚನೆ ಸ್ಫುರಿಸಿದ ಕೂಡಲೆ ಅವರು ಖಡ್ಗವನ್ನೆತ್ತಿಕೊಂಡು ಮನೆಯಿಂದ ಹೊರಟು ಹಝ್ರತ್ ಪೈಗಂಬರರನ್ನು(ಸ) ಹುಡುಕುತ್ತಾ ಹೋದರು. ದಾರಿಯಲ್ಲಿ ಅವರ ಒಬ್ಬ ಸ್ನೇಹಿತನು ಅವರನ್ನು ಕಂಡು ಅವರ ಕೋಪಾವೇಶದಿಂದ ಕೂಡಿದ ಅವಸ್ಥೆಯನ್ನು ನೋಡಿ ಗಾಬರಿಗೊಂಡು ಅವರನ್ನು ಕೇಳಿದನು: "ಉಮರ್, ನೀವೆಲ್ಲಿಗೆ ಹೋಗುತ್ತಿರುವಿರಿ?" ಹಝ್ರತ್ ಉಮರ್(ರ) ಹೇಳಿದರು: "ನಾನು ಮುಹಮ್ಮದ್‌ನನ್ನು ಕೊಂದು ಹಾಕಲು ಹೋಗುತ್ತಿದ್ದೇನೆ". ಆಗ ಸ್ನೇಹಿತ ಹೇಳಿದನು: "ಮುಹಮ್ಮದ್‌ನನ್ನು ಕೊಂದು ಅವನ ಗೋತ್ರದವರ ಪ್ರತೀಕಾರದಿಂದ ನೀವು ಸುರಕ್ಷಿತರಾಗಬಲ್ಲಿರೋ? ನೀವು ನಿಮ್ಮ ಮನೆಯವರ ಕುರಿತು ವಿಚಾರಿಸಿ ತಿಳಿದುಕೊಳ್ಳಿರಿ. ನಿಮ್ಮ ಸಹೋದರಿ ಮತ್ತು ನಿಮ್ಮ ಭಾವ ಸಹ ಮುಸ್ಲಿಮರಾಗಿರುವರು." ಆ ಸಮಾಚಾರ ಕೇಳಿ ಹಝ್ರತ್ ಉಮರ್(ರ) ಅವರ ತಲೆಗೆ ಸಿಡಿಲು ಮಿಂಚು ಬಡಿದಂತೆ ಆಯಿತು. ಅವರು ಯೋಚಿಸಿದರು: ನಾನು ಇಸ್ಲಾಮಿನ ಕಠೋರ ವಿರೋಧಿಯಾಗಿದ್ದೇನೆ. ನಾನೀಗ ಮುಹಮ್ಮದ್‌ನನ್ನು ಕೊಲ್ಲಲು ಹೋಗುತ್ತಿದ್ದೇನೆ. ಆದರೆ ನನ್ನ ಸಹೋದರಿ ಮತ್ತು ಭಾವ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿರುವವರಾದರೆ ಮೊದಲು ನಾನು ಅವರಿಬ್ಬರನ್ನು ಸರಿಪಡಿಸಬೇಕಾಗಿದೆ. ಹೀಗೆ ಯೋಚಿಸುತ್ತಾ ಅವರು ತಮ್ಮ ಸಹೋದರಿಯ ಮನೆಯ ಕಡೆಗೆ ಹೋದರು. ಅವರು ಮನೆಬಾಗಿಲಿಗೆ ತಲುಪಿದಾಗ ಒಳಗಿನಿಂದ ಏನೋ ಸುಶ್ರಾವ್ಯವಾಗಿ ಪಠಿಸುತ್ತಿರುವುದನ್ನು ಆಲಿಸಿದರು. ಹೀಗೆ ಪಠಿಸುತ್ತಿದ್ದವರು ಹಝ್ರತ್ ಖಬ್ಬಾಬ್(ರ) ಆಗಿದ್ದರು. ಅವರು ಹಝ್ರತ್ ಉಮರ್(ರ) ಅವರ ಸಹೋದರಿ ಮತ್ತು ಭಾವನಿಗೆ ಪವಿತ್ರ ಖುರ್‌ಆನ್ ಕಲಿಸುತ್ತಿದ್ದರು. ಹಝ್ರತ್ ಉಮರ್ ವೇಗವಾಗಿ ಮನೆಯನ್ನು ಪ್ರವೇಶಿಸಿದರು. ಅವರ ಪಾದದ ಸಪ್ಪಳವನ್ನು ಕೇಳಿ ಹಝ್ರತ್ ಖಬಾಬ್ ಕಲಿಸುವಿಕೆಯನ್ನು ನಿಲ್ಲಿಸಿ ಯಾವುದೋ ಮೂಲೆಯಲ್ಲಿ ಅಡಗಿ ಕುಳಿತುಕೊಂಡರು. ಹಝ್ರತ್ ಉಮರ್‌ರವರ ಸಹೋದರಿ ಫಾತಿಮ(ರ) ಓದುತ್ತಿದ್ದ ಪವಿತ್ರ ಖುರ್‌ಆನ್ ಹಾಳೆಗಳನ್ನು ಅಡಗಿಸಿದರು. ಹಝ್ರತ್ ಉಮರ್ ಮನೆಯನ್ನು ಪ್ರವೇಶಿಸಿದ ಕೂಡಲೆ ಕೋಪದಿಂದ, "ನೀವು ನಮ್ಮ ಧರ್ಮವನ್ನು ತ್ಯಜಿಸಿರುವಿರೆಂದು ನಾನು ತಿಳಿದಿರುವೆನು" ಎಂದು ಹೇಳಿ ತಮ್ಮ ಚಿಕ್ಕಪ್ಪನ ಮಗನೂ ಆಗಿದ್ದ ತಮ್ಮ ಭಾವನನ್ನು ಆಕ್ರಮಿಸಲು ಮುಂದಾದರು. ಆಗ ಫಾತಿಮ ತನ್ನ ಸಹೋದರ ತನ್ನ ಪತಿಯನ್ನು ಆಕ್ರಮಿಸಲು ಮುಂದೆ ಬಂದುದನ್ನು ಕಂಡು ಓಡಿಬಂದು ತನ್ನ ಪತಿಗೆ ಅಡ್ಡವಾಗಿ ನಿಂತರು. ಹಝ್ರತ್ ಉಮರ್ ಕೈಯೆತ್ತಿದ್ದರು. ಅವರ ಕೈ ವೇಗವಾಗಿ ಅವರ ಭಾವನ ಮುಖದ ಕಡೆಗೆ ಬರುತ್ತಿತ್ತು. ಆ ಕೈಯ ಹೊಡೆತ ಫಾತಿಮರವರ ಮುಖಕ್ಕೆ ಆಕಸ್ಮಿಕವಾಗಿ ಬಿದ್ದಿತು. ಆಗ ಫಾತಿಮರವರ ಮೂಗಿನಿಂದ ರಕ್ತ ಸುರಿಯಲು ತೊಡಗಿತು. ಫಾತಿಮ ಪೆಟ್ಟು ತಿಂದರೂ ಧೈರ್ಯದಿಂದ ಹೇಳಿದರು: "ನಾವು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದುದು ಸತ್ಯವಾಗಿದೆ. ಆದರೆ ನೀವು ನೆನಪಿಟ್ಟುಕೊಳ್ಳಿರಿ, ನಾವು ಈ ಧರ್ಮವನ್ನು ಬಿಟ್ಟು ಬಿಡಲಾರೆವು. ನಿಮಗೆ ಸಾಧ್ಯವಿರುವುದನ್ನೆಲ್ಲಾ ಮಾಡಿರಿ."

ಹಝ್ರತ್ ಉಮರ್(ರ) ಒಬ್ಬ ಶೂರ ವ್ಯಕ್ತಿಯಾಗಿದ್ದರು. ದೌರ್ಜನ್ಯ ಅವರ ಶೌರ್ಯವನ್ನು ಅಳಿಸಿ ಬಿಟ್ಟಿರಲಿಲ್ಲ. ಒಬ್ಬ ಮಹಿಳೆ ಮತ್ತು ಅದರಲ್ಲೂ ತನ್ನ ಸಹೋದರಿ ತನ್ನ ಕೈಯಿಂದ ಗಾಯಗೊಂಡುದನ್ನು ನೋಡಿದಾಗ ಅವರು ಬಹಳವಾಗಿ ನಾಚಿಕೆಪಟ್ಟು ಪಶ್ಚಾತ್ತಪಿಸಿದರು. ಸಹೋದರಿಯ ಮುಖದಿಂದ ರಕ್ತ ಸುರಿಯುತ್ತಿತ್ತು. ಹಝ್ರತ್ ಉಮರ್‌ರವರ ಹೃದಯದಿಂದ ಕೋಪ ದೂರ ಸರಿದಿತ್ತು. ತಮ್ಮ ಸಹೋದರಿಯ ಕ್ಷಮೆಯನ್ನು ಯಾಚಿಸುವ ಆಶೆ ಅವರಲ್ಲಿ ಹೆಚ್ಚಾಗುತ್ತಾ ಹೋಯಿತು. ಅವರಿಗೆ ಯಾವುದೇ ನೆಪ ಹುಡುಕಲು ಸಾಧ್ಯವಾಗಲಿಲ್ಲ. ಅವರು ತಮ್ಮ ಸಹೋದರಿಯೊಡನೆ ಹೇಳಿದರು: "ನೀವು ಈಗ ತಾನೆ ಓದುತ್ತಿದ್ದ ಆ ವಚನಗಳನ್ನು ನನಗೆ ಓದಿ ಕೇಳಿಸಿರಿ." ಆಗ ಫಾತಿಮ ಹೇಳಿದರು: "ನಾನು ನಿಮಗೆ ಅದನ್ನು ತೋರಿಸಲಾರೆನು. ನೀವು ಆ ಹಾಳೆಗಳನ್ನು ಹಾಳು ಮಾಡುವಿರಿ." ಆಗ ಹಝ್ರತ್ ಉಮರ್(ರ) ಹೇಳಿದರು: "ಇಲ್ಲ ಸಹೋದರಿ, ನಾನು ಹಾಗೆ ಮಾಡಲಾರೆನು." ಆಗ ಫಾತಿಮ ಹೇಳಿದರು: "ನೀವು ಈಗ ಅಶುದ್ಧರಾಗಿರುವಿರಿ. ನೀವು ಮೊದಲು ಸ್ನಾನಮಾಡಿರಿ. ಅನಂತರ ನಾನು ನಿಮಗೆ ಅದನ್ನು ತೋರಿಸುವೆನು."

ಹಝ್ರತ್ ಉಮರ್(ರ) ಅತ್ಯಂತ ಪಶ್ಚಾತ್ತಾಪದಿಂದ ತನ್ನ ಸಹೋದರಿ ಹೇಳಿದಂತೆಲ್ಲಾ ಮಾಡಲು ಸಿದ್ಧರಾಗಿದ್ದರು. ಅವರು ಸ್ನಾನ ಮಾಡಲು ಸಹ ಸಮ್ಮತಿಸಿದರು. ಅವರು ಸ್ನಾನ ಮಾಡಿ ಬಂದ ನಂತರ ಫಾತಿಮ ಅವರ ಕೈಯಲ್ಲಿ ಪವಿತ್ರ ಖುರ್‌ಆನಿನ ಹಾಳೆಗಳನ್ನು ಕೊಟ್ಟರು. ಅದರಲ್ಲಿ ಪವಿತ್ರ ಖುರ್‌ಆನಿನ "ತಾಹಾ" ಎಂಬ ಅಧ್ಯಾಯದ ಕೆಲವು ವಚನಗಳು ಇದ್ದುವು. ಅವರು ಓದಲು ತೊಡಗಿದರು:

**"ನಿಶ್ಚಯವಾಗಿಯೂ ನಾನೇ ಅಲ್ಲಾಹನು. ನನ್ನ ಹೊರತು ಬೇರೆ ಆರಾಧ್ಯನಿಲ್ಲ. ಆದುದರಿಂದ ನೀನು ನನ್ನ ಆರಾಧನೆಯನ್ನು ಮಾಡು. ನನ್ನ ಸ್ಮರಣೆಗೋಸ್ಕರ ಪ್ರಾರ್ಥನೆಯನ್ನು ನಿಷ್ಠೆಯಿಂದ ಸಲ್ಲಿಸು. ಖಂಡಿತವಾಗಿಯೂ ಆ ಸಮಯ ಬರಲಿದೆ. ಪ್ರತಿಯೊಂದು ಆತ್ಮ ಅದರ ಕರ್ಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯುವಂತಾಗಲು ನಾನು ಅದನ್ನು ಪ್ರಕಟಿಸುವೆನು."** (ಪವಿತ್ರ ಖುರ್‌ಆನ್ 20:15, 16)

ಈ ವಚನಗಳನ್ನು ಓದಿದಾಗ ಅವರು ಪಕ್ಕನೆ ಉದ್ಗರಿಸಿದರು: "ಇದೆಂತಹ ಆಶ್ಚರ್ಯಕರವಾದ ಪವಿತ್ರ ವಚನಗಳಾಗಿವೆ." ಹಝ್ರತ್ ಖಬ್ಬಾಬ್ ಈ ಉದ್ಗಾರವನ್ನು ಆಲಿಸಿದಾಗ ತಾನು ಅಡಗಿದ್ದ ಸ್ಥಳದಿಂದ ಹೊರಗೆ ಬಂದು ಹೇಳಿದರು: "ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರಾರ್ಥನೆಗಳ ಪರಿಣಾಮವಾಗಿಯೇ ನಿಮ್ಮಲ್ಲಿ ಈ ಪರಿವರ್ತನೆ ಉಂಟಾಯಿತು. ಅಲ್ಲಾಹನಾಣೆ, ಹಝ್ರತ್ ಮುಹಮ್ಮದ್ ಪೈಗಂಬರ್, 'ಓ ನನ್ನ ಪ್ರಭೂ ಉಮರಿಬ್ನುಲ್ ಖತ್ತಾಬ್ ಅಥವಾ ಉಮರಿಬ್ನು ಹಿಶಾಮ್ ಇವರಿಬ್ಬರಲ್ಲಿ ಒಬ್ಬನಿಗಾದರೂ ಇಸ್ಲಾಮಿನ ಕಡೆಗೆ ಮಾರ್ಗದರ್ಶನ ನೀಡು' ಎಂದು ಪ್ರಾರ್ಥಿಸುವುದನ್ನು ನಿನ್ನೆಯೇ ನಾನು ಆಲಿಸಿದೆನು."

ಹಝ್ರತ್ ಉಮರ್(ರ) ಆಗ ಎದ್ದು ನಿಂತು, ಹಝ್ರತ್ ಮುಹಮ್ಮದ್(ಸ) ಎಲ್ಲಿದ್ದಾರೆಂದು ವಿಚಾರಿಸಿದರು. ಹಝ್ರತ್ ಮುಹಮ್ಮದ್(ಸ) ದಾರ್ ಅರ್‌ಖಮ್‌ನಲ್ಲಿ ಇರುವುದಾಗಿ ಅವರಿಗೆ ತಿಳಿಸಿದಾಗ ಅವರು ತನ್ನ ಕೈಯಲ್ಲಿ ಒರೆಗಳಚಿದ ಖಡ್ಗವನ್ನು ಎತ್ತಿಕೊಂಡು ಅಲ್ಲಿಗೆ ಹೋಗಿ ಮನೆ ಬಾಗಿಲನ್ನು ತಟ್ಟಿದಾಗ ಶಿಷ್ಯರು ಬಾಗಿಲಿನ ಸಂಧಿಯಲ್ಲಿ ಹಝ್ರತ್ ಉಮರ್(ರ) ನಗ್ನ ಖಡ್ಗವನ್ನು ಎತ್ತಿಕೊಂಡು ನಿಂತಿರುವುದಾಗಿ ಕಂಡರು. ಬಾಗಿಲು ತೆರೆದರೆ ಒಳಗೆ ಏನಾದರೂ ಅನಾಹುತ ಸಂಭವಿಸಬಹುದೆಂದು ಅವರು ಹೆದರಿದರು. ಆದರೆ ಹಝ್ರತ್ ಪೈಗಂಬರ್(ಸ) ಬಾಗಿಲು ತೆರೆಯಲು ಹೇಳಿದರು. ಹಝ್ರತ್ ಉಮರ್(ರ) ಖಡ್ಗವನ್ನೆತ್ತಿಕೊಂಡು ಒಳಗೆ ಪ್ರವೇಶಿಸಿದರು. ಹಝ್ರತ್ ಪೈಗಂಬರ್(ಸ) ಮುಂದೆ ಹೋಗಿ ಕೇಳಿದರು: "ಓ ಉಮರ್, ನೀವು ಯಾವ ಉದ್ದೇಶದಿಂದ ಇಲ್ಲಿಗೆ ಬಂದಿರಿ?" ಹಝ್ರತ್ ಉಮರ್(ರ) ಹೇಳಿದರು: "ಓ ಅಲ್ಲಾಹನ ಪ್ರವಾದಿಯವರೇ, ನಾನು ಮುಸ್ಲಿಮನಾಗಲು ಬಂದಿದ್ದೇನೆ." ಹಝ್ರತ್ ಪೈಗಂಬರ್(ಸ) ಈ ಮಾತುಗಳನ್ನು ಆಲಿಸಿ ಉಚ್ಚ ಸ್ವರದಿಂದ "ಅಲ್ಲಾಹು ಅಕ್‌ಬರ್" (ಅಲ್ಲಾಹನು ಎಲ್ಲರಿಗಿಂತಲೂ ದೊಡ್ಡವನು) ಎಂದು ಹೇಳಿದರು. ಅವರ ಶಿಷ್ಯರು ಸಹ ಉಚ್ಚ ಸ್ವರದಿಂದ ಅಲ್ಲಾಹು ಅಕ್‌ಬರ್ ಎಂದು ಪುನರಾವರ್ತಿಸಿದರು. ಈ ಧ್ವನಿ ಮಕ್ಕದ ಗುಡ್ಡಗಳಿಂದ ಪ್ರತಿಧ್ವನಿಸಿತು. ಸ್ವಲ್ಪ ಹೊತ್ತಿನೊಳಗೆ ಈ ಸಮಾಚಾರ ಮಕ್ಕ ನಗರದಲ್ಲಿ ಬೆಂಕಿಯಂತೆ ಹಬ್ಬಿತು.

ಹಝ್ರತ್ ಪೈಗಂಬರರ(ಸ) ಇತರ ಶಿಷ್ಯರೊಂದಿಗೆ ವರ್ತಿಸುವ ಹಾಗೆಯೇ ಹಝ್ರತ್ ಉಮರ್‌ರೊಂದಿಗೆ(ರ) ಮಕ್ಕದ ನಿವಾಸಿಗಳು ಕಠಿಣವಾಗಿ ವರ್ತಿಸಲು ತೊಡಗಿದರು. ಆದರೆ ಹೊಡೆಯುವುದರಲ್ಲಿ ಮತ್ತು ಕೊಲ್ಲುವುದರಲ್ಲಿ ಆನಂದಿಸುತ್ತಾ ಇದ್ದ ಹಝ್ರತ್ ಉಮರ್(ರ) ಪೆಟ್ಟು ತಿನ್ನುವುದರಲ್ಲಿ ಮತ್ತು ಹೊಡೆತಕ್ಕೊಳಗಾಗುವುದರಲ್ಲಿ ಸಂತೋಷಪಡಲು ತೊಡಗಿದರು. ಹಝ್ರತ್ ಉಮರ್(ರ) ಸ್ವತಃ ಹೀಗೆ ಹೇಳಿದ್ದರು: "ನಾನು ಸತ್ಯ ವಿಶ್ವಾಸವನ್ನು ಸ್ವೀಕರಿಸಿದ ನಂತರ ಮಕ್ಕದ ರಸ್ತೆಗಳಲ್ಲಿ ಪೆಟ್ಟು ತಿನ್ನುತ್ತಾ ಇದ್ದೆನು."

**(ಮುಂದುವರಿಯುವುದು)**

**131ನೇ ಜಲ್ಸಾ ಸಾಲಾನ ಖಾದಿಯಾನ್**
**25, 26, 27 ಡಿಸೆಂಬರ್ 2026ರಂದು ಆಯೋಜಿಸಲಾಗುವುದು**

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 131ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 25, 26 ಮತ್ತು 27ನೇ ಡಿಸೆಂಬರ್ 2026 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಮರ್ಕಝಿಯ ಖಾದಿಯಾನ್)**

**ಪ್ರೀತಿ ಎಲ್ಲರಲ್ಲೂ, ದ್ವೇಷವಿಲ್ಲ ಯಾರಲ್ಲೂ**

**Love for All, Hatred for None**


## ಹಝ್ರತ್ ಮಸೀಹ್ ಮೌಊದರ(ಅಲೈಹಿಸ್ಸಲಾಮ್) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

**(29) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಮೌಲವಿ ಶೇರ್ ಅಲಿ ಸಾಹಿಬ್ ಅವರು ನನಗೆ ಹೀಗೆ ವಿವರಿಸಿದರು: ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ವಿರುದ್ಧ ಕರಮ್ ದೀನ್ ಸಲ್ಲಿಸಿದ್ದ ಮೊಕದ್ದಮೆಯ ವಿಚಾರಣೆ ಗುರ್ದಾಸ್ಪುರ್ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಸಂದರ್ಭದಲ್ಲಿ, ಹಝ್ರತ್ ಸಾಹಿಬ್ (ಅ.ಸ.) ಗುರ್ದಾಸ್ಪುರ್‌ನಲ್ಲಿ ತಂಗಿದ್ದರು. ಒಂದು ದಿನ ಎಲ್ಲರೂ ನ್ಯಾಯಾಲಯಕ್ಕೆ ತೆರಳಿದ್ದರು ಅಥವಾ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದರು. ಆ ಸಮಯದಲ್ಲಿ ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಅವರ ಬಳಿಯಲ್ಲಿ ನಾನು ಮತ್ತು ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್ ಮಾತ್ರ ಇದ್ದೆವು. ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಮಲಗಿರುವಂತೆ ಕಾಣುತ್ತಿದ್ದರು. ಅವರು ವಿಶ್ರಾಂತಿ ಪಡೆಯುತ್ತಿರುವಂತೆ ಭಾಸವಾಗುತ್ತಿತ್ತು. ಅದೇ ಸ್ಥಿತಿಯಲ್ಲಿ ಅವರು ಹಠಾತ್ತನೆ ತಲೆಯೆತ್ತಿ ಹೀಗೆ ಹೇಳಿದರು: ನನಗೆ ಇಲ್ಹಾಮ್ ಆಗಿದೆ. ಅದನ್ನು ಬರೆದುಕೊಳ್ಳಿ. ಆದರೆ ಆ ಸಮಯದಲ್ಲಿ ಅಲ್ಲಿದ್ದವರ ಬಳಿ ಪೆನ್ನು, ಮಸಿ ಅಥವಾ ಪೆನ್ಸಿಲ್ ಯಾವುದೂ ಇರಲಿಲ್ಲ. ಕೊನೆಗೆ ನಾವು ಅಡುಗೆಮನೆಯಿಂದ ಒಂದು ಕಲ್ಲಿದ್ದಲಿನ ತುಂಡನ್ನು ತಂದುಕೊಟ್ಟೆವು. ಆಗ ಮುಫ್ತಿ ಸಾಹಿಬ್ ಅದರಿಂದ ಕಾಗದದ ಮೇಲೆ ಆ ಇಲ್ಹಾವ್ ಅನ್ನು ಬರೆದುಕೊಂಡರು. ಅನಂತರ ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಮತ್ತೆ ಮೊದಲಿನಂತೆ ಮಲಗಿದರು. ಸ್ವಲ್ಪ ಸಮಯದ ನಂತರ ಮತ್ತೆ ತಲೆಯೆತ್ತಿ ಮತ್ತೊಂದು ಇಲ್ಹಾಮ್ ಅನ್ನು ಬರೆಯುವಂತೆ ಹೇಳಿದರು. ಈ ರೀತಿಯಾಗಿ ಆ ಸಂದರ್ಭದಲ್ಲಿ ಹಲವಾರು ಇಲ್ಹಾಮ್‌ಗಳನ್ನು ಅವರು ಬರೆಸಿದರು. ಮೌಲವಿ ಶೇರ್ ಅಲಿ ಸಾಹಿಬ್ ಹೇಳುತ್ತಾರೆ: ಅವುಗಳಲ್ಲಿ ನನಗೆ ಸ್ಪಷ್ಟವಾಗಿ ನೆನಪಿರುವ ಒಂದು ಇಲ್ಹಾಮ್ ಹೀಗಿದೆ: **ಯಸ್‌ಅಲೂನಕ ಅನ್ ಶಾನಿಕ ಖುಲಿಲ್ಲಾಹ ಸುಮ್ಮ ಝರ್‌ಹುಮ್ ಫೀ ಖೌಝಿಹಿಮ್ ಯಲ್‌ಅಬೂನ್**– ಅದರ ಅರ್ಥ: ಜನರು ನಿನ್ನ ಮಹಿಮೆ ಮತ್ತು ಸ್ಥಾನಮಾನದ ಕುರಿತು ನಿನ್ನನ್ನು ಪ್ರಶ್ನಿಸುವರು. ಅವರಿಗೆ ಹೇಳು: 'ಇದು ಅಲ್ಲಾಹನ ಅನುಗ್ರಹ.' ನಂತರ ಅವರನ್ನು ಅವರ ವ್ಯರ್ಥ ವಾದವಿವಾದ ಮತ್ತು ಹಾಸ್ಯದಲ್ಲಿ ತೊಡಗಿರುವಂತೆಯೇ ಬಿಟ್ಟುಬಿಡು. ಮರುದಿನ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ನ್ಯಾಯಾಲಯದಲ್ಲಿ ಹಾಜರಾದರು. ದಾವೆದಾರನ ಪರ ವಕೀಲನು ಇತರ ಪ್ರಶ್ನೆಗಳ ಜೊತೆಗೆ ಒಂದು ಪ್ರಶ್ನೆಯನ್ನು ಕೇಳಿದನು. ಅವನು ಹಝ್ರತ್ ಸಾಹಿಬ್ (ಅ.ಸ.) ಅವರ 'ತುಹ್ಫಾ ಗೊಲಡ್ವಿಯ್ಯಾ' ಎಂಬ ಪುಸ್ತಕದಿಂದ ಒಂದು ಭಾಗವನ್ನು ಓದಿ ಕೇಳಿಸಿ, ಅದರಲ್ಲಿ ತಮ್ಮ ಜ್ಞಾನ ಮತ್ತು ಉನ್ನತ ಆಧ್ಯಾತ್ಮಿಕ ಸ್ಥಾನಮಾನವನ್ನು ಬಲಿಷ್ಠ ಪದಗಳಲ್ಲಿ ವಿವರಿಸಿರುವುದನ್ನು ಉಲ್ಲೇಖಿಸಿ ಕೇಳಿದನು: ನೀವು ನಿಜವಾಗಿಯೂ ನಿಮ್ಮ ಬಗ್ಗೆ ಇದೇ ರೀತಿಯ ಉನ್ನತ ಸ್ಥಾನಮಾನವನ್ನು ಹೊಂದಿದ್ದೀರಿ ಎಂದು ನಂಬುತ್ತೀರಾ? ಅದಕ್ಕೆ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಉತ್ತರಿಸಿದರು: ಹೌದು. ಇದು ಅಲ್ಲಾಹನ ಅನುಗ್ರಹವಾಗಿದೆ. ಅಥವಾ ಇದೇ ಅರ್ಥವನ್ನು ಹೊಂದಿರುವ ಇನ್ನೊಂದು ವಾಕ್ಯವನ್ನು ಉಚ್ಚರಿಸಿ, ತಮ್ಮ ಸ್ಥಾನಮಾನವನ್ನು ಸಂಪೂರ್ಣವಾಗಿ ಅಲ್ಲಾಹನ ಕೃಪೆಗೆ ಸಂಬಂಧಿಸಿದರು. ಮೌಲವಿ ಶೇರ್ ಅಲಿ ಸಾಹಿಬ್ ಹೇಳುತ್ತಾರೆ: ಆ ಸಮಯದಲ್ಲಿ ನ್ಯಾಯಾಲಯದಲ್ಲಿ ನಡೆದ ಈ ಪ್ರಶ್ನೋತ್ತರವು ಮುಂಚಿನ ದಿನ ದೊರೆತ ಇಲ್ಹಾಮ್‌ನ ನೇರ ಪೂರ್ಣತೆಯಾಗಿತ್ತು ಎಂಬುದು ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಅವರ ಗಮನಕ್ಕೆ ಬಂದಿರಲಿಲ್ಲ. ಕೆಲವು ದಿನಗಳ ನಂತರ ಗುರ್ದಾಸ್ಪುರ್‌ನಿಂದ ಖಾದಿಯಾನ್‌ಗೆ ಹಿಂದಿರುಗುವಾಗ, ದಾರಿಯಲ್ಲಿರುವ ಒಂದು ತಿರುವಿನ ಬಳಿ ನಾನು ವಿನಯದಿಂದ ಅರ್ಜು ಮಾಡಿದೆನು: ಹುಝೂರ್! ನನ್ನ ಅಭಿಪ್ರಾಯದಲ್ಲಿ, ನ್ಯಾಯಾಲಯದಲ್ಲಿ ನಡೆದ ಈ ಪ್ರಶ್ನೋತ್ತರವೇ ಆ ಇಲ್ಹಾಮ್‌ನ ನೆರವೇರಿಕೆಯಾಗಿದೆ. ಇದನ್ನು ಕೇಳಿದ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಬಹಳ ಸಂತೋಷಪಟ್ಟು ಹೀಗೆ ಹೇಳಿದರು: ಹೌದು, ನಿಜವಾಗಿಯೂ ಹಾಗೆಯೇ ಇದೆ. ನೀವು ಅದನ್ನು ಅತ್ಯಂತ ಸರಿಯಾಗಿ ಅರ್ಥಮಾಡಿಕೊಂಡಿದ್ದೀರಿ. ಮೌಲವಿ ಶೇರ್ ಅಲಿ ಸಾಹಿಬ್ ಮತ್ತಷ್ಟು ಹೇಳುತ್ತಾರೆ: ಕೆಲವು ದಿನಗಳ ನಂತರ ಶೈಖ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್ ಅವರು ನನಗೆ ಹೀಗೆ ಹೇಳಿದರು: ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಮತ್ತೊಂದು ಸಂದರ್ಭದಲ್ಲಿ ಕೂಡ, 'ಮೌಲವಿ ಶೇರ್ ಅಲಿ ಈ ಇಲ್ಹಾಮ್‌ನ ಅನ್ವಯವನ್ನು ಬಹಳ ಸರಿಯಾಗಿ ಗ್ರಹಿಸಿದ್ದಾರೆ' ಎಂದು ಉಲ್ಲೇಖಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದರು."

(ಸಂಪಾದಕರ ಟಿಪ್ಪಣಿ: ಈ ವರದಿಯಲ್ಲಿ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ 'ತುಹ್ಫಾ ಗೊಲಡ್ವಿಯ್ಯಾ' ಎಂಬ ಪುಸ್ತಕದ ಉಲ್ಲೇಖವಿದೆ. ಈ ಸಂಬಂಧ ಒಂದು ವಿಷಯವನ್ನು ವಿಶೇಷವಾಗಿ ಉಲ್ಲೇಖಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ತಮ್ಮ 'ಹಖೀಖತುಲ್ ವಹೀ' ಕೃತಿಯಲ್ಲಿ, ಈ ಸಂದರ್ಭಕ್ಕೆ ಸಂಬಂಧಿಸಿದ ಪುಸ್ತಕದ ಹೆಸರಾಗಿ 'ತಿರ್ಯಾಖುಲ್ ಖುಲೂಬ್' ಎಂದು ಉಲ್ಲೇಖಿಸಿದ್ದಾರೆ. ಆದರೆ ವಾಸ್ತವವಾಗಿ ಅದು ಅವರಿಂದಾದ ಒಂದು ಸಹ್ವ್ (ಸ್ಮರಣದೋಷ) ಆಗಿತ್ತು. ಸರಿಯಾದ ಸಂಗತಿ ಏನೆಂದರೆ, ನ್ಯಾಯಾಲಯದಲ್ಲಿ ವಿಚಾರಿಸಲ್ಪಟ್ಟ ಪುಸ್ತಕ 'ತುಹ್ಫಾ ಗೊಲಡ್ವಿಯ್ಯಾ' ಆಗಿತ್ತು; 'ತಿರ್ಯಾಖುಲ್ ಖುಲೂಬ್' ಅಲ್ಲ. ಈ ವಿಷಯವು ಈ ಗ್ರಂಥದ ದ್ವಿತೀಯ ಭಾಗದ ವರದಿ ಸಂಖ್ಯೆ 389 ರಲ್ಲಿ ನ್ಯಾಯಾಲಯದ ಅಧಿಕೃತ ದಾಖಲೆಗಳ (ಮಿಸ್ಲ್–ಎ–ಅದಾಲತ್) ಆಧಾರದ ಮೇಲೆ ಈಗಾಗಲೇ ದೃಢೀಕರಿಸಲಾಗಿದೆ.

**(ಮುಂದುವರಿಯುವುದು)**



اصل خط

### *(ಪುಟ ಸಂಖ್ಯೆ 01ರ ತಫ್ಸೀರ್‌ನ ಉಳಿದ ಭಾಗ)*

ಅವನ ಮನಸ್ಸಿನಲ್ಲಿ ಈ ಯೋಚನೆ ಬರಬಹುದು: ನಾನು ಅವನೊಂದಿಗೆ ಉತ್ತಮವಾಗಿ ವರ್ತಿಸಿದರೆ, ಅವನ ಹೃದಯದಲ್ಲಿರುವ ದ್ವೇಷವು ದೂರವಾಗಬಹುದು ಮತ್ತು ಅವನು ನನ್ನ ಸ್ನೇಹಿತನಾಗಿ ನನ್ನ ಶಕ್ತಿಗೆ ಕಾರಣವಾಗಬಹುದು. ಆದರೆ ತನ್ನ ಮಗುವಿನ ಮೇಲೆ ಪ್ರೀತಿ ಹೊಂದಿರುವ ತಾಯಿಯು ಅದರಿಗಾಗಿ ಮಾಡುವ ತ್ಯಾಗದಲ್ಲಿ, ಪ್ರತಿಫಲದ ಒಂದು ಕಣಮಾತ್ರದ ಆಸೆಯೂ ಇರುವುದಿಲ್ಲ. ಬದಲಾಗಿ, ಆಕೆಯ ಪ್ರೀತಿಯ ಆಧಾರವೇ ತನ್ನ ಸ್ವಂತ ತ್ಯಾಗವಾಗಿರುತ್ತದೆ. ಒಬ್ಬ ಸ್ತ್ರೀಯಿಗೆ ಮಕ್ಕಳಿಲ್ಲದಿದ್ದಾಗ, ಆಕೆಯ ಮನಸ್ಸಿನಲ್ಲಿ ಎಂದಿಗೂ ಈ ಯೋಚನೆ ಬರುವುದಿಲ್ಲ: ನನಗೆ ಮಗನಿದ್ದರೆ, ಅವನು ನನ್ನ ಸೇವೆ ಮಾಡುತ್ತಿದ್ದನು. ಬದಲಾಗಿ, ಆಕೆಯು ಸಂತಾನವನ್ನು ಬಯಸುವುದು ಈ ಭಾವನೆಯೊಂದಿಗೆ: 'ನಾನು ಅವನನ್ನು ಬೆಳೆಸುತ್ತಿದ್ದೆನು, ಅವನ ಸೇವೆ ಮಾಡುತ್ತಿದ್ದೆನು, ಅವನಿಗೆ ಬಟ್ಟೆ ತೊಡಿಸುತ್ತಿದ್ದೆನು, ಅವನ ವಿವಾಹ ಮಾಡಿಸುತ್ತಿದ್ದೆನು ಮತ್ತು ಅವನ ಮಕ್ಕಳನ್ನು ಪ್ರೀತಿಯಿಂದ ಪೋಷಿಸುತ್ತಿದ್ದೆನು. ಹೀಗೆ, ಸಂತಾನದ ಆಸೆಯನ್ನು ಹೊಂದುವಾಗ ತಾಯಿಯ ಹೃದಯದಲ್ಲಿ ತನ್ನ ಸೇವೆಯನ್ನು ಪಡೆಯುವ ಅಲ್ಪಮಾತ್ರದ ಭಾವನೆಯೂ ಇರುವುದಿಲ್ಲ. ಬದಲಾಗಿ, ಆ ಆಸೆಯ ಮೂಲ ಕಾರಣವೇ ತನ್ನ ಸಂತಾನದ ಸೇವೆ ಮಾಡುವ ಉತ್ಸಾಹವಾಗಿರುತ್ತದೆ. ಇದೇ ಆ ನೇಕಿಯ (ಪರಮ ಸತ್ಕರ್ಮದ) ಭಾವನೆಯಾಗಿದೆ, ಇದು ಮನುಷ್ಯನಿಗೆ ಅತ್ಯುನ್ನತ ನೈತಿಕ ಗುಣವಾಗಿದೆ. ಮತ್ತು ಈ ಗುಣವನ್ನು ಪಡೆದ ನಂತರವೇ ಮನುಷ್ಯನ ಅಖ್ಲಾಖೀ (ನೈತಿಕ) ಅಸ್ತಿತ್ವವು ಸಂಪೂರ್ಣವಾಗುತ್ತದೆ. ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ: ಇಹ್ಸಾನ್‌ನ ಸ್ಥಾನವನ್ನು ಪಡೆದ ನಂತರ ಅಂದರೆ, ಪಡೆಯುವುದಕ್ಕಿಂತ ನೀಡುವುದರಲ್ಲಿ ಹೆಚ್ಚಿನ ಸಂತೋಷವನ್ನು ಕಾಣುವ ಸ್ಥಿತಿಗೆ ತಲುಪಿದಾಗ ಈಗ ಅದಕ್ಕಿಂತಲೂ ಉನ್ನತವಾದ ನೇಕಿಯ ಸ್ಥಾನವನ್ನೂ ಪಡೆಯಿರಿ. ಆ ಸ್ಥಾನವೆಂದರೆ: ಸಮಸ್ತ ಮಾನವಕುಲ ನಿಮಗೆ ನಿಮ್ಮ ಸ್ವಂತ ಮಕ್ಕಳಂತೆ ಕಾಣಲು ಪ್ರಾರಂಭಿಸಬೇಕು ಮತ್ತು ಅವರ ಸೇವೆ ಮಾಡುವ ಉತ್ಸಾಹವು ನಿಮ್ಮ ಹೃದಯದಲ್ಲಿ ಹೀಗೆ ಉಕ್ಕಿ ಹರಿಯಬೇಕು, ಹೇಗೆಂದರೆ ಒಬ್ಬ ತಾಯಿಯ ಹೃದಯದಲ್ಲಿ ತನ್ನ ಮಗುವಿನ ಮೇಲಿನ ಪ್ರೀತಿ ನಿರಂತರವಾಗಿ ಉಕ್ಕಿ ಹರಿಯುತ್ತಿರುತ್ತದೆ.

**(ತಫ್ಸೀರ್ ಕಬೀರ್, ಸಂಪುಟ 6, ಪುಟ 169, ಯುಕೆ ಪ್ರಕಟಣೆ)**


***ವಿಶೇಷ ಸೂಚನೆ***

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.

ಮೊಬೈಲ್ ಸಂಖ್ಯೆ: 7349757414 (ವ್ಯವಸ್ಥಾಪಕರು)

EDITOR
TARIQ AHMED IDRIS.
Mobile : +91 9902678609
e-mail:
akhbaarbadarkannadaqdn@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2026-28 Vol No.07, Thursday, 20-27 August 2026, Issue No. 34-35

Act. MANAGER
ATHAR AHMAD SHAMIM.
Mobile : +91 99156 39670
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಷ್ಟ್, ಸೆಪ್ಟೆಂಬರ್ 2023

**ಕಝಾಕಿಸ್ತಾನ್, ಕಿರ್ಗಿಸ್ತಾನ್ ಮತ್ತು ಉಜ್ಬೇಕಿಸ್ತಾನ್ ನಿಯೋಗಗಳ ಸಭೆ**

ಹುಝೂರ್ ಅನ್ವರ್(ಅತಬಿಅ) ಬೆಳಿಗ್ಗೆ 10:35 ಕ್ಕೆ ಮಸೀದಿಯ ಪುರುಷರ ಸಭಾಂಗಣಕ್ಕೆ ಬಂದರು, ಅಲ್ಲಿ ಕಝಾಕಿಸ್ತಾನ್, ಕಿರ್ಗಿಸ್ತಾನ್ ಮತ್ತು ಉಜ್ಬೇಕಿಸ್ತಾನ್ ನಿಯೋಗಗಳ ಸಾಮೂಹಿಕ ಸಭೆ ನಡೆಯಿತು.

ಹುಝೂರ್ ಅನ್ವರ್(ಅತಬಿಅ) ನಿಮ್ಮ ಜಲ್ಸ ಹೇಗೆ ನಡೆಯಿತು ಎಂದು ಕೇಳಿದರು, ನೀವು ಏನನ್ನಾದರೂ ಕಲಿತಿದ್ದೀರಾ, ನೀವು ಏನು ನೋಡಿದ್ದೀರಿ? ಇದರ ಬಗ್ಗೆ, ಕಝಾಕಿಸ್ತಾನ್‌ನ ಸ್ನೇಹಿತರೊಬ್ಬರು ಇದು ನನ್ನ ನಾಲ್ಕನೇ ವಾರ್ಷಿಕ ಜಲ್ಸ ಎಂದು ಹೇಳಿದರು. ನಾನು ಖಾದಿಯಾನ್‌ನ ಜಲ್ಸದಲ್ಲಿಯೂ ಭಾಗವಹಿಸಿದ್ದೇನೆ ಮತ್ತು ಯುಕೆ ಜಲ್ಸದಲ್ಲಿಯೂ ಭಾಗವಹಿಸಿದ್ದೇನೆ. ಸರ್ವಶಕ್ತನಾದ ಅಲ್ಲಾಹನು ನನಗೆ ಈಗ ಇಲ್ಲಿ ಅವಕಾಶ ನೀಡಿದ್ದಾನೆ. ಜಲ್ಸದ ವ್ಯವಸ್ಥೆಗಳಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ವ್ಯವಸ್ಥೆಗಳನ್ನು ಮಾಡಲಾಯಿತು. ಮೂರು ದಿನಗಳು ಬಹಳ ಬೇಗನೆ ಕಳೆದವು. ನಾವು ಅನುಭವಿಸುತ್ತಿದ್ದ ಆನಂದ. ಈಗ ಅದು ಶೀಘ್ರದಲ್ಲೇ ಕೊನೆಗೊಳ್ಳುತ್ತದೆ.

ಕಿರ್ಗಿಸ್ತಾನ್‌ನ ಅತಿಥಿಯೊಬ್ಬರು ನಾನು ಭಾಗವಹಿಸಿದ ನನ್ನ ಮೊದಲ ಜಲ್ಸ ಸಾಲಾನ ಇದಾಗಿದೆ ಎಂದು ಹೇಳಿದರು. ನಾನು ಹುಝೂರ್ ಅನ್ವರ್(ಅತಬಿಅ) ಅವರ ಹಿಂದೆ ನಮಾಝನ್ನು ನಿರ್ವಹಿಸಿದಾಗ, ನಾನು ತುಂಬಾ ಅಳಲು ಪ್ರಾರಂಭಿಸಿದೆ. ಏನೋ ನನ್ನನ್ನು ಸುತ್ತುವರೆದಿರುವಂತೆ ಭಾಸವಾಯಿತು. ನಾನು ಎಂದಿಗೂ ಅಂತಹ ನಮಾಝ್ ನಾನು ಎಂದಿಗೂ ನಿರ್ವಹಿಸಲಿಲ್ಲ. ಅವರು ತನಗಾಗಿ ಮತ್ತು ಹುತಾತ್ಮರ ಕುಟುಂಬಕ್ಕಾಗಿ ಪ್ರಾರ್ಥಿಸಲು ಕೇಳಿಕೊಂಡರು.

ಪ್ರಶ್ನೆಯಲ್ಲಿರುವ ವ್ಯಕ್ತಿಯ ಮಾತುಗಳನ್ನು ಕಿರ್ಗಿಸ್ತಾನ್ ಮುರಬ್ಬಿ ಗಿಯಾಸ್ ಬೇಗ್ ಸಾಹಿಬ್ ಅವರು ಉರ್ದುಗೆ ಅನುವಾದಿಸುತ್ತಿದ್ದರು. ಅವರು ಘಾನಾದ ಜಾಮಿಯಾ ಅಹ್ಮದಿಯಾ ಇಂಟರ್ನ್ಯಾಷನಲ್‌ನಿಂದ ಶಾಹಿದ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಈಗ ನೀವು ಇಲ್ಲಿಯೂ ಉರ್ದು ಕಲಿಯಬೇಕು ಎಂದು ಹುಝೂರ್ ಅನ್ವರ್(ಅತಬಿಅ) ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ) ಅವರ ಮಲ್ಫುಝಾತ್ ಅನ್ನು ಓದಿ. ಪ್ರತಿದಿನ ಕೆಲವು ಪುಟಗಳನ್ನು ಓದಿ ಮತ್ತು ನಿಮ್ಮ ಉರ್ದುವನ್ನು ಇನ್ನಷ್ಟು ಸುಧಾರಿಸಿ.

ಒಬ್ಬ ಸ್ನೇಹಿತ ಇಲ್ಯಾಸ್ ಸಾಹಿಬ್ ತನ್ನ ಮಗನಿಗೆ ಹೆಸರಿಡಲು ವಿನಂತಿಸಿದರು. ಇದರ ಬಗ್ಗೆ ಹುಝೂರ್ ಅನ್ವರ್(ಅತಬಿಅ) ಹೇಳಿದರು, "ಅವರಿಗೆ ಮಹ್ಮೂದ್ ಎಂದು ಹೆಸರಿಡಿ."

ಕಿರ್ಗಿಸ್ತಾನದ ಒಬ್ಬ ಸ್ನೇಹಿತ ಹುಝೂರ್ ಅನ್ವರ್(ಅತಬಿಅ) ಅವರಿಗೆ ನಾನು ಈ ಜಲ್ಸಕ್ಕೆ ಎರಡನೇ ಬಾರಿಗೆ ಹಾಜರಾಗಿದ್ದೇನೆ ಎಂದು ಹೇಳಿದರು. ನನ್ನ ಭಾವನೆಗಳು ತುಂಬಾ ತೀವ್ರವಾಗಿವೆ, ನಾನು ಅವುಗಳನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ. ನಾನು ಕಿರ್ಗಿಸ್ತಾನ್ ಜಮಾಅತ್ ಪರವಾಗಿ ನನ್ನ ಸಲಾಮ್ ಅನ್ನು ಸಲ್ಲಿಸುತ್ತೇನೆ ಮತ್ತು ನಿಮ್ಮ ಪ್ರಾರ್ಥನೆಗಳನ್ನು ಕೋರುತ್ತೇನೆ. ಹುಝೂರ್ ಅನ್ವರ್(ಅತಬಿಅ) ಹೇಳಿದರು, "ಅಲ್ಲಾಹನು ನಿಮ್ಮನ್ನು ಅನುಗ್ರಹಿಸಲಿ."

ನಂತರ, ಉಜ್ಬೇಕಿಸ್ತಾನದ ಒಬ್ಬ ಸ್ನೇಹಿತ ಜಮಾಅತ್‌ನ ಪರವಾಗಿ ಹುಝೂರ್ ಅನ್ವರ್(ಅತಬಿಅ) ಅವರಿಗೆ ತಮ್ಮ ಸಲಾಮನ್ನು ಸಲ್ಲಿಸಿದರು. ಅವರು ಆರು ತಿಂಗಳ ಹಿಂದೆ ಬೈಅತ್ ಅನ್ನು ಮಾಡಿರುವುದಾಗಿ ಹೇಳಿದರು. ಅವರೊಂದಿಗೆ, ಇತರ ಕೆಲವರು ಸಹ ವೀಸಾಗಳಿಗೆ ಅರ್ಜಿ ಸಲ್ಲಿಸಿದ್ದರು, ಆದರೆ ಅವರಿಗೆ ಇನ್ನೂ ವೀಸಾ ಪಡೆಯಲು ಸಾಧ್ಯವಾಗಿಲ್ಲ. ಇದರ ಬಗ್ಗೆ ಹುಝೂರ್ ಅನ್ವರ್(ಅತಬಿಅ) ಹೇಳಿದರು, "ಅಲ್ಲಾಹನು ನಿಮ್ಮನ್ನು ಅನುಗ್ರಹಿಸಲಿ".

ಚೀನಾದಲ್ಲಿ ಮುಸ್ಲಿಮರ ಸ್ಥಿತಿ ತುಂಬಾ ಕೆಟ್ಟದಾಗಿದೆ ಎಂದು ಮಹಿಳೆಯೊಬ್ಬರು ಕೇಳಿದರು. ಅವರು ಅಲ್ಲಿ ದಬ್ಬಾಳಿಕೆಯನ್ನು ಅನುಭವಿಸುತ್ತಲೇ ಇರುತ್ತಾರೆಯೇ?

ಹುಝೂರ್ ಅನ್ವರ್(ಅತಬಿಅ) ಹೇಳಿದರು, "ಎಲ್ಲಿ ದಬ್ಬಾಳಿಕೆ ಇದೆಯೋ, ಎಲ್ಲೆಡೆ ನಾವು ದಬ್ಬಾಳಿಕೆಯ ವಿರುದ್ಧ ಧ್ವನಿ ಎತ್ತುತ್ತೇವೆ." ಅವರು ಹೇಳಿದರು, ಎಲ್ಲರೂ ಪ್ರಾರ್ಥಿಸಿ. ಪ್ರಯತ್ನಗಳನ್ನು ಮಾಡಿ, ನಾಯಕರಿಗೆ ತಿಳಿಸಿ. ಒಂದು ರಾಷ್ಟ್ರವಾಗಿ, ರಾಜತಾಂತ್ರಿಕತೆಯ ಮೂಲಕ ಸಮಸ್ಯೆಗಳನ್ನು ಪರಿಹರಿಸಿ. ಇಂದಿನ ಪರಿಸ್ಥಿತಿಯಲ್ಲಿ ಇದೇ ಪರಿಹಾರ.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ಅಸ್‌ಹಾಬೆ ಕಹಫ್ (ಗುಹೆಯ ಸಹಚರ) ರಂತೆ ಬದುಕಿರಿ. ನಂತರ ನಿಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಿ. ಆದಾಗ್ಯೂ, ಪ್ರಾರ್ಥನೆಯೇ ಅತ್ಯಂತ ಮುಖ್ಯವಾದ ವಿಷಯ.

ಕೆಲವು ಸದಸ್ಯರಿಗೆ ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ಚಿತ್ರಗಳನ್ನು ತೆಗೆದುಕೊಳ್ಳುವ ಸೌಭಾಗ್ಯವಿತ್ತು.

* ಕಝಾಕಿಸ್ತಾನ್‌ನಿಂದ ಬಂದ ಅಹ್ಮದಿ ಸ್ನೇಹಿತ ಅಲಿ ಬೇಗ್ ಸಾಹಿಬ್ ಹೇಳುತ್ತಾರೆ: ಜಲ್ಸದಲ್ಲಿ ಭಾಗವಹಿಸುವುದು ತುಂಬಾ ಚೆನ್ನಾಗಿತ್ತು. ನಾನು ಬೈಅತ್ ಮಾಡಿದಾಗ, ನನಗೆ ವಿಭಿನ್ನ ಭಾವನೆ ಇತ್ತು ಮತ್ತು ನಾನು ಹುಝೂರ್ ಅನ್ವರ್(ಅತಬಿಅ) ಅವರನ್ನು ಭೇಟಿಯಾದಾಗ, ನನ್ನ ಎಲ್ಲಾ ಭಾವನೆಗಳು ಅವುಗಳ ಅಂತಿಮ ಹಂತವನ್ನು ತಲುಪಿದವು ಮತ್ತು ಜಲ್ಸಕ್ಕೆ ಬರುವ ನನ್ನ ಉದ್ದೇಶವು ಈಡೇರಿತು. ಜಲ್ಸಕ್ಕೆ ಹಾಜರಾಗುವ ಪರಿಣಾಮವು ತುಂಬಾ ದೊಡ್ಡದಾಗಿದ್ದು, ನನ್ನ ಹೆಂಡತಿ ಮತ್ತು ಮಕ್ಕಳು ಸಹ ನೀವು ಬದಲಾಗಿದ್ದೀರಿ ಎಂದು ಹೇಳುತ್ತಿದ್ದರು. ಮುಂದಿನ ವರ್ಷ ನನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ ಜಲ್ಸದಲ್ಲಿ ಭಾಗವಹಿಸಲು ನಾನು ಉದ್ದೇಶಿಸಿದ್ದೇನೆ, ಇನ್‌ಶಾಅಲ್ಲಾಹ್.

* ಕಝಾಕಿಸ್ತಾನ್‌ನಿಂದ ಬಂದ ಬೈಗೆಲ್ ಅಕಾನ್ ಸಾಹಿಬ್ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ: ಜರ್ಮನಿಯಲ್ಲಿ ಜಲ್ಸ ಸಾಲಾನವನ್ನು ಯಶಸ್ವಿಯಾಗಿ ನಡೆಸಿದ್ದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಎಲ್ಲವೂ ಅತ್ಯುತ್ತಮವಾಗಿತ್ತು. ಆಧುನಿಕ ಸಮಸ್ಯೆಗಳನ್ನು, ದಮನಿತರ ಸಮಸ್ಯೆಗಳನ್ನು ಒಳಗೊಂಡ ಇಸ್ಲಾಂ ತತ್ವಗಳ ಹುಝೂರ್ ಅನ್ವರ್(ಅತಬಿಅ) ಅವರ ವಿವರಣೆಯು ಅವರ ಆಯ್ಕೆ ಮತ್ತು ಆಧ್ಯಾತ್ಮಿಕ ವಾಕ್ಚಾತುರ್ಯದಲ್ಲಿ ಅದ್ಭುತವಾಗಿದೆ. ಅದೇ ರೀತಿ, ಭಾಗವಹಿಸಿದ ಎಲ್ಲಾ ಭಾಷಣಕಾರರು ಮತ್ತು ಅನುವಾದಕರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದರ ಜೊತೆಗೆ, "ಖಿಲಾಫತ್ ಮತ್ತು ಜಮಾಅತ್ ನಡುವಿನ ಪರಸ್ಪರ ಪ್ರೀತಿಯ ಸಂಬಂಧ" ಎಂಬ ವಿಷಯದ ಕುರಿತು ಭಾಷಣವು ಹೃದಯಸ್ಪರ್ಶಿ ಮತ್ತು ಸ್ಪರ್ಶದಾಯಕವಾಗಿತ್ತು.

* ಕಝಾಕಿಸ್ತಾನ್‌ನಿಂದ ಬಂದ ರಿಫತ್ ಟೋಕಮೋವ್ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ: ಈ ಜಲ್ಸವು ಉನ್ನತ ಮಟ್ಟದಲ್ಲಿ ನಡೆಯಿತು. ಭಾಷಣಗಳು ತುಂಬಾ ಚೆನ್ನಾಗಿದ್ದವು ಮತ್ತು ಅವುಗಳಲ್ಲಿ ಅಹ್ಮದಿಯ್ಯತ್‌ನ ಬೆಳಕಿನ ಮೂಲಕ, ನಮ್ಮ ಪ್ರಸ್ತುತ ಕಾಲಕ್ಕೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳು ಕಂಡುಬಂದವು. ಸಂಕ್ಷಿಪ್ತವಾಗಿ ಹೇಳುವುದಾದರೆ, ನಮ್ಮ ಪ್ರೀತಿಯ ಗುರುಗಳ ಧ್ವನಿಯನ್ನು ನಾವು ಕೇಳಿದ ಈ ಮೂರು ದಿನಗಳ ಸಂತೋಷ, ಹುಝೂರ್‌ರ ಭಾಷಣಗಳು ನಮ್ಮ ಆತ್ಮಗಳಿಗೆ ಮುಲಾಮು ಆಗಿರಲಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅನ್ವರ್(ಅತಬಿಅ)ರ ಎಲ್ಲಾ ಆಸೆಗಳನ್ನು ಮತ್ತು ಆಕಾಂಕ್ಷೆಗಳನ್ನು ಪೂರೈಸುವ ಸಾಮರ್ಥ್ಯವನ್ನು ನಮಗೆ ನೀಡಲಿ. ಸಯ್ಯದೀ! ಪ್ರೀತಿಯ ಹುಝೂರ್ ಅನ್ವರ್(ಅತಬಿಅ) ರು ಜಲ್ಸಕ್ಕೆ ವಿದಾಯ ಹೇಳಿದಾಗ, ಹುಝೂರ್ ಅನ್ವರ್(ಅತಬಿಅ)ರ ಅನುಗ್ರಹದಾಯಕ ಮುಖದಲ್ಲಿನ ಸುಂದರವಾದ ನಗುವನ್ನು ನೋಡಿ, ಈ ಜಲ್ಸದಲ್ಲಿ ಭಾಗವಹಿಸಲು ಯಜಮಾನನ ಗುಲಾಮ ಎಲ್ಲವನ್ನೂ ತ್ಯಾಗ ಮಾಡಬೇಕೆಂದು ನನ್ನ ಹೃದಯದಲ್ಲಿ ಬಯಕೆ ಉಂಟಾಯಿತು.

* ಕಝಾಕಿಸ್ತಾನದ ಯೆಸ್ಬೋಲ್ ಸಾಹಿಬ್ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ: ಜಲ್ಸ ಸಾಲಾನದಲ್ಲಿ ಭಾಗವಹಿಸಿದ ನಂತರ ನನಗಿರುವ ಭಾವನೆಗಳನ್ನು ನಾನು ವರ್ಣಿಸಲು ಸಾಧ್ಯವಿಲ್ಲ, ಮೇಲಾಗಿ, ನನ್ನ ವಿಶ್ವಾಸವು ತುಂಬಾ ದೃಢವಾಗಿದೆ ಎಂದು ನಾನು ಭಾವಿಸುತ್ತೇನೆ. ಹುಝೂರ್ ಅನ್ವರ್(ಅತಬಿಅ) ಅವರೊಂದಿಗಿನ ನನ್ನ ವೈಯಕ್ತಿಕ ಭೇಟಿಯ ಸಮಯದಲ್ಲಿ, ನಾನು ಅಳುತ್ತಿದ್ದೆ ಮತ್ತು ಏನನ್ನೂ ಹೇಳಲು ಸಾಧ್ಯವಾಗಲಿಲ್ಲ. ಸರ್ವಶಕ್ತನಾದ ಅಲ್ಲಾಹನು ಈ ಜಲ್ಸವನ್ನು ನಮಗೆಲ್ಲರಿಗೂ ತುಂಬಾ ಅನುಗ್ರಹದಾಯಕ ಮಾಡಲಿ.

(ಮುಂದುವರಿಯುವುದು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.